# ಅಧ್ಯಾಯ 16

# ಇತರ ಸಮಾಜ ಸೇವಾ ಸೌಲಭ್ಯಗಳು

ಶಿಕ್ಷಣ ಹಾಗೂ ವೈದ್ಯಕೀಯ ಸೇವೆಗಳೇ ಅಲ್ಲದೆ ಇನ್ನೂ ಅನೇಕ ಸಮಾಜ ಸೇವೆಗಳನ್ನು ಸರಕಾರವು ಕೈಗೊಳ್ಳುತ್ತಿದೆ. ವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವುದು ಈ ಕಾರ್ಯ ಚಟುವಟಿಕೆಗಳ ಮುಖ್ಯ ಉದ್ದೇಶವಾಗಿದೆ. ಸರಕಾರವೇ ಅಲ್ಲದೆ ಖಾಸಗೀ ಸಂಸ್ಥೆಗಳು ಇಂಥ ಚಟುವಟಿಕೆಗಳನ್ನು ನಡೆಸುತ್ತವೆ. ಈ ಹಿಂದಿನ ಅಧ್ಯಾಯಗಳಲ್ಲಿ ಶಿಕ್ಷಣ, ಆರೋಗ್ಯ ಮತ್ತು ರೋಗ ನಿವಾರಣಾ ಕಾರ್ಯ, ಈ ಕ್ಷೇತ್ರಗಳಲ್ಲಿನ ಸೇವಾ ಸೌಲಭ್ಯಗಳ ಬಗ್ಗೆ ಚರ್ಚಿಸಲಾಗಿದೆ. ಈ ಅಧ್ಯಾಯದಲ್ಲಿ ಸಮಾಜದ ಕಾರ್ಮಿಕ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರು, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ—ಇವೇ ಮುಂತಾದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಕೈಗೊಂಡಿರುವ ಕಾರ್ಯಕ್ರಮಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

## ಕಾರ್ಮಿಕರ ಕಲ್ಯಾಣ

ಜಿಲ್ಲೆಯಲ್ಲಿ ಕಾರ್ಮಿಕ ಕಲ್ಯಾಣದ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಕೈಗೊಳ್ಳಲು ಕಾರ್ಮಿಕ ಇಲಾಖೆಯ ಅಧೀನತೆಯಲ್ಲಿ ಕಾರ್ಮಿಕಾಧಿಕಾರಿಗಳು, ಚಿಕ್ಕಮಗಳೂರು ವಿಭಾಗದ ಸಹಾಯಕ ಕಾರ್ಮಿಕರ ಆಯುಕ್ತರ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವರು. ಇವರ ಸಹಾಯಕ್ಕಾಗಿ ಮಡಿಕೇರಿ, ಸೋಮವಾರಪೇಟೆ ಮತ್ತು ವೀರರಾಜಪೇಟೆಗಳಲ್ಲಿ ಹಿರಿಯ ಕಾರ್ಮಿಕ ನಿರೀಕ್ಷಕರಿರುವರು. ಇಲಾಖೆಯು ಈ ಮುಂದೆ ಸೂಚಿಸಿರುವ ಕೇಂದ್ರ ಮತ್ತು ರಾಜ್ಯ ಕಾರ್ಮಿಕ ಕಾಯ್ದೆಗಳು ಮತ್ತು ಅವುಗಳ ಅಧೀನದಲ್ಲಿ ಬರುವ ನಿಯಮಾವಳಿಗಳನ್ನು ಜಿಲ್ಲೆಯಲ್ಲಿ ಜಾರಿಗೆ ತಂದಿದೆ. 1923ರ ಕಾರ್ಮಿಕ ಪರಿಹಾರ ಅಧಿನಿಯಮ, 1926ರ ಕಾರ್ಮಿಕ ಸಂಘಗಳ ಅಧಿನಿಯಮ, 1936ರ ವೇತನ ಸಂದಾಯದ ಅಧಿನಿಯಮ, 1936ರ ಬಾಲ ಕಾರ್ಮಿಕರ ಉದ್ಯೋಗದ ಅಧಿನಿಯಮ, 1946ರ ಕೈಗಾರಿಕಾ ಉದ್ಯೋಗ (ಸ್ಥಾಯೀ ನಿಯಮಗಳ) ಅಧಿನಿಯಮ, 1947ರ ಕೈಗಾರಿಕಾ ವಿವಾದ ಅಧಿನಿಯಮ, 1948ರ ಕಾರ್ಖಾನೆಗಳ ಅಧಿನಿಯಮ, 1948ರ ಕನಿಷ್ಠ ವೇತನ ಅಧಿನಿಯಮ, 1951ರ ತೋಟಗಳ (ಪ್ಲಾಂಟೇಷನ್) ಕಾರ್ಮಿಕರ ಅಧಿನಿಯಮ, 1961ರ ಹೆರಿಗೆ ಸೌಲಭ್ಯ ಅಧಿನಿಯಮ, 1961ರ ಕರ್ನಾಟಕ ರಾಜ್ಯ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961ರ ಮೋಟಾರ್ ಸಾರಿಗೆ ಕಾರ್ಮಿಕರ ಅಧಿನಿಯಮ, 1963ರ ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಅಧಿನಿಯಮ, 1965ರ ಬೋನಸ್ ಪಾವತಿ ಅಧಿನಿಯಮ, 1965ರ ಕರ್ನಾಟಕ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, 1970ರ ಗುತ್ತಿಗೆ ಕೆಲಸಗಾರರ (ಕ್ರಮ ವ್ಯವಸ್ಥೆ ಮತ್ತು ನಿಷೇಧ) ಅಧಿನಿಯಮ, 1976ರ ಸಮಾನ ವೇತನ ಅಧಿನಿಯಮ ಮತ್ತು 1979ರ ಅಂತರ ರಾಜ್ಯ ವಲಸೆ ಬಂದ ಕೆಲಸಗಾರರ (ನೇಮಕಾತಿ ನಿಯಂತ್ರಣ ಮತ್ತು ಸೇವಾ ನಿಗದಿ) ಅಧಿನಿಯಮ.

1947ರ ಕೈಗಾರಿಕಾ ವಿವಾದಗಳ ಅಧಿನಿಯಮದ ಪ್ರಕಾರ ಇಲಾಖೆಯು ಕೈಗಾರಿಕೆಗಳಲ್ಲಿ ಉಂಟಾಗಬಹುದಾದ ಮುಷ್ಕರ, ಬೀಗಮುದ್ರೆಗಳು ಮತ್ತು ಹಂಗಾಮಿ ವಿಸರ್ಜನೆ ಇವೇ ಮುಂತಾದ ಕೈಗಾರಿಕಾ ಅಶಾಂತಿಗಳ ಸಂದರ್ಭದಲ್ಲಿ ತಕ್ಷಣ ಮಧ್ಯ ಪ್ರವೇಶಿಸಿ ಕಾರ್ಮಿಕರಿಗೆ ಸಿಗಬಹುದಾದ ಸವಲತ್ತುಗಳನ್ನು ಒದಗಿಸುವುದೇ ಅಲ್ಲದೆ ಕೈಗಾರಿಕಾ ಶಾಂತಿ ಮತ್ತು ಸೌಹಾರ್ದತೆಗಳನ್ನು ಕಾಪಾಡಲು ಪ್ರಯತ್ನಿಸುತ್ತದೆ. ಜಿಲ್ಲೆಯಲ್ಲಿ 1990–91ನೇ ಸಾಲಿನಲ್ಲಿ ಒಂದು ಮುಷ್ಕರವು ತಲೆದೋರಿ 17 ಕಾರ್ಮಿಕರು ಇದಕ್ಕೆ ಒಳಪಟ್ಟಿದ್ದು 384 ಮಾನವ ದಿನಗಳು ನಷ್ಟವಾದರೆ, 1989–90ನೇ ಸಾಲಿನಲ್ಲಿ ಎರಡು ಮುಷ್ಕರಗಳು ತಲೆದೋರಿ 687 ಕಾರ್ಮಿಕರು ಇದಕ್ಕೆ ಒಳಪಟ್ಟಿದ್ದು 5,218 ಮಾನವ ದಿನಗಳ ನಷ್ಟವೂ ಮತ್ತು 1988–89ನೇ ಸಾಲಿನಲ್ಲಿ ಮೂರು ಮುಷ್ಕರಗಳು ತಲೆದೋರಿ 1,018 ಕಾರ್ಮಿಕರು ಇದಕ್ಕೆ ಒಳಪಟ್ಟಿದ್ದು 13,516 ಮಾನವ ದಿನಗಳ ನಷ್ಟವಾಯಿತು. 1990–91ನೇ ಸಾಲಿನಲ್ಲಿ 21 ಕಾರ್ಮಿಕ ವಿವಾದಗಳು ತಲೆದೋರಿದರೆ, 1989–90 ಮತ್ತು 1988–89ನೇ ಸಾಲುಗಳಲ್ಲಿ ಕ್ರಮವಾಗಿ 13 ಮತ್ತು 30 ವಿವಾದಗಳು ತಲೆದೋರಿ ಇದರಲ್ಲಿ ಕ್ರಮವಾಗಿ 10 ಮತ್ತು 28 ವಿವಾದಗಳು ಇತ್ಯರ್ಥವಾದವು. 1991-92ರಲ್ಲಿ ಕಾರ್ಖಾನೆಗಳ ಮುಷ್ಕರ ಮತ್ತು ಬೀಗಮುದ್ರೆಗಳು ತಲೆದೋರಿಲ್ಲವೆಂದು ವರದಿಯಾಗಿದೆ. ಈ ವರ್ಷ (91–92) 14 ಕಾರ್ಮಿಕ ವಿವಾದಗಳು ಕಾಣಿಸಿಕೊಂಡು, ಇದರಲ್ಲಿ 12 ವಿವಾದಗಳು ಇತ್ಯರ್ಥವಾಗಿವೆ.

1948ರ ಕನಿಷ್ಠ ವೇತನಾ ಅಧಿನಿಯಮವು ಜಿಲ್ಲೆಯಲ್ಲಿ 1952ರಲ್ಲಿ ಜಾರಿಗೆ ಬಂದಿತು. ಈ ಕಾಯ್ದೆಯ ಮೇರೆಗೆ ರಾಜ್ಯ ಕನಿಷ್ಠ ವೇತನ ಸಲಹಾ ಸಮಿತಿಯ ಸಲಹೆಯನ್ನು ಪಡೆದು ಇಲಾಖೆಯು ಅಸಂಘಟಿತ ಕೃಷಿ ಮತ್ತು ಇತರ ಅನುಸೂಚಿತ ಉದ್ಯೋಗಗಳ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ನೀಡುವುದೇ ಅಲ್ಲದೆ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಅನುಷ್ಠಾನಗೊಳಿಸುವುದು. ಈ ಕಾಯ್ದೆಗೆ ಒಳಪಟ್ಟಂತೆ 1990–91ನೇ ಸಾಲಿನಲ್ಲಿ 6,937 ಉದ್ಯೋಗಗಳಿದ್ದು 1,91,271 ಕಾರ್ಮಿಕರೂ, 1989–90 ಮತ್ತು 1988–89ರಲ್ಲಿ ಕ್ರಮವಾಗಿ 4,216 ಮತ್ತು 4,183 ಉದ್ಯೋಗಗಳಿದ್ದು ಈ ಎರಡು ವರ್ಷಗಳಲ್ಲಿ ಕ್ರಮವಾಗಿ 1,89,849 ಮತ್ತು 1,80,543 ಕಾರ್ಮಿಕರಿದ್ದರು. 1991–92ರ ವೇಳೆಗೆ 5,433 ಉದ್ಯೋಗಗಳಿದ್ದು 1,98,942 ಕಾರ್ಮಿಕರು ಕೆಲಸ ಮಾಡುತ್ತಿದ್ದರು.

1990–91ರಲ್ಲಿ 44 ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳೂ ನೋಂದಾಯಿಸಲ್ಪಟ್ಟು ಇದರಿಂದ 260 ರೂ. ಸಂದಾಯವಾದರೆ, 1989–90 ಮತ್ತು 1988–89ರಲ್ಲಿ ಕ್ರಮವಾಗಿ 38 ಮತ್ತು 29 ಅಂಗಡಿಗಳೂ ಮತ್ತು ವಾಣಿಜ್ಯ ಸಂಸ್ಥೆಗಳೂ ನೋಂದಾಯಿಸಲ್ಪಟ್ಟು ಇದರಿಂದ ಈ ಎರಡು ವರ್ಷಗಳಲ್ಲಿ ಕ್ರಮವಾಗಿ 420 ರೂ. ಮತ್ತು 275 ರೂ. ಹಣ ಸಂದಾಯವಾಯಿತು ಮತ್ತು ಈ ಮೂರು ವರ್ಷಗಳಲ್ಲಿ ಕ್ರಮವಾಗಿ 1,845, 1,990 ಮತ್ತು 1,914 ಅಂಗಡಿಗಳೂ ಮತ್ತು ವಾಣಿಜ್ಯ ಸಂಸ್ಥೆಗಳೂ ಇದ್ದು ಇವುಗಳಲ್ಲಿ ಕ್ರಮ 3,140, 1,775 ಮತ್ತು 1,728 ಕಾರ್ಮಿಕರಿದ್ದರು. 1991-92 ರಲ್ಲಿ 1,842 ಇಂಥ ಸಂಸ್ಥೆಗಳಿದ್ದು ಇವುಗಳಲ್ಲಿನ ಕಾರ್ಮಿಕರ ಸಂಖ್ಯೆ 3,704.

1923ರ ಕಾರ್ಮಿಕ ಪರಿಹಾರ ಕಾಯ್ದೆಯ ಪ್ರಕಾರ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಆಕಸ್ಮಿಕ ದುರ್ಮರಣ ಅಥವಾ ಅಂಗಹೀನತೆಗೊಳಗಾದವರಿಗೆ ಪರಹಾರ ಧನವನ್ನು ನೀಡಲಾಗುವುದು. 1990ನೇ ವರ್ಷದಲ್ಲಿ 15 ಕಾರ್ಮಿಕರು ಆಕಸ್ಮಿಕ ದುರ್ಮರಣಕ್ಕೂ, 42 ಕಾರ್ಮಿಕರು ಶಾಶ್ವತ ಅಂಗಹೀನತೆಗೂ ಮತ್ತು ಮೂವರು ತಾತ್ಕಾಲಿಕ ಅಂಗಹೀನತಗೂ ಒಳಗಾದರೆ 1989ನೇ ವರ್ಷದಲ್ಲಿ 12 ಕಾರ್ಮಿಕರು ಆಕಸ್ಮಿಕ ದುರ್ಮರಣಕ್ಕೂ, 43 ಕಾರ್ಮಿಕರು ಶಾಶ್ವತ ಅಂಗಹೀನತೆಗೂ ಮತ್ತು ಮೂವರು ತಾತ್ಕಾಲಿಕ ಅಂಗಹೀನತೆಗೂ ಒಳಗಾಗಿದ್ದು ಈ ಎರಡು ವರ್ಷಗಳಲ್ಲಿ ಕ್ರಮವಾಗಿ 5,03,329 ರೂ.ಮತ್ತು 2,38,992 ರೂ.ಗಳನ್ನು ಪರಿಹಾರ ಧನವಾಗಿ ವಿತರಣೆ ಮಾಡಲಾಯಿತು. 1991-92 ರಲ್ಲಿ ನಾಲ್ಕು ಕಾರ್ಮಿಕರು ಆಕಸ್ಮಿಕ ದುರ್ಮರಣಕ್ಕೂ, 19 ಕಾರ್ಮಿಕರು ಶಾಶ್ವತ ಅಂಗಹೀನತೆಗೂ ಮತ್ತು ಮೂವರು ತಾತ್ಕಾಲಿಕ ಅಂಗಹೀನತೆಗೂ ಒಳಗಾಗಿದ್ದು ಇದಕ್ಕಾಗಿ 1,43,626 ರೂ.ಗಳನ್ನು ಪರಿಹಾರವಾಗಿ ನೀಡಲಾಗಿದೆ. ತೋಟಗಳ (ಪ್ಲಾಂಟೇಶನ್ಸ್) ಎಲ್ಲ ವಸತಿ ಕಾರ್ಮಿಕರಿಗೂ ತೋಟಗಳ ಮುಖ್ಯ ನಿರೀಕ್ಷಕರು ನಿಯಮಿಸಿರುವ ನಮೂನೆಯ ಪ್ರಕಾರ ಉಚಿತ ವಸತಿ ಸೌಲಭ್ಯವನ್ನೊದಗಿಸಲಾಗಿದೆ.

### ಕಾರ್ಮಿಕ ಕಲ್ಯಾಣ ಮಂಡಳಿ

ಕಾರ್ಮಿಕ ಕಲ್ಯಾಣ ಮಂಡಳಿಯು ಕರ್ನಾಟಕ ಕಾರ್ಮಿಕ ಕಲ್ಯಾಣ ಅಧಿನಿಯಮ 1965ರ ಅನುಸಾರ ಅನೇಕ ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿದೆ. ಪ್ರತೀ ಕಾರ್ಮಿಕರಿಂದ ಒಂದು ರೂಪಾಯಿಯಂತೆಯೂ, ಮಾಲಿಕರಿಂದ ಪ್ರತೀ

ಕಾರ್ಮಿಕರಿಗೆ ಎರಡು ರೂಪಾಯಿಯಂತೆಯೂ ಮತ್ತು ಸರ್ಕಾರದಿಂದ ಪ್ರತೀ ಕಾರ್ಮಿಕನಿಗೆ ಒಂದು ರೂಪಾಯಿಯಂತೆಯೂ ಪ್ರತೀ ವರ್ಷವೂ ಕಾರ್ಮಿಕ ಕಲ್ಯಾಣ ನಿಧಿಗಾಗಿ ಸಂಗ್ರಹಿಸಲಾಗುವುದು. ಮಂಡಳಿಯು ಕಾರ್ಮಿಕ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಿ ಕಾರ್ಮಿಕರಿಗೆ ವಾಚನಾಲಯ, ಮನರಂಜನೆ, ಕ್ರೀಡಾ ಚಟುವಟಿಕೆಗಳು ಇವೇ ಮುಂತಾದ ಸೌಲಭ್ಯಗಳನ್ನೊದಗಿಸುವುದೇ ಅಲ್ಲದೆ, ವಿಶ್ರಾಂತಿ ಧಾಮಗಳನ್ನು ಸ್ಥಾಪಿಸುವುದು, ಪ್ರವಾಸ ಮತ್ತು ವಿಹಾರಗಳನ್ನು ಕೈಗೊಳ್ಳುವುದು ಹಾಗೂ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡುವುದು ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಕೊಡಗು ಜಿಲ್ಲೆಯ ವೀರರಾಜಪೇಟೆ ತಾಲೂಕಿನ ಸಿದ್ದಾಪುರದಲ್ಲಿ ಕಾರ್ಮಿಕ ಕಲ್ಯಾಣ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ 1990–91ನೇ ಸಾಲಿನಲ್ಲಿ ಎಂಟು ವಿದ್ಯಾರ್ಥಿಗಳು, ವಿದ್ಯಾರ್ಥಿ ವೇತನದ ಸೌಲಭ್ಯ ಪಡೆದಿದ್ದು ಇವಕ್ಕಾಗಿ 5,520 ರೂ. ವೆಚ್ಚ ಮಾಡಲಾಗಿದ್ದು, 1991–92ನೇ ಸಾಲಿನಲ್ಲಿ 5 ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಪಡೆದಿದ್ದು, ಇದಕ್ಕಾಗಿ 3,040 ರೂ.ನ್ನು ವೆಚ್ಚ ಮಾಡಲಾಗಿದೆ.

ಕಾರ್ಮಿಕ ಇಲಾಖೆಯ ಸಿಬ್ಬಂದಿಗಳು ತೋಟಗಳ ಕಾರ್ಮಿಕರಿಗೆ ಆಡಳಿತ ವರ್ಗವು ನೀಡಿರುವ ಸೌಲಭ್ಯಗಳ ತನಿಖೆ ನಡೆಸಲು ಆಗಾಗ್ಗೆ ವೈಯಕ್ತಿಕವಾಗಿ ಕಾರ್ಮಿಕರನ್ನು ಭೇಟಿ ಮಾಡಿ ಅವರ ಕಷ್ಟ ಸುಖಗಳನ್ನು ವಿಚಾರಿಸುವುದೇ ಅಲ್ಲದೆ ಕಾರ್ಮಿಕರು ತಮ್ಮ ಹಕ್ಕುಗಳ ಜೊತೆಗೆ ಜವಾಬ್ದಾರಿಯನ್ನು ಅರಿತು ಅವರ ಆಡಳಿತ ವರ್ಗದೊಡನೆ ವಿಶ್ವಾಸವನ್ನು ಗಳಿಸಿ ಉತ್ತಮ ಬಾಳ್ವೆಯನ್ನು ನಡೆಸಲು ಸೂಕ್ತ ತಿಳುವಳಿಕೆಯನ್ನು ನೀಡುವುದನ್ನು ನಿರೀಕ್ಷಿಸಲಾಗಿದೆ. ಮತ್ತು ಲೋಪದೋಷವಿರುವ ಕಡೆ ಆಡಳಿತ ವರ್ಗಕ್ಕೂ ಸಲಹೆಗಳನ್ನು ಸೂಚಿಸುವ ಅಧಿಕಾರ ಹೊಂದಿದ್ದಾರೆ. ಇದರಿಂದ ಆಡಳಿತ ವರ್ಗವು ಕಾರ್ಮಿಕರ ಜೀವನ ಸ್ಥಿತಿಯನ್ನು ಉತ್ತಮ ಪಡಿಸುವುದು, ತಮ್ಮ ಜವಾಬ್ದಾರಿಯೆಂದು ಅರಿತು ಕಾರ್ಮಿಕರಿಗೆ ಮನರಂಜನಾ ಸೌಲಭ್ಯಗಳು, ವೈದ್ಯಕೀಯ ಸೌಲಭ್ಯಗಳು, ಮಕ್ಕಳ ಶೈಕ್ಷಣಿಕಾ ಸೌಲಭ್ಯಗಳು, ಶಿಶುಪಾಲನಾ ಕೇಂದ್ರಗಳು, ಇವೇ ಮುಂತಾದ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ.

### ಕಾರ್ಮಿಕ ಸಂಘಟನಾ ಚಳುವಳಿ

ಜಿಲ್ಲೆಯಲ್ಲಿ ದೊಡ್ಡ ಉದ್ದಿಮೆಗಳಿಲ್ಲದಿರುವುದರಿಂದ ಮತ್ತು ತೋಟಗಳು (ಪ್ಲಾಂಟೇಷನ್) ಉದ್ದಿಮೆಯೇ ಪ್ರಮುಖವಾಗಿರುವುದರಿಂದ ಅವಿದ್ಯಾವಂತರಾದ ಹಾಗೂ ಪರವೂರುಗಳಿಂದ ಬಂದ ಕಾರ್ಮಿಕರ ಸಂಘಟನೆಯು ಕಷ್ಟಸಾಧ್ಯವಾಗಿದೆಯೆಂದೂ ಮತ್ತು ಅನೇಕ ಕಡೆಗಳಲ್ಲಿ ಶ್ರೀಮಂತರ ದಬ್ಬಾಳಿಕೆಯಿಂದ ಕಾರ್ಮಿಕ ಸಂಘಟನೆಯು ನಿಷ್ಕ್ರಿಯಗೊಂಡಿದೆ ಎಂದೂ ಕೆಲವು ಅಭಿಪ್ರಾಯಗಳಿವೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಾತ್ರ ಕಾರ್ಮಿಕ ಸಂಘಟನೆಗಳು ದೃಢತೆಯಿಂದ ಕಾರ್ಯಾರಂಭ ಮಾಡಿದವು. ಕೊಡಗು ಜಿಲ್ಲಾ ತೋಟಗಳ ಕಾರ್ಮಿಕರ ಸಂಘವು 1957ರಲ್ಲಿ ನೋಂದಣಿಯಾದ ಪ್ರಥಮ ಸಂಘಟನೆ. ಮುಂದಿನ ಎಲ್ಲ ಸಂಘಗಳೂ 1961ರ ನಂತರ ಅಸ್ತಿತ್ವಕ್ಕೆ ಬಂದವು. ಆದರೂ ಜಿಲ್ಲೆಯಲ್ಲಿ ಮೋಟಾರು ಕಾರ್ಮಿಕರ ಸಂಘ, ಸಹಕಾರಿ ಸಂಸ್ಥೆಗಳ ಸಂಘ, ಆಟೋವಾಹನ ಚಾಲಕರ ಸಂಘ, ತೋಟಗಳ ಮತ್ತು ಸಾಮಾನ್ಯ ಕೆಲಸಗಾರರ ಸಂಘ ಇವೇ ಮುಂತಾದ ಕಾರ್ಮಿಕ ಸಂಘಗಳು ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಯ ನಿರ್ವಹಿಸುತ್ತಿವೆ. 1990–91ನೇ ಸಾಲಿನಲ್ಲಿ ಈ ಮುಂದೆ ಹೇಳಿರುವ ಕಾರ್ಮಿಕ ಸಂಘಗಳು ಕಾರ್ಯನಿರ್ವಹಿಸುತ್ತಿದ್ದವು. (ಕಂಸದಲ್ಲಿರುವುದು ಸದಸ್ಯರ ಸಂಖ್ಯೆ). ಕೂರ್ಗ್ ಡಿಸ್ಟ್ರಿಕ್ಟ್ ಎಸ್ಟೇಟ್ ವರ್ಕರ್ಸ್ ಯೂನಿಯನ್, ಮಡಿಕೇರಿ (1,010), ಕೂರ್ಗ್‌ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನ್, ವೀರರಾಜಪೇಟೆ (1,931), ಕೂರ್ಗ್ ಲೋಕಲ್ ಬಾಡೀಸ್ ಎಂಪ್ಲಾಯೀಸ್ ಯೂನಿಯನ್, ಮಾಕುಟ್ಟ (35), ಕೂರ್ಗ್ ಡಿಸ್ಟ್ರಿಕ್ಟ್ ಪ್ಲಾಂಟೇಷನ್ ಅಂಡ್ ಜನರಲ್ ಲೇಬರ್ ಯೂನಿಯನ್, ಪೊಲ್ಲಿಬೆಟ್ಟ (236), ದಿ ಗವರ್ನ್‌ಮೆಂಟ್ ಸೆಂಟ್ರಲ್ ವರ್ಕ್‌ಶಾಪ್ ಎಂಪ್ಲಾಯೀಸ್ ಯೂನಿಯನ್, ಮಡಿಕೇರಿ (31), ಮೂರ್ಕಲ್ ಸಾಮಿಲ್ಸ್ ವರ್ಕರ್ಸ್ ಯೂನಿಯನ್, ಮೂರ್ಕಲ್ (32), ಕೂರ್ಗ್ ಡಿಸ್ಟ್ರಿಕ್ಟ್ ಕೋ–ಅಪರೇಟಿವ್ ಸೆಂಟ್ರಲ್ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್, ಮಡಿಕೇರಿ (143), ಕೂರ್ಗ್ ಲೋಕಲ್ ಬಾಡೀಸ್ ಎಂಪ್ಲಾಯೀಸ್ ಯೂನಿಯನ್, ವೀರರಾಜಪೇಟೆ (57), ದಿ ಕೂರ್ಗ್ ಕಾಫಿ ಗ್ರೋಯರ್ಸ್ ಕೋ–ಅಪರೇಟಿವ್ ಸೊಸೈಟಿ ಎಂಪ್ಲಾಯೀಸ್ ಯೂನಿಯನ್, ಮಡಿಕೇರಿ (141), ಕೊಡಗು ಡಿಸ್ಟ್ರಿಕ್ಟ್ ಸ್ಮಾಲ್ ಗ್ರೋವರ್ಸ್ ಅಸೋಸಿಯೇಷನ್, ಸಿದ್ದಾಪುರ (1,670), ಹಾರಂಗಿ ಪ್ರಾಜೆಕ್ಟ್ ಎನ್.ಟಿ.ಆರ್. ವರ್ಕರ್ಸ್ ಅಸೋಸಿಯೇಷನ್, ಹುಲುಗುಂದ (184), ಕೂರ್ಗ್ ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್ ಎಂಪ್ಲಾಯೀಸ್ ಯೂನಿಯನ್, ವೀರರಾಜಪೇಟೆ (25), ಕೊಡಗು ಡಿಸ್ಟ್ರಿಕ್ಟ್ ಪ್ಲಾಂಟೇಷನ್ ಅಂಡ್ ಜನರಲ್ ವರ್ಕರ್ಸ್ ಯೂನಿಯನ್, ದೇವಾಪುರ (135), ಕರ್ನಾಟಕ ರಾಜ್ಯ ಜನರಲ್ ವರ್ಕರ್ಸ್ ಅಸೋಸಿಯೇಷನ್ ಸಿದ್ದಾಪುರ (1992), ಕರ್ನಾಟಕ ಪ್ಲಾಂಟೇಷನ್ ಅಂಡ್ ಜನರಲ್ ಲೇಬರ್ ಟ್ರೇಡ್ ಯೂನಿಯನ್, ಚೆಟ್ಟಳ್ಳಿ

(ಲಭ್ಯವಿಲ್ಲ), ಕೂಡಿಗೆ ಡೈರಿ ಎಂಪ್ಲಾಯೀಸ್ ಯೂನಿಯನ್ ಕೂಡಿಗೆ (54), ಕೊಡಗು ಪ್ಲಾಂಟೇಷನ್ ಅಂಡ್ ಅದರ್ ಅಗ್ರಿಕಲ್ಚರಲ್ ವರ್ಕರ್ಸ್ ಯೂನಿಯನ್, ಪೊಲ್ಲಿಬೆಟ್ಟ (ಲಭ್ಯವಿಲ್ಲ), ದಿ ಸೋಮವಾರಪೇಟೆ ತಾಲೂಕ್ ಕೋ ಆಪರೇಟಿವ್ ಇನ್‌ಸ್ಟಿಟ್ಯೂಷನಲ್ ಎಂಪ್ಲಾಯೀಸ್ ಯೂನಿಯನ್, ಸೋಮವಾರಪೇಟೆ (ಲಭ್ಯವಿಲ್ಲ), ಕೊಡಗು ಡಿಸ್ಟ್ರಿಕ್ಟ್ ಬೀ ಕೀಪಿಂಗ್ ಪ್ರೋಗ್ರೆಸಿವ್ ಕೋ ಆಪರೇಟಿವ್ ಸೊಸೈಟಿ ಎಂಪ್ಲಾಯೀಸ್ ಯೂನಿಯನ್, ಭಾಗಮಂಡಲ (ಲಭ್ಯವಿಲ್ಲ), ಎನ್.ಎ.ಎಫ್.ಇ.ಡಿ. ಪ್ರೋಸೆಸ್ಡ್ ಫುಡ್ಸ್ ಎಂಪ್ಲಾಯೀಸ್ ಯೂನಿಯನ್, ಕುಶಾಲನಗರ (10), ಕೂರ್ಗ್ ಕಾರ್ಡಮಮ್ ಕೋ ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಎಂಪ್ಲಾಯೀಸ್ ಯೂನಿಯನ್, ಮಡಿಕೇರಿ (31), ಕೊಡಗು ಮೋಟಾರ್ ವರ್ಕರ್ಸ್ ಯೂನಿಯನ್, ವೀರರಾಜಪೇಟೆ(154) ಸೋಮವಾರಪೇಟೆ ತಾಲೂಕ್ ಮೇಸನ್ ವರ್ಕರ್ಸ್ ಯೂನಿಯನ್, ಸೋಮವಾರಪೇಟೆ (113), ಸಂಜಯ್‌ಗಾಂಧಿ ಮೆಮೋರಿಯಲ್ ಪ್ಲಾಂಟೇಷನ್ ಲೇಬರ್ ಅಂಡ್ ಜನರಲ್ ವರ್ಕರ್ಸ್ ಕಾಂಗ್ರೆಸ್ ಆಫ್ ಕರ್ನಾಟಕ, ಸಿದ್ದಾಪುರ (ಲಭ್ಯವಿಲ್ಲ), ಕೊಡಗು ಡಿಸ್ಟ್ರಿಕ್ಟ್ ಪ್ರೆಸ್ ವರ್ಕರ್ಸ್ ಯೂನಿಯನ್, ಮಡಿಕೇರಿ (60), ಕಾವೇರಿ ಕಾರ್ಮಿಕ ಸಂಘ, ಸೋಮವಾರಪೇಟೆ (20), ಮಡಿಕೇರಿ ಆಟೋ ಚಾಲಕರ ಸಂಘ, ಮಡಿಕೇರಿ (90), ಕೂರ್ಗ್ ಡಿಸ್ಟ್ರಿಕ್ಟ್ ಹೋಟೆಲ್ ಅಂಡ್ ಷಾಪ್ ವರ್ಕರ್ಸ್ ಯೂನಿಯನ್, ವೀರರಾಜಪೇಟೆ (63), ಕರ್ನಾಟಕ ಸ್ಟೇಟ್ ಪ್ಲಾಂಟೇಷನ್ ನಾನ್ ಸ್ಟಾಫ್ಸ್ ಯೂನಿಯನ್, ವೀರರಾಜಪೇಟೆ (ಲಭ್ಯವಿಲ್ಲ), ಸೋಮವಾರಪೇಟೆ ತಾಲೂಕ್ ಶ್ರೀ ವಿನಾಯಕ ಲೋಡರ್ಸ್ ಕೆಲಸಗಾರರ ಸಂಘ, ಸೋಮವಾರಪೇಟೆ (ಲಭ್ಯವಿಲ್ಲ), ಕೊಡಗು ಜಿಲ್ಲಾ ಲಾರಿ, ಬಸ್ಸು ಮತ್ತು ಮದ್ಯದ ವಾಹನ ಕೆಲಸಗಾರರ ಸಂಘ, ಮಡಿಕೇರಿ (ಲಭ್ಯವಿಲ್ಲ), ಸೋಮವಾರಪೇಟೆ ಟೌನ್ ಮೋಟಾರ್ ವರ್ಕರ್ಸ್ ಯೂನಿಯನ್, ಸೋಮವಾರಪೇಟೆ (ಲಭ್ಯವಿಲ್ಲ), ಕೂರ್ಗ್ ಡಿಸ್ಟ್ರಿಕ್ಟ್ ಪ್ಲಾಂಟೇಷನ್ ಅಂಡ್ ಮೋಟಾರ್ ಎಂಪ್ಲಾಯೀಸ್ ಯೂನಿಯನ್, ವೀರರಾಜಪೇಟೆ (ಲಭ್ಯವಿಲ್ಲ), ಕೊಡಗು ಡಿಸ್ಟ್ರಿಕ್ಟ್ ಪ್ಲಾಂಟೇಷನ್ ಅಂಡ್ ಜನರಲ್ ವರ್ಕರ್ಸ್ ಅಸೋಸಿಯೇಷನ್, ಗೋಣಿಕೊಪ್ಪಲು (ಲಭ್ಯವಿಲ್ಲ), ಶ್ರೀ ನವೋದಯ ಕಾರ್ಮಿಕರ ಸಂಘ, ಕೂಡಿಗೆ (ಲಭ್ಯವಿಲ್ಲ), ಲೋಕೋಪಯೋಗಿ ಮತ್ತು ನೀರಾವರಿ ದಿನಗೂಲಿ ಕಾರ್ಮಿಕರ ಸಂಘ, ಮಡಿಕೇರಿ (50), ಸರ್ಕಾರಿ ಇಲಾಖೆಗಳ ದಿನಗೂಲಿ ನೌಕರರ ಒಕ್ಕೂಟ, ಮಡಿಕೇರಿ (80), ಕೊಡಗು ಮತ್ತು ಚಿಕ್ಕಮಗಳೂರು ಪ್ಲಾಂಟೇಷನ್ ಮತ್ತು ಜನರಲ್ ಮಜ್ದೂರ್ ಸಂಘ, ಸೋಮವಾರಪೇಟೆ (200), ಬನಶಂಕರಿ ಕಾರ್ಮಿಕರ ಸಂಘ, ಹೆಬ್ಬಾಲೆ (150), ಅರಾಕ್ ವೆಂಡರ್ಸ್ ಯೂನಿಯನ್, ಸೋಮವಾರಪೇಟೆ (40), ಕೂಡಲೂರು ಕಾಫಿ ಸಂಸ್ಕರಣ ಕಾರ್ಮಿಕರ ಸಂಘ, ಕೂಡಲೂರು (105), ಶಕ್ತಿ ಕಾರ್ಮಿಕರ ಸಂಘ, ಅಬ್ದೂರ ಕಟ್ಟೆ (40), ಕರ್ನಾಟಕ ಜನರಲ್ ಕೂಲಿ ಕಾರ್ಮಿಕರ ಸಂಘ, ಗುಡುಗಳಲೆ (40), ಡ್ರೈವರ್ಸ್ ಯೂನಿಯನ್, ಸಿದ್ದಾಪುರ (120), ಲಿಕರ್ ವೆಂಡರ್ಸ್ ಅಂಡ್ ವರ್ಕರ್ಸ್ ಅಸೋಸಿಯೇಷನ್, ಮಡಿಕೇರಿ (60), ಕಾವೇರಿ ಲೇಬರ್ ಯೂನಿಯನ್, ಕಾಟಕ್ಕೇರಿ ವಿಲೇಜ್ (80), ವೀರರಾಜಪೇಟೆ ತಾಲೂಕ್ ಅರ್ರ್ಯಾಕ್ ವೆಂಡರ್ಸ್ ಯೂನಿಯನ್, ವೀರರಾಜಪೇಟೆ (60), ಕೊಡಗು ಮೀಟರ್ಸ್ ಎಂಪ್ಲಾಯೀಸ್ ಅಸೋಸಿಯೇಷನ್, ಅರ್ವತ್ತೊಕ್ಕಲು (84), ಮಡಿಕೇರಿ ಪ್ಲಾಂಟೇಷನ್ ಅಂಡ್ ಜನರಲ್ ವರ್ಕರ್ಸ್ ಯೂನಿಯನ್, ಮಡಿಕೇರಿ (60) ಮತ್ತು ಸರ್ಕಾರಿ ಶಾಖಾ ಮುದ್ರಣಾಲಯ ನೌಕರರ ಸಂಘ, ಮಡಿಕೇರಿ (20), ಸಂಘದ ಸದಸ್ಯರ ಸಂಖ್ಯೆ ಖಚಿತವಾಗಿ ತಿಳಿಯದೇ ಇದ್ದಾಗ ಆವರಣದಲ್ಲಿ ಲಭ್ಯವಿಲ್ಲ ಎಂದು ಬರೆದಿದೆ.

ಆದರೂ ತೋಟಗಳಲ್ಲಿ ಕೆಲಸಮಾಡುವ ನೌಕರರು ಅವಿದ್ಯಾವಂತರೂ ಗ್ರಾಮೀಣ ಪ್ರದೇಶಗಳಲ್ಲಿ ಇರುವವರೂ ಆದುದರಿಂದ ಸರಕಾರದ ಕಾರ್ಮಿಕ ಕಲ್ಯಾಣಕಾರಿ ಕ್ರಮಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ ಬರುತ್ತಿಲ್ಲ, ಕನಿಷ್ಠ ವೇತನ, ಭವಿಷ್ಯನಿಧಿ ಮುಂತಾದ ಅಧಿನಿಯಮಗಳು ಸಮಗ್ರವಾಗಿ ಜಾರಿಯಲ್ಲಿಲ್ಲ ಎಂಬ ಅಭಿಪ್ರಾಯವನ್ನು ಕಾರ್ಮಿಕ ಸಂಘಟನೆಗಳು ನೀಡಿವೆ.

## ಪರಿಶಿಷ್ಟ ಜಾತಿಗಳ ಕಲ್ಯಾಣ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗ ಹಾಗೂ ಇತರ ಹಿಂದುಳಿದ ವರ್ಗಗಳ ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವ ಅನೇಕ ಯತ್ನಗಳು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಆರಂಭವಾಯಿತು. 1906ರಲ್ಲಿ ಕೊಡಗಿನ ಯೆರವರು ಮತ್ತು ಕಾಡು ಕುರುಬರ ಮಕ್ಕಳಿಗಾಗಿ ತಿತಿಮತಿಯ ಬುಡಕಟ್ಟು ಜನಾಂಗದ ಪ್ರದೇಶದಲ್ಲಿ ಒಂದು ಶಾಲೆಯನ್ನು ತೆರೆದು, ಸಾಕಷ್ಟು ವಿದ್ಯಾರ್ಥಿಗಳು ಇರದಿದ್ದ ಕಾರಣದಿಂದಾಗಿ ಆರಂಭಿಸಿದ ಮೂರು ವರ್ಷದಲ್ಲೇ ಶಾಲೆಯನ್ನು ಮುಚ್ಚಲಾಯಿತು. ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನ ಕ್ಷೇತ್ರಗಳ ಏರ್ಪಾಡಿನ ಸರ್ಕಾರದ ದ್ವಂದ್ವನೀತಿಯನ್ನು ಪ್ರತಿಭಟಿಸಿ ಮಹಾತ್ಮಾಗಾಂಧಿಯವರು 1932ರಲ್ಲಿ ಸೆರೆಮನೆ

ಯಲ್ಲಿ ಉಪವಾಸ ವ್ರತ ಕೈಗೊಂಡ ಸಮಯದಲ್ಲಿ ಕೊಡಗಿನ ಅನೇಕ ಕಡೆಗಳಲ್ಲಿ ಸಾಮೂಹಿಕ ಉಪವಾಸ ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸಿ ಜನರು ತಮ್ಮ ಐಕ್ಯತಾ ಮನೋಭಾವವನ್ನು ತೋರಿಸಿದರು. ಇದೇ ವರ್ಷದಲ್ಲಿ ಜಿಲ್ಲೆಯ ಅನೇಕ ಕಡೆಗಳಲ್ಲಿ ಅಸ್ಪೃಶ್ಯ ಜಾತಿಯವರನ್ನು ಒಳಗೊಂಡ ಸಾಮೂಹಿಕ ಭೋಜನ ಮತ್ತು ಸಾರ್ವಜನಿಕ ಚಹಾಕೂಟಗಳು ನಡೆದುದೇ ಅಲ್ಲದೆ, ದೇವಸ್ಥಾನಗಳನ್ನು ಪರಿಶಿಷ್ಟ ಜಾತಿ ಜನರಿಗೆ ತೆರೆದಿಡುವ ಚಳುವಳಿಯೂ ಸಹ ಪ್ರಾರಂಭವಾಯಿತು. ಪ್ರಥಮವಾಗಿ ಚೆನ್ನಯ್ಯನಕೋಟೆಯಲ್ಲಿರುವ ಕೆಂಡದ ಬಸವೇಶ್ವರ ದೇವಸ್ಥಾನವು ದಿನಾಂಕ 17-10-1932 ರಂದು ಪರಿಶಿಷ್ಟ ಜಾತಿ ಜನರಿಗೆ ತೆರೆಯಲ್ಪಟ್ಟಿತು. ಅದೇ ವರ್ಷದಲ್ಲಿ ವೀರರಾಜಪೇಟೆಯ ಪ್ರೌಢಶಾಲೆಯಲ್ಲಿ ನಡೆದ ಶಾರದಾಪೂಜೆಯಲ್ಲಿ ಪರಿಶಿಷ್ಟಜಾತಿ ವಿದ್ಯಾರ್ಥಿಯೇ ಪೂಜೆ ನಡೆಸಿದನು. ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವ ಉದ್ದೇಶದ ಗಾಂಧೀಜಿಯವರ ಉಪವಾಸದ ಪ್ರತಿಕ್ರಿಯೆಯು ಕೊಡಗಿನಲ್ಲೂ ಕಂಡುಬಂತು. ಕೊಡಗಿನ ವಿವಿಧ ಪಂಥಕ್ಷೇತ್ರಗಳ ಮುಂದಾಳುಗಳು ಒಂದಾಗಿ ಕೊಡಗಿನ ವಿವಿಧ ಜಾತಿ ಮತಗಳ ಜನರಲ್ಲಿ ಪರಿಶಿಷ್ಟ ಜಾತಿ ಜನರನ್ನು ಸಹೋದರ ಭಾವದಿಂದ ಕಾಣಬೇಕೆಂದೂ ಮತ್ತು ಎಲ್ಲಾ ದೇವಸ್ಥಾನಗಳಲ್ಲೂ ಅವರಿಗೆ ಪ್ರವೇಶ ಕೊಡಬೇಕೆಂದೂ ಕೇಳಿಕೊಂಡರು.

1934ರಲ್ಲಿ ಮಹಾತ್ಮಗಾಂಧಿಯವರು ಅಸ್ಪೃಶ್ಯತಾ ನಿವಾರಣಾ ಚಳವಳಿಯ ಪ್ರವಾಸ ಕೈಗೊಂಡ ಸಮಯದಲ್ಲಿ ಕೊಡಗಿಗೂ ಬಂದರು (ಪು. 119 ನೋಡಿ). ಮೊಟ್ಟಮೊದಲು ಜಿಲ್ಲೆಯ ಕೈಕೇರಿ ಎಂಬ ಪರಿಶಿಷ್ಟ ಜಾತಿ ಜನರ ಕೇರಿಗೆ ಭೇಟಿ ನೀಡಿ, ಸಭೆಯನ್ನು ನಡೆಸಿದುದೇ ಅಲ್ಲದೆ ಪೊನ್ನಂಪೇಟೆ, ವೀರರಾಜಪೇಟೆ, ಮಡಿಕೇರಿ ಇವೇ ಮುಂತಾದ ಕಡೆಗಳಿಗೂ ಭೇಟಿ ನೀಡಿ, ಅಲ್ಲಿಯ ಸಭೆಗಳಲ್ಲಿ ಜನರು ಅಸ್ಪೃಶ್ಯತಾ ಮನೋಭಾವವನ್ನು ತೊರೆದು ಹಾಕಬೇಕು, ದೇವಾಲಯ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶನೀಡಬೇಕೆಂದೂ ಮತ್ತು ಪರಿಶಿಷ್ಟಜಾತಿ ಜನಸೇವಕರು ಈ ಸಮಸ್ಯೆಯ ನಿವಾರಣೆಗೆ ಪ್ರಯತ್ನಿಸಬೇಕೆಂದೂ ಮನವಿ ಮಾಡಿದರು. ಸಭೆಗಳಲ್ಲಿ ಭಾಗವಹಿಸಿದ್ದ ಶ್ರೀಮಂತ ಸ್ತ್ರೀಯರನೇಕರು ತಮ್ಮ ಒಡವೆಗಳನ್ನು ಪರಿಶಿಷ್ಟಜಾತಿ ಜನರ ಕಲ್ಯಾಣ ನಿಧಿಗಾಗಿ (ಹರಿಜನ ಫಂಡ್) ಅರ್ಪಿಸಿದರು. ಪೊನ್ನಂಪೇಟೆಯ ರಾಮಕೃಷ್ಣಾಶ್ರಮಕ್ಕೆ ಬಂದಿದ್ದ ಸ್ವಾಮಿ ಶಾಂಭವಾನಂದರು ಪರಿಶಿಷ್ಟಜಾತಿ ಜನರ ಸೇವೆಯಲ್ಲಿ ಆಸಕ್ತಿ ಹೊಂದಿ, ಪರಿಶಿಷ್ಟಜಾತಿ ಜನ ಸಂಘವನ್ನು ಸ್ಥಾಪಿಸಿದರು. 1935ರಲ್ಲಿ ಅಜ್ಜಿಕುಟ್ಟೀರ ತಮ್ಮಯ್ಯ ಮತ್ತು ಮಲ್ಲೇಂಗಡ ಚಂಗಪ್ಪನವರ ನೇತೃತ್ವದಲ್ಲಿ ಗೋಣಿಕೊಪ್ಪಲ ಹತ್ತಿರ ಅಸ್ಪೃಶ್ಯರ ಸೇವೆಗಾಗಿ ದೀನ ಸೇವಾಶ್ರಮವು ಪ್ರಾರಂಭವಾಯಿತು. ಅರಮೇರಿಯಲ್ಲಿ ಅಸ್ಪೃಶ್ಯ ವರ್ಗದ ಬಾಲಕರಿಗಾಗಿ ಶಾಲೆಯೊಂದನ್ನು ತೆರೆಯಲಾಯಿತು. ಬಿದ್ದಂಡ ಅಯ್ಯಪ್ಪನವರ ಸುಪರ್ದಿಯಲ್ಲಿ ಚೆನ್ನನಕೋಟೆಯಲ್ಲಿ ಇಂಥದೇ ಶಾಲೆಯೊಂದನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಶುಚಿತ್ವ ಮತ್ತು ಉತ್ತಮ ಜೀವನ ಕ್ರಮಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿತ್ತು. ಅಲ್ಲದೆ ಬಟ್ಟೆ ಹೊಲಿಯುವುದು ಮತ್ತಿತರ ಉದ್ಯಮಗಳನ್ನು ಕಲಿಸುವ ಹಾಗೂ ಆಗಾಗ್ಗೆ ಹರಿಕಥೆ ಮತ್ತು ಭಜನೆಗಳನ್ನು ಏರ್ಪಡಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಸೋಮಯಂಡ ಅಚ್ಚಯ್ಯನವರು ಮುಜರಾಯಿ ಇಲಾಖಾ ಅಧ್ಯಕ್ಷರಿಗೆ ಪತ್ರ ಬರೆದು, ಮಡಿಕೇರಿಯಲ್ಲಿನ ಓಂಕಾರೇಶ್ವರ ದೇವಾಲಯಕ್ಕೆ ಪರಿಶಿಷ್ಟ ಜಾತಿಯ ಜನರಿಗೆ ಪ್ರವೇಶವನ್ನು ನೀಡಬೇಕೆಂದು ಕೇಳಿಕೊಂಡಾಗ ಅದು ಸಫಲವಾಗದಿದ್ದಕ್ಕೆ ದೇವಸ್ಥಾನದಲ್ಲಿ ಉಪವಾಸವನ್ನು ಕೈಗೊಂಡರು.

ಸ್ವಾತಂತ್ರ್ಯದ ನಂತರ ಸರ್ಕಾರವು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಆರಂಭದಲ್ಲಿ ಈ ಕಾರ್ಯಕ್ರಮಗಳನ್ನು ಶಿಕ್ಷಣ ಇಲಾಖೆಯು ನಿರ್ವಹಿಸುತ್ತಿದ್ದು ನಂತರ ಇದನ್ನು ಹೆಚ್ಚು ಯಶಸ್ವಿಯಾಗುವಂತೆ ಮಾಡಲು ಸಮಾಜ ಕಲ್ಯಾಣ ಇಲಾಖೆ ಎಂಬ ಒಂದು ಪ್ರತ್ಯೇಕ ಇಲಾಖೆಯನ್ನೇ ಆರಂಭಿಸಲಾಯಿತು. ಈ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಜನರ ಶೈಕ್ಷಣಿಕ, ಆರ್ಥಿಕ, ವಸತಿ ಮತ್ತು ಆರೋಗ್ಯ ಇವೇ ಮುಂತಾದವುಗಳ ಪ್ರಗತಿಗಾಗಿ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಎಲ್ಲಾ ಸ್ಥಳೀಯ ಸಂಸ್ಥೆಗಳು ತಮ್ಮ ಆಯವ್ಯಯದ ಶೇ. 18ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಕಲ್ಯಾಣಕ್ಕಾಗಿ ವೆಚ್ಚ ಮಾಡುತ್ತವೆ.

### ಶೈಕ್ಷಣಿಕ ಸೌಲಭ್ಯಗಳು

1981ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ 48,752 ಇದ್ದು, ಇದರಲ್ಲಿ ಗ್ರಾಮಾಂತರ ಜನಸಂಖ್ಯೆಯು 43,224 ಆದರೆ ನಗರ ಜನಸಂಖ್ಯೆಯು 5,528 ಆಗಿರುತ್ತದೆ. ಗ್ರಾಮೀಣ ಪುರುಷರ ಜನಸಂಖ್ಯೆ 22,310 ಆಗಿದ್ದು, ಇದರಲ್ಲಿ ಶೇ. 29.87 ಜನರು ಅಕ್ಷರಸ್ಥರೂ, ನಗರದ ಪುರುಷರ ಜನಸಂಖ್ಯೆ 2,867 ಆಗಿದ್ದು, ಇದರಲ್ಲಿ ಶೇ. 50.47 ಜನರು ಅಕ್ಷರಸ್ಥರೂ ಆಗಿದ್ದರೆ ಗ್ರಾಮೀಣ ಸ್ತ್ರೀಯರ ಜನಸಂಖ್ಯೆ 20,914 ಆಗಿದ್ದು ಇದರಲ್ಲಿ ಶೇ. 14.94 ಜನರು ಅಕ್ಷರಸ್ಥರೂ

ಮತ್ತು ನಗರದ ಸ್ತ್ರೀಯರ ಜನಸಂಖ್ಯೆ 2,661 ಆಗಿದ್ದು, ಇದರಲ್ಲಿ ಶೇ. 31.49 ಜನರು ಅಕ್ಷರಸ್ಥರಾಗಿರುತ್ತಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಮೂರು ವರ್ಷದಿಂದ ಆರು ವರ್ಷದ ಮಕ್ಕಳಲ್ಲಿ ಶಾಲೆಗೆ ಹೋಗುವ ಅಭ್ಯಾಸವನ್ನು ಬೆಳೆಸಿ ಪೂರ್ವ ಪ್ರಾಥಮಿಕ ಶಿಕ್ಷಣ ವನ್ನು ನೀಡುವುದಕ್ಕೂ ಹಾಗೂ ಮಹಿಳೆಯರಿಗೆ ಹೊಲಿಗೆ, ಹೆಣಿಗೆ, ಕಸೂತಿ ಇವೇ ಮೊದಲಾದ ಕೈಕೆಲಸಗಳಲ್ಲಿ ತರಬೇತಿ ನೀಡುವ ಉದ್ದೇಶದಿಂದ ಜಿಲ್ಲೆಯಲ್ಲಿ ಶಿಶುವಿಹಾರಗಳನ್ನೊಳಗೊಂಡ ಮಹಿಳಾ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರತೀ ಕಲ್ಯಾಣ ಕೇಂದ್ರದಲ್ಲೂ 50 ಮಕ್ಕಳು ಸೇರಲು ಅವಕಾಶವಿದ್ದು, ಅವರಿಗೆ ಉಚಿತವಾಗಿ ಮಧ್ಯಾಹ್ನದ ಉಪಹಾರ ಮತ್ತು ವರ್ಷಕ್ಕೆ ಎರಡು ಜೊತೆ ಉಡುಪುಗಳನ್ನು ನೀಡಲಾಗುತ್ತಿದೆ. ಪರಿಶಿಷ್ಟ ಜಾತಿಯ ಮಕ್ಕಳು, ಮಹಿಳೆಯರಿಗಾಗಿ 1959ರಲ್ಲಿ ಮಡಿಕೇರಿ ಮತ್ತು ಸೋಮವಾರಪೇಟೆ ತಾಲೂಕಿನ ಹೆಬ್ಬಾಲೆಯಲ್ಲಿ ಇಂತಹ ಎರಡು ಕೇಂದ್ರಗಳಿದ್ದವು. 1970ರ ವೇಳೆಗೆ ಮಡಿಕೇರಿ ತಾಲೂಕಿನ ಬೇತುವಿನಲ್ಲಿ, ಸೋಮವಾರಪೇಟೆ ತಾಲೂಕಿನ ಕುಶಾಲನಗರ ಮತ್ತು ವೀರರಾಜಪೇಟೆ ತಾಲೂಕಿನ ಬಾಳೆಲೆ, ಪೊನ್ನಂಪೇಟೆ, ಚೆನ್ನಯ್ಯನಕೋಟೆ ಮತ್ತು ಬಿಳುಗುಂದಗಳಲ್ಲೂ ಇಂತಹ ಕಲ್ಯಾಣ ಕೇಂದ್ರಗಳು ಪ್ರಾರಂಭವಾಗಿದ್ದು ನಂತರದಲ್ಲಿ ಮಡಿಕೇರಿ ತಾಲೂಕಿನ ಅರೆಕಾಡು ಮತ್ತು ಕಡಗದಾಳುವಿನಲ್ಲೂ ಮತ್ತು ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ಮತ್ತು ಸುಂಟಿಕೊಪ್ಪದಲ್ಲೂ ಪ್ರಾರಂಭವಾಗಿ 1990ರ ವೇಳೆಗೆ ಒಟ್ಟು 12 ಶಿಶುವಿಹಾರಗಳನ್ನೊಳಗೊಂಡ ಮಹಿಳಾ ಕಲ್ಯಾಣ ಕೇಂದ್ರಗಳಿದ್ದವು. ಪರಿಶಿಷ್ಟ ಜಾತಿಯ ಮಕ್ಕಳಿಗೆ 1 ರಿಂದ 4ನೇ ತರಗತಿಯ ವರೆಗೆ ಉಚಿತ ಶಿಕ್ಷಣವನ್ನು ನೀಡುವುದೇ ಅಲ್ಲದೆ ಉಚಿತವಾಗಿ ಊಟ, ವಸತಿ, ಪುಸ್ತಕ ಮತ್ತು ಉಡುಪಿನ ಸೌಲಭ್ಯಗಳನ್ನು ಒದಗಿಸಲು ಮಡಿಕೇರಿ ತಾಲೂಕಿನ ಕಕ್ಕಬ್ಬೆಯಲ್ಲಿ ವಸತಿ ಶಾಲೆಯನ್ನು ಸ್ಥಾಪಿಸಲಾಗಿದೆ. ಮೊದಲಿಗೆ ಈ ಶಾಲೆಗಳಲ್ಲಿ ಪ್ರತೀ ವಿದ್ಯಾರ್ಥಿಗೂ ತಿಂಗಳಿಗೆ 75 ರೂ.ಗಳನ್ನು ಭೋಜನ ವೆಚ್ಚಕ್ಕಾಗಿ ನೀಡುತ್ತಿದ್ದು 1990 ರಿಂದ ಇದನ್ನು 100 ರೂ.ಗೆ ಹೆಚ್ಚಿಸಲಾಗಿದೆ.

5 ರಿಂದ 10ನೇ ತರಗತಿಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಊಟ–ವಸತಿ ಸೌಕರ್ಯವನ್ನು ಕಲ್ಪಿಸಲು ಮೆಟ್ರಿಕ್‌ಪೂರ್ವ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದೆ. 1990ಕ್ಕೆ ಮುಂಚೆ ಪ್ರತೀ ವಿದ್ಯಾರ್ಥಿಗೆ ತಿಂಗಳಿಗೆ 100 ರೂ.ಗಳನ್ನು ಭೋಜನ ವೆಚ್ಚಕ್ಕಾಗಿ ನೀಡಲಾಗುತ್ತಿದ್ದು, 1990 ರಿಂದ ಇದನ್ನು 150 ರೂ.ಗೆ ಹೆಚ್ಚಿಸಲಾಗಿದೆ. 1960ರಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಜಿಲ್ಲೆಯಲ್ಲಿ ನಾಲ್ಕು ಬಾಲಕರ ವಿದ್ಯಾರ್ಥಿ ನಿಲಯಗಳೂ ಮತ್ತು ಎರಡು ಬಾಲಕಿಯರ ವಿದ್ಯಾರ್ಥಿ ನಿಲಯಗಳೂ ಇದ್ದು, 1970ರ ವೇಳೆಗೆ ಆರು ಬಾಲಕರ ವಿದ್ಯಾರ್ಥಿ ನಿಲಯಗಳೂ ಮತ್ತು ಆರು ಬಾಲಕಿಯರ ವಿದ್ಯಾರ್ಥಿ ನಿಲಯಗಳೂ ಇದ್ದು, 1990ರ ವೇಳೆಗೆ ಇಲಾಖೆಯು ಮಡಿಕೇರಿ ತಾಲೂಕಿನ ಮಡಿಕೇರಿ ಮತ್ತು ಚೇರಂಬಾಣೆ, ಸೋಮವಾರಪೇಟೆ ತಾಲೂಕಿನ ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ, ಕುಶಾಲನಗರ ಮತ್ತು ಹೆಬ್ಬಾಲೆ ಮತ್ತು ವೀರರಾಜಪೇಟೆ ತಾಲೂಕಿನಲ್ಲಿ ವೀರರಾಜಪೇಟೆ, ಪೊನ್ನಂಪೇಟೆ ಮತ್ತು ಬಾಳೆಲೆಗಳಲ್ಲಿ ಬಾಲಕರಿಗಾಗಿಯೂ ಮತ್ತು ಮಡಿಕೇರಿ ತಾಲೂಕಿನಲ್ಲಿ ಮಡಿಕೇರಿಯಲ್ಲಿ, ಸೋಮವಾರಪೇಟೆ ತಾಲೂಕಿನಲ್ಲಿ ಸೋಮವಾರಪೇಟೆ, ಕುಶಾಲನಗರ ಮತ್ತು ಶನಿವಾರಸಂತೆಯಲ್ಲಿ ಮತ್ತು ವೀರರಾಜಪೇಟೆ ತಾ॥ನಲ್ಲಿ ವೀರರಾಜಪೇಟೆ ಮತ್ತು ಪೊನ್ನಂಪೇಟೆಯಲ್ಲಿ ಬಾಲಕಿಯರಿಗಾಗಿಯೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸುತ್ತಿದ್ದು, ಒಟ್ಟಾರೆ 12 ಬಾಲಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳೂ ಮತ್ತು ಆರು ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳೂ ಇದ್ದುವು.

ವಿದ್ಯಾರ್ಥಿನಿಲಯದ ಸೌಲಭ್ಯ ಪಡೆಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಮಾಧ್ಯಮಿಕ ಹಂತದಲ್ಲಿ ವರ್ಷಕ್ಕೆ 75 ರೂ.ಗಳಂತೆಯೂ ಮತ್ತು ಪ್ರೌಢಶಾಲಾ ಹಂತದಲ್ಲಿ ವರ್ಷಕ್ಕೆ 100 ರೂ.ಗಳಂತೆಯೂ ಮಂಜೂರು ಮಾಡುತ್ತಿದೆ. ಭಾರತ ಸರ್ಕಾರದ ನಿಬಂಧನೆಗಳ ಮೇರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ತಂದೆತಾಯಿಯರ ವಾರ್ಷಿಕ ವರಮಾನ 18,000 ರೂ.ಗಿಂತ ಕಡಿಮೆಯಿದ್ದರೆ ಪೂರ್ಣ ವಿದ್ಯಾರ್ಥಿ ವೇತನವನ್ನೂ, 18,000 ರೂ.ನಿಂದ 24,000 ರೂ.ಗಳ ವಾರ್ಷಿಕ ವರಮಾನವಿರುವವರಿಗೆ ಅರ್ಧ ವಿದ್ಯಾರ್ಥಿ ವೇತನವನ್ನೂ ಮಂಜೂರು ಮಾಡಲಾಗುವುದು. ಈ ವಿದ್ಯಾರ್ಥಿ ವೇತನದ ದರವು ವಿವಿಧ ಹಂತ ಮತ್ತು ಶಿಕ್ಷಣಕ್ಕನುಗುಣವಾಗಿದ್ದು, 1989 ರಿಂದ ಇದರ ಮಾಸಿಕ ದರವು ವಿದ್ಯಾರ್ಥಿ ನಿಲಯದ ನಿವಾಸಿಗಳಿಗೆ 115 ರೂ. ನಿಂದ 280 ರೂ. ವರೆವಿಗೂ ಮತ್ತು ವಿದ್ಯಾರ್ಥಿನಿಲಯವಾಸಿಗಳಲ್ಲದವರಿಗೆ ರೂ. 65 ರಿಂದ ರೂ. 125ರ ವರೆವಿಗೂ ಇದೆ. ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅನರ್ಹರಾದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ತಿಂಗಳಿಗೆ 40 ರೂ.ನಿಂದ 75 ರೂ.ಗಳವರೆವಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡುತ್ತಿದೆ. ಇದಲ್ಲದೆ

ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಬಹುಮಾನದ ಹಣವನ್ನಾಗಿ 500 ರೂ.ನಿಂದ 1500 ರೂ.ವರೆವಿಗೆ ಪರೀಕ್ಷೆಯ ಹಂತಕ್ಕನುಗುಣವಾಗಿ ಮಂಜೂರು ಮಾಡುತ್ತಿದ್ದು, ವಾರ್ಷಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತ ಅಧಿಕ ಅಂಕಗಳನ್ನು ಪಡೆಯುವ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ವರ್ಷಕ್ಕೆ 75 ರೂ.ಗಳನ್ನು ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವರ್ಷಕ್ಕೆ 100 ರೂ.ಗಳನ್ನು ಪ್ರತಿಭಾ ವಿದ್ಯಾರ್ಥಿ ವೇತನವಾಗಿ ಮಂಜೂರು ಮಾಡುತ್ತಿದೆ.

ಅನೈರ್ಮಲ್ಯ ಉದ್ಯೋಗಗಳಲ್ಲಿ ತೊಡಗಿರುವವರ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಒದಗಿಸುವ ಉದ್ದೇಶದಿಂದ ಆ ಮಕ್ಕಳನ್ನು ವಿದ್ಯಾರ್ಥಿ ನಿಲಯಗಳಿಗೆ ಸೇರಿಸಿ ಮಾಧ್ಯಮಿಕ ವಿದ್ಯಾರ್ಥಿಗಳಿಗೆ ತಿಂಗಳಿಗೆ 200 ರೂ.ಗಳನ್ನು ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತಿಂಗಳಿಗೆ 250 ರೂ.ಗಳ ವಿದ್ಯಾರ್ಥಿ ವೇತನವನ್ನು ಅವರ ಭೋಜನ ಮತ್ತು ಇತರ ವೆಚ್ಚಗಳಿಗಾಗಿ ಮಂಜೂರು ಮಾಡುತ್ತಿದೆ. ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸದ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆ (ವಸತಿ ಶಾಲೆ)ಗೆ ಸೇರಿಸಿ ಅವರ ಭೋಜನ ಮತ್ತು ಇತರ ವೆಚ್ಚಗಳಿಗಾಗಿ ವಾರ್ಷಿಕ 8,005 ರೂ.ಗಳನ್ನು ಮಂಜೂರು ಮಾಡುತ್ತಿದೆ. ಇದಲ್ಲದೆ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಓದುತ್ತಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳನ್ನು ಒದಗಿಸುವುದು, ತಾಂತ್ರಿಕ ಮತ್ತು ಇತರ ವೃತ್ತಿ ತರಗತಿಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸವು ಕಡ್ಡಾಯವಾಗಿದ್ದಲ್ಲಿ, ಅವರಿಗೆ ಪ್ರವಾಸ ವೆಚ್ಚವನ್ನು ನೀಡುವುದು ಇವೇ ಮುಂತಾದ ಶೈಕ್ಷಣಿಕ ಸೌಲಭ್ಯಗಳನ್ನೊದಗಿಸಿದೆ.

ಕೊಡಗು ಜಿಲ್ಲೆಯಲ್ಲಿ 1989-90 ಮತ್ತು 1990-91ನೇ ಸಾಲಿನಲ್ಲಿ ವಿವಿಧ ಯೋಜನೆಗಳಲ್ಲಿನ ಪರಿಶಿಷ್ಟ ಜಾತಿಯ ಫಲಾನುಭವಿಗಳನ್ನು ಹಾಗೂ ಖರ್ಚು ಮಾಡಿದ ಹಣವನ್ನು ಈ ಕೆಳಗಿನ ಪಟ್ಟಿಯಲ್ಲಿ ಸೂಚಿಸಿದೆ.

| ಕ್ರ. ಸಂ. | ಯೋಜನೆಯ ಹೆಸರು | 1989-90 | | 1990-91 | |
|---|---|---|---|---|---|
| | | ಫಲಾನುಭವಿಗಳು | ವೆಚ್ಚ (ಲಕ್ಷ ರೂ.) | ಫಲಾನುಭವಿಗಳು | ವೆಚ್ಚ (ಲಕ್ಷ ರೂ.) |
| 1. | ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು | 435 | 4.89 | 300 | 4.50 |
| 2. | ಆಶ್ರಮ ಶಾಲೆಗಳು | 50 | 0.62 | 50 | 1.15 |
| 3. | ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು | 558 | 15.88 | 546 | 18.44 |
| 4. | ಐಟಿಐ, ಐಟಿಸಿ ಯಲ್ಲಿ ತರಬೇತಿ ಪಡೆಯುವವರಿಗೆ ವಿದ್ಯಾರ್ಥಿ ವೇತನ | 8 | 0.02 | 13 | 0.085 |
| 5. | ಎಸ್.ಎಸ್.ಎಲ್.ಸಿ. ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನಗಳು | 7 | 0.04 | 9 | 0.05 |
| 6. | ಶೈಕ್ಷಣಿಕ ಪ್ರವಾಸ | 20 | 0.02 | — | — |
| 7. | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | 2,550 | 2.11 | 2,564 | 2.10 |
| 8. | ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ | 350 | 2.95 | 245 | 3.25 |
| 9. | ಪ್ರತಿಭಾ ವಿದ್ಯಾರ್ಥಿವೇತನ | 402 | 0.24 | 778 | 0.52 |
| 10. | ಅನೈರ್ಮಲ್ಯ ಉದ್ಯೋಗಗಳಲ್ಲಿ ತೊಡಗಿರುವವರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ | 10 | 0.18 | 16 | 0.08 |
| 11. | ವಿದ್ಯಾರ್ಥಿಗಳ ಭೋಜನ ಮತ್ತು ವಸತಿಗಾಗಿ ಹೆಚ್ಚು ಹಣದ ಸಂದಾಯ | 99 | 0.15 | 85 | 0.30 |
| 12. | ಟಿ.ಸಿ.ಎಚ್. ವಿದ್ಯಾರ್ಥಿನಿಯರ ತರಬೇತಿ | 2 | 0.005 | 8 | 0.02 |

**ಆರ್ಥಿಕಾಭಿವೃದ್ಧಿ ಯೋಜನೆಗಳು**

ಪರಿಶಿಷ್ಟ ಜಾತಿಗಳ ಮಹಿಳೆಯರಿಗೆ ಔದ್ಯೋಗಿಕ ತರಬೇತಿ ನೀಡಲು ಹೊಲಿಗೆ ತರಬೇತಿ ಕೇಂದ್ರವು ಮಡಿಕೇರಿಯಲ್ಲಿ 1961 ರಿಂದ ಕಾರ್ಯ ನಿರ್ವಹಿಸುತ್ತಿದೆ. ಸಾಮಾನ್ಯವಾಗಿ 25 ಅಭ್ಯರ್ಥಿಗಳಿಗೆ ಈ ಕೇಂದ್ರದಲ್ಲಿ ಸೇರುವ ಅವಕಾಶವಿದ್ದು, 12 ತಿಂಗಳ ಕಾಲ ತರಬೇತಿಯನ್ನು ನೀಡಲಾಗುವುದು ಮತ್ತು ಈ ಅವಧಿಯಲ್ಲಿ ತಿಂಗಳಿಗೆ 75ರೂ. ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಈ ಕೇಂದ್ರದಿಂದ ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ ಪ್ರತೀ ಮಹಿಳಾ ಅಭ್ಯರ್ಥಿಗೆ ವೃತ್ತಿಯನ್ನು ಮುಂದುವರಿಸಲು ಅನುಕೂಲವಾಗುವಂತೆ ಒಂದು ಹೊಲಿಗೆ ಯಂತ್ರವನ್ನು ಉಚಿತವಾಗಿ ನೀಡಲಾಗುವುದು. 1989-90ನೇ ವಾರ್ಷಿಕ ಸಾಲಿನಲ್ಲಿ 20 ಮಹಿಳೆಯರೂ ಮತ್ತು 1990-91ನೇ ವಾರ್ಷಿಕ ಸಾಲಿನಲ್ಲಿ 19 ಮಹಿಳೆಯರೂ ಈ ಸೌಲಭ್ಯವನ್ನು ಪಡೆದಿದ್ದು, ಸರ್ಕಾರವು ಇದಕ್ಕಾಗಿ ಕ್ರಮವಾಗಿ ಈ ಎರಡು ವರ್ಷಗಳಲ್ಲಿ 53,985ರೂ. ಮತ್ತು 62,000 ರೂ.ಗಳನ್ನು ಖರ್ಚು ಮಾಡಿರುವುದೇ ಅಲ್ಲದೆ ಇವರುಗಳಿಗೆ ಉಚಿತವಾಗಿ ಹೊಲಿಗೆ ಯಂತ್ರವನ್ನು ನೀಡಿದ್ದು, ಇದಕ್ಕಾಗಿ 1989-90 ರಲ್ಲಿ 21,690 ರೂ.ಗಳನ್ನು ಮತ್ತು 1990-91ನೇ ಸಾಲಿನಲ್ಲಿ 23,463 ರೂ.ಗಳನ್ನು ಖರ್ಚು ಮಾಡಿರುತ್ತದೆ.

ಆಟೋರಿಕ್ಷಾ ಮತ್ತು ಲಘುವಾಹನ ಚಾಲನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಯುವಕರಿಗೆ ತರಬೇತಿ ನೀಡಿ ಅವರು ಸ್ವಂತ ಉದ್ಯೋಗ ಕೈಗೊಳ್ಳಲು ನೆರವಾಗುವ ದೃಷ್ಟಿಯಿಂದ ಇಲಾಖೆಯು 200 ರೂ. ಶಿಷ್ಯವೇತನವನ್ನು ತರಬೇತಿ ಪಡೆಯುವ ಪ್ರತೀ ಅಭ್ಯರ್ಥಿಗೆ ನೀಡುವುದೇ ಅಲ್ಲದೆ, ತರಬೇತಿ ಹಾಗೂ ಲೈಸನ್ಸ್ ಶುಲ್ಕವನ್ನೂ ನೀಡುತ್ತದೆ. 1989-90ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ 15 ಯುವಕರೂ ಮತ್ತು 1990-91ನೇ ಸಾಲಿನಲ್ಲಿ 19 ಯುವಕರೂ ಈ ಸೌಲಭ್ಯವನ್ನು ಪಡೆದಿದ್ದು, ಇದಕ್ಕಾಗಿ ಸರ್ಕಾರವು ಕ್ರಮವಾಗಿ 14,250 ರೂ. ಮತ್ತು 18,000 ರೂ.ಗಳನ್ನು ಈ ಎರಡು ವರ್ಷಗಳಲ್ಲಿ ಖರ್ಚು ಮಾಡಿದೆ.

**ವಸತಿ ಮತ್ತಿತರ ಕಲ್ಯಾಣ ಯೋಜನೆಗಳು**

ವಸತಿ ಹಾಗೂ ನಿವೇಶನವಿಲ್ಲದ ಪರಿಶಿಷ್ಟ ಜಾತಿಯವರಿಗೆ ವಸತಿ ಮತ್ತು ನಿವೇಶನವನ್ನು ಹಂಚುವ ಯೋಜನೆಯಲ್ಲಿ 1988-89ನೇ ಸಾಲಿನಲ್ಲಿ ತಾಲೂಕುವಾರು ಫಲಾನುಭವಿಗಳ ಸಂಖ್ಯೆ ಮಡಿಕೇರಿ (30;46), ಸೋಮವಾರಪೇಟೆ (165;20) ಮತ್ತು ವೀರರಾಜಪೇಟೆ (51;63) ಆಗಿದ್ದು, ಆವರಣದಲ್ಲಿರುವ ಮೊದಲನೇ ಮತ್ತು ಎರಡನೇ ಸಂಖ್ಯೆಗಳು ಕ್ರಮವಾಗಿ ಮನೆಯ ಹಾಗೂ ನಿವೇಶನದ ಫಲಾನುಭವಿಗಳನ್ನು ಸೂಚಿಸುತ್ತದೆ. 1988-89ರ ಅಂತ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು 8,219 ಪರಿಶಿಷ್ಟ ಜಾತಿಯ ಜನರು ನಿವೇಶನದ ಸೌಲಭ್ಯವನ್ನು ಮತ್ತು 2,675 ಜನರು ವಸತಿ ಸೌಲಭ್ಯವನ್ನು ಪಡೆದಿದ್ದು 1990-91ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 44 ಪರಿಶಿಷ್ಟ ಜಾತಿಯ ಜನರು ವಸತಿ ಸೌಲಭ್ಯವನ್ನು ಮತ್ತು 186 ಜನರು ನಿವೇಶನದ ಸೌಲಭ್ಯವನ್ನು ಪಡೆದಿರುತ್ತಾರೆ. ಭಾಗ್ಯಜ್ಯೋತಿಯ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮನೆಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗಿದ್ದು, ಈ ಸೌಲಭ್ಯವನ್ನು ಪಡೆದ ಪರಿಶಿಷ್ಟ ಜಾತಿಯವರ ಫಲಾನುಭವಿಗಳು – ಸೋಮವಾರಪೇಟೆ ತಾಲೂಕು (16;15) ಮತ್ತು ವೀರರಾಜಪೇಟೆ ತಾಲೂಕು (3;-) ಆಗಿದ್ದು ಆವರಣದಲ್ಲಿರುವ ಮೊದಲನೇ ಮತ್ತು ಎರಡನೇಯ ಸಂಖ್ಯೆಗಳು ಕ್ರಮವಾಗಿ 1989-90ಮತ್ತು 1990-91ನೇ ಸಾಲಿನ ಫಲಾನುಭವಿಗಳನ್ನು ಸೂಚಿಸುತ್ತದೆ. 1991-92ರಲ್ಲಿ ಮಡಿಕೇರಿ ತಾ||ನಲ್ಲಿ 40 ಹಾಗೂ ವೀರರಾಜಪೇಟೆ ತಾ||ನಲ್ಲಿ 10 ಪರಿಶಿಷ್ಟ ಜಾತಿಯವರು ಈ ಸೌಲಭ್ಯವನ್ನು ಪಡೆದಿದ್ದಾರೆ.

ಅಸ್ಪೃಶ್ಯತಾ ನಿವಾರಣೆ ಯೋಜನೆಯಡಿ ಅಂತರ್ಜಾತೀಯ ವಿವಾಹವಾದ ದಂಪತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ ಸಂದರ್ಭದಲ್ಲಿ, ಅವರ ಸಾಮಾಜಿಕ ಭದ್ರತೆಗಾಗಿ 5,000 ರೂ.ಗಳ (2,000 ರೂ.ಗಳ ನಗದು ಮತ್ತು 3,000 ರೂ. ರಾಷ್ಟ್ರೀಯ ಉಳಿತಾಯ ಪತ್ರ ರೂಪದಲ್ಲಿ) ಪ್ರೋತ್ಸಾಹ ಧನವನ್ನು ಮಂಜೂರು ಮಾಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ 1989-90ರಲ್ಲಿ ಎಂಟು ಜನರೂ ಮತ್ತು 1990-91ರಲ್ಲಿ ನಾಲ್ಕು ಜನರೂ ಸೌಲಭ್ಯವನ್ನು ಪಡೆದಿದ್ದು ಸರ್ಕಾರವು ಇದಕ್ಕಾಗಿ ಕ್ರಮವಾಗಿ 40,000 ರೂ. ಮತ್ತು 20,000 ರೂ.ಗಳನ್ನು ಖರ್ಚು ಮಾಡಿದೆ.

ದೌರ್ಜನ್ಯಕ್ಕೊಳಗಾದ ಪರಿಶಿಷ್ಟಜಾತಿಯವರಿಗೆ 1,000 ರೂ.ಗಳಿಂದ 10,000 ರೂ.ಗಳವರೆಗೆ ನಷ್ಟದ ಪ್ರಮಾಣವನ್ನು ಅನುಸರಿಸಿ, ಧನಸಹಾಯವನ್ನು ನೀಡಲಾಗುತ್ತಿದೆ. ಈ ಯೋಜನೆಯಲ್ಲಿ 1990-91ನೇ ಸಾಲಿನಲ್ಲಿ ಐದು ಜನರು ಸೌಲಭ್ಯವನ್ನು ಪಡೆದಿದ್ದು ಇದಕ್ಕಾಗಿ 13,500ರೂ.ಗಳನ್ನು ಖರ್ಚು ಮಾಡಲಾಗಿದೆ.

### ವಿಶೇಷ ಘಟಕ ಯೋಜನೆ

ಪರಿಶಿಷ್ಟ ಜಾತಿಗಳ ಸರ್ವತೋಮುಖ ಅಭಿವೃದ್ಧಿಗಾಗಿ 1980–81ನೇ ಸಾಲಿನಿಂದ ವಿಶೇಷ ಘಟಕ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದೆ. ಅಭಿವೃದ್ಧಿ ಇಲಾಖೆಗಳು ತಮ್ಮ ಯೋಜನಾ ಆಯವ್ಯಯದ ಶೇ. 15ನ್ನು ಈ ಯೋಜನೆಗಾಗಿ ಮೀಸಲಿಟ್ಟಿದ್ದು, ಪರಿಶಿಷ್ಟ ಜಾತಿಗಳ ಕುಟುಂಬಗಳಿಗೆ ಆರ್ಥಿಕ ಸಹಾಯವನ್ನು ಕಲ್ಪಿಸುವುದರ ಮೂಲಕ ಬಡತನ ನಿವಾರಣೆಗೆ ನೆರವಾಗುತ್ತದೆ. ಇದಲ್ಲದೆ ಪರಿಶಿಷ್ಟ ಜಾತಿಗಳ ವಸಾಹತುಗಳಲ್ಲಿ ನೀರು, ವಿದ್ಯುತ್, ರಸ್ತೆ, ಆರೋಗ್ಯ,ಶಿಕ್ಷಣ ಇವೇ ಮುಂತಾದ ಕನಿಷ್ಟ ಸೌಲಭ್ಯಗಳಿಗೂ ಈ ಯೋಜನೆಯು ಗಮನ ನೀಡಿದೆ. 1989–90 ಮತ್ತು 1990–91ನೇ ಸಾಲಿನಲ್ಲಿ ವಿವಿಧ ಇಲಾಖೆಗಳು ಈ ಯೋಜನೆಯಲ್ಲಿ ಸಾಧಿಸಿರುವ ಪ್ರಗತಿಯನ್ನು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

| ಯೋಜನೆಯ ಹೆಸರು | 1989-90 | | 1990-91 | |
|---|---|---|---|---|
| | ಫಲಾನುಭವಿಗಳು | ವೆಚ್ಚ (ಲಕ್ಷ ರೂ.) | ಫಲಾನುಭವಿಗಳು | ವೆಚ್ಚ (ಲಕ್ಷ ರೂ.) |
| ಜನಾರೋಗ್ಯ ಇಲಾಖೆ (ಕೊಳವೆ ಬಾವಿ) | 22 | 3.00 | 10 | 4.85 |
| ಗ್ರಾಮೀಣ ವಸತಿ | 61 | 5.50 | 44 | 3.96 |
| ಕೃಷಿ ಇಲಾಖೆ | 100 | 0.50 | 174 | 1.02 |
| ಪಶು ಸಂಗೋಪನಾ ಇಲಾಖೆ | 22 | 0.85 | 16 | 0.82 |
| ಸಹಕಾರ ಇಲಾಖೆ (ಆರ್ಥಿಕ ನೆರವು) | 4 | 0.40 | 5 | 0.50 |
| ಕೈಗಾರಿಕೆ ಮತ್ತು ವಾಣಿಜ್ಯ | — | — | 30 | 0.97 |
| ರೇಷ್ಮೆ ಇಲಾಖೆ (ಹುಳು ಸಾಕಣೆ) | 76 | 1.50 | 144 | 2.00 |
| ಸಣ್ಣ ನೀರಾವರಿ | — | — | 2 | 2.00 |
| ಸಮಾಜ ಕಲ್ಯಾಣ ಇಲಾಖೆ | 23 | 0.89 | 45 | 3.06 |
| ವಯಸ್ಕರ ಶಿಕ್ಷಣ ಇಲಾಖೆ | 750 | 0.50 | — | — |
| ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | 6,575 | 5.00 | — | — |
| ಇಂಜನಿಯರಿಂಗ್ ವಿಭಾಗ (ರಸ್ತೆ, ಸೇತುವೆ) | 16 | 13.00 | — | — |

ತೋಟಗಾರಿಕೆ ಇಲಾಖೆಯು 1989-90ರಲ್ಲಿ 1.10 ಲಕ್ಷ ರೂ. ವೆಚ್ಚ ಮಾಡಿ 105 ಹೆ. ಭೂಮಿಯನ್ನು ಅಭಿವೃದ್ಧಿ ಮಾಡಲು ಅವಕಾಶ ಒದಗಿಸಿತು. 1990-91ರಲ್ಲಿ 1.50 ಲಕ್ಷ ರೂ. ವೆಚ್ಚ ಮಾಡಿ 76 ಹೆ. ಭೂಮಿಯನ್ನು ಅಭಿವೃದ್ಧಿಪಡಿಸಿತು. ಅರಣ್ಯ ಇಲಾಖೆಯು ಸಾಮಾಜಿಕ ಭದ್ರತಾ ನೆಡುತೋಪುಗಳ ವಿಕಾಸಕ್ಕೆ 1989-90ರಲ್ಲಿ 6.50 ಲಕ್ಷ ರೂ. ವೆಚ್ಚದಲ್ಲಿ 19 ಹೆ. ಭೂಮಿ ಒದಗಿಸಿದರೆ, 1990-91ರಲ್ಲಿ 0.60 ಲಕ್ಷ ರೂ. ವೆಚ್ಚದಲ್ಲಿ 14.80 ಹೆ. ಭೂಮಿ ಒದಗಿಸಿತು. ಇದೆಲ್ಲ ವಿಶೇಷ ಘಟಕ ಯೋಜನೆಯಂತೆ ಕೈಗೊಳ್ಳಲಾದ ಕಾರ್ಯಕ್ರಮಗಳು.

**ಪರಿಶಿಷ್ಟ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು**

1981ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದ ಜನಸಂಖ್ಯೆಯು 36,877 ಇದ್ದು ತಾಲೂಕುವಾರು ಜನಸಂಖ್ಯೆ – ಮಡಿಕೇರಿ – 4.336, ವೀರರಾಜಪೇಟೆ– 27,634 ಮತ್ತು ಸೋಮವಾರಪೇಟೆ – 4,907 ಇದ್ದಿತು. ಇದರಲ್ಲಿ ಗ್ರಾಮೀಣ ಪುರುಷರ ಜನಸಂಖ್ಯೆಯು 18,368 ಮತ್ತು ನಗರ ಪುರುಷರ ಜನಸಂಖ್ಯೆ 610 ಇದ್ದು ಇವರಲ್ಲಿ ಕ್ರಮವಾಗಿ ಶೇ. 13.72 ಮತ್ತು ಶೇ. 55.08 ಅಕ್ಷರಸ್ಥರೂ ಹಾಗೂ ಗ್ರಾಮೀಣ ಸ್ತ್ರೀಯರ ಜನಸಂಖ್ಯೆ 17,276 ಮತ್ತು ನಗರ ಸ್ತ್ರೀಯರ ಜನಸಂಖ್ಯೆ 623 ಇದ್ದು ಇವರಲ್ಲಿ ಕ್ರಮವಾಗಿ ಶೇ. 7.50 ಮತ್ತು ಶೇ. 38.36 ಅಕ್ಷರಸ್ಥರು ಇದ್ದರು. ಜಿಲ್ಲೆಯಲ್ಲಿ ಒಟ್ಟು 120 ಪರಿಶಿಷ್ಟ ವರ್ಗದ ಕಾಲನಿಗಳಿದ್ದು ಮಡಿಕೇರಿ ತಾಲೂಕಿನಲ್ಲಿ 29 ಕಾಲನಿಗಳೂ, ವೀರರಾಜಪೇಟೆ ತಾಲೂಕಿನಲ್ಲಿ 62 ಕಾಲನಿಗಳೂ ಮತ್ತು ಸೋಮವಾರಪೇಟೆ ತಾಲೂಕಿನಲ್ಲಿ 29 ಕಾಲನಿಗಳೂ ಇವೆ.

ಜಿಲ್ಲೆಯಲ್ಲಿ ಪ್ರಮುಖವಾಗಿ ಜೇನುಕುರುಬ, ಬೆಟ್ಟಕುರುಬ, ಪಣಿಯೆರವ, ಪಂಜರಿ ಯೆರವ, ಕಾಡುಕುರುಬ, ಬಡಗ ಯೆರವ, ಸೋಲಿಗ, ಮರಾಠ, ಮೇದ ಮತ್ತು ಮಲೆಕುಡಿಯ ಮುಂತಾದ ಪರಿಶಿಷ್ಟ ವರ್ಗದವರಿರುತ್ತಾರೆ. ಪರಿಶಿಷ್ಟ ವರ್ಗದ ಜನರ ಸಾಮಾಜಿಕ, ಆರ್ಥಿಕ ಸ್ಥಿತಿಗಳನ್ನು ಉತ್ತಮಪಡಿಸುವ ಸಲುವಾಗಿ ಎರಡನೇಯ ಪಂಚವಾರ್ಷಿಕ ಯೋಜನೆಯಲ್ಲಿ ತೀವ್ರ ಪ್ರಗತಿಪರ ಕಾರ್ಯಕ್ರಮಗಳು ಹಂತಹಂತವಾಗಿ ಆರಂಭವಾದವು. 1990–91ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದ ಮಕ್ಕಳ ಮತ್ತು ಮಹಿಳೆಯರಿಗಾಗಿ ಜಿಲ್ಲೆಯಲ್ಲಿ 22 ಶಿಶುವಿಹಾರಗಳನ್ನೊಳಗೊಂಡ ಮಹಿಳಾ ಕಲ್ಯಾಣ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ವೀರರಾಜಪೇಟೆ ತಾಲೂಕಿನ ನಾಗರಹೊಳೆ, ಗೋಣಿಗದ್ದೆ, ರೇಷ್ಮೆ ಹಡ್ಲು, ಮೂವತ್ತ್‌ಮನೆ, ಮರೂರು, ತಿತಿಮತಿ, ಮಾದೆನೂರು, ಬೇಗೂರು, ಮತಿಗೋಡು, ಕೋತೂರು, ಶ್ರೀಮಂಗಲ, ಚೆನ್ನಂಗಿ, ಬಸವನಹಳ್ಳಿ, ದೇವರಕಾಡು, ಕಳತ್‌ಮಾಡು, ಮಜ್ಜಿಗೆಹಳ್ಳ ಮತ್ತು ಮಲ್ಲಂಗೆರೆಯಲ್ಲೂ ಮತ್ತು ಸೋಮವಾರಪೇಟೆ ತಾಲೂಕಿನ ಬಸವನಹಳ್ಳಿ, ಕಂಬಿಬಾಣೆ, ಹೊಸಕಾಡು, ಯಡವನಾಡು, ಸೀತಾಕಾಲನಿ, ಕಬ್ಬಿನಗದ್ದೆ ಮತ್ತು ಹೆರೂರಿನಲ್ಲೂ ಸೇರಿದಂತೆ ವೀರರಾಜಪೇಟೆ ತಾಲೂಕಿನಲ್ಲಿ 15 ಕಲ್ಯಾಣ ಕೇಂದ್ರಗಳೂ ಮತ್ತು ಸೋಮವಾರಪೇಟೆ ತಾಲೂಕಿನಲ್ಲಿ 7 ಕಲ್ಯಾಣ ಕೇಂದ್ರಗಳೂ ಇದ್ದುವು. 1989–90ರಲ್ಲಿ ಒಟ್ಟಾರೆ 538 ಮಕ್ಕಳೂ ಮತ್ತು ಮಹಿಳೆಯರೂ ಮತ್ತು 1990–91ನೇ ಸಾಲಿನಲ್ಲಿ 530 ಮಕ್ಕಳೂ ಮತ್ತು ಮಹಿಳೆಯರು ಈ ಸೌಲಭ್ಯವನ್ನು ಪಡೆದಿದ್ದು, ಇದಕ್ಕಾಗಿ ಈ ಎರಡು ವರ್ಷಗಳಲ್ಲಿ ಕ್ರಮವಾಗಿವಾಗಿ 8.62 ಲಕ್ಷ ರೂ. ಮತ್ತು 9.36 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಪರಿಶಿಷ್ಟ ವರ್ಗದ ಮಕ್ಕಳಿಗೆ 1 ರಿಂದ 4ನೇ ತರಗತಿಯವರೆಗೆ ಉಚಿತವಾಗಿ ಊಟ, ವಸತಿ, ಉಡುಪು ಮತ್ತು ಪುಸ್ತಕಗಳನ್ನು ನೀಡಿ ಶಿಕ್ಷಣವನ್ನು ಕೊಡುವ ಸಲುವಾಗಿ ಜಿಲ್ಲೆಯಲ್ಲಿ 1990–91ರಲ್ಲಿ 12 ಆಶ್ರಮ ಶಾಲೆಗಳಿದ್ದು, ಮಡಿಕೇರಿ ತಾಲೂಕಿನ ಕರಿಕೆ ಮತ್ತು ಕುದ್ರೆಪಾಯದಲ್ಲೂ, ವೀರರಾಜಪೇಟೆ ತಾಲೂಕಿನ ನಾಗರಹೊಳೆ, ಮರೂರು ತಿತಿಮತಿ, ಗೋಣಿಗದ್ದೆ, ಮಾದೆನೂರು, ಬೇಗೂರು, ಕೋತೂರು ಮತ್ತು ಚೆನ್ನಂಗಿ ಬಸವನಹಳ್ಳಿಯಲ್ಲೂ ಮತ್ತು ಸೋಮವಾರಪೇಟೆ ತಾಲೂಕಿನ ಆದಿನಾಡೂರು,ಯಡವನಾಡು, ಬಸವನಹಳ್ಳಿ ಮತ್ತು ಮಾಲಂಬಿಯಲ್ಲೂ ಸೇರಿದಂತೆ ಮಡಿಕೇರಿಯಲ್ಲಿ ಎರಡು ಆಶ್ರಮ ಶಾಲೆಗಳೂ, ವೀರರಾಜಪೇಟೆಯಲ್ಲಿ ಆರು ಮತ್ತು ಸೋಮವಾರಪೇಟೆಯಲ್ಲಿ ನಾಲ್ಕು ಆಶ್ರಮ ಶಾಲೆಗಳೂ ಇದ್ದುವು. 1989–90 ರಲ್ಲಿ ಈ ಶಾಲೆಗಳಿಂದ 885 ಮಕ್ಕಳೂ ಮತ್ತು 1990–91ರಲ್ಲಿ 838 ಮಕ್ಕಳೂ ಸೌಲಭ್ಯ ಪಡೆದಿದ್ದು, ಈ ವರ್ಷಗಳಲ್ಲಿ ಕ್ರಮವಾಗಿ 17.48 ಲಕ್ಷ ರೂ. ಮತ್ತು 19.70 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಪರಿಶಿಷ್ಟ ವರ್ಗದ ಐದರಿಂದ ಹತ್ತನೇಯ ತರಗತಿಯವರೆಗಿನ ವಿದ್ಯಾರ್ಥಿಗಳಿಗಾಗಿ ಜಿಲ್ಲೆಯಲ್ಲಿ 1990–91ನೇ ಸಾಲಿನಲ್ಲಿ ಏಳು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿದ್ದು, ವೀರರಾಜಪೇಟೆ ತಾಲೂಕಿನ ತಿತಿಮತಿ, ಕುಟ್ಟ ಮತ್ತು ಕಲ್ಲಹಳ್ಳದಲ್ಲಿ ಬಾಲಕರ ವಿದ್ಯಾರ್ಥಿನಿಲಯಗಳೂ ಮತ್ತು ತಿತಿಮತಿ ಮತ್ತು ಕುಟ್ಟದಲ್ಲಿ ಬಾಲಕಿಯರ ವಿದ್ಯಾರ್ಥಿ ನಿಲಯಗಳೂ ಹಾಗೂ ಸೋಮವಾರಪೇಟೆ ತಾಲೂಕಿನ ಗೋಣಿಮರೂರಿನಲ್ಲಿ ಬಾಲಕರ ವಿದ್ಯಾರ್ಥಿನಿಲಯವೂ ಮತ್ತು ಕುಶಾಲನಗರದಲ್ಲಿ ಬಾಲಕಿಯರ ವಿದ್ಯಾರ್ಥಿನಿಲಯವೂ ಕಾರ್ಯ ನಿರ್ವಹಿಸುತ್ತಿದ್ದುವು. 1989–90ನೇ ಸಾಲಿನಲ್ಲಿ 243 ವಿದ್ಯಾರ್ಥಿಗಳೂ ಮತ್ತು 1990–91ರಲ್ಲಿ 247 ವಿದ್ಯಾರ್ಥಿಗಳೂ ಇದರ ಸೌಲಭ್ಯವನ್ನು ಪಡೆದಿದ್ದು, ಕ್ರಮವಾಗಿ ಈ ಎರಡು ವಾರ್ಷಿಕ ಸಾಲುಗಳಲ್ಲಿ 5.25 ಲಕ್ಷ ರೂ. ಮತ್ತು 10.15 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಇದಲ್ಲದೆ ವಿದ್ಯಾರ್ಥಿ ನಿಲಯದಲ್ಲಿ ಇಲ್ಲದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಬಹುಮಾನ ಹಣ ಇವೇ ಮುಂತಾದ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲಾಗಿದೆ. 1989–90 ಮತ್ತು 1990–91ನೇ ಸಾಲಿನಲ್ಲಿ ಹಲವು ಶೈಕ್ಷಣಿಕ ಸೌಲಭ್ಯಗಳನ್ನು ಪಡೆದ ಫಲಾನುಭವಿಗಳ ವಿವರವನ್ನು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

| ಕ್ರ. ಸಂ. | ಯೋಜನೆಯ ಹೆಸರು | 1989–90 | | 1990–91 | |
|---|---|---|---|---|---|
| | | ಫಲಾನುಭವಿಗಳು | ವೆಚ್ಚ (ಲಕ್ಷರೂ.) | ಫಲಾನುಭವಿಗಳು | ವೆಚ್ಚ (ಲಕ್ಷರೂ.) |
| 1. | ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ವೇತನ | 126 | 0.093 | 440 | 0.37 |
| 2. | ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ | 34 | 0.35 | 35 | 0.38 |
| 3. | ಪ್ರತಿಭಾ ವಿದ್ಯಾರ್ಥಿ ವೇತನ | 61 | 0.04 | 57 | 0.08 |
| 4. | ಎಸ್.ಎಸ್.ಎಲ್.ಸಿ. ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನ | 02 | 0.01 | 03 | 0.015 |
| 5. | ವಿದ್ಯಾರ್ಥಿಗಳ ಊಟ ಮತ್ತು ವಸತಿಗಾಗಿ ಮಾಡಿದ ಅಧಿಕ ವೆಚ್ಚ | 06 | 0.012 | 01 | 0.004 |

ಪರಿಶಿಷ್ಟ ವರ್ಗದ ಯುವಕರು ಸ್ವಂತ ಉದ್ಯೋಗವನ್ನು ಕೈಗೊಳ್ಳಲು 1989–90 ರಲ್ಲಿ ಮೂರು ಯುವಕರಿಗೂ ಮತ್ತು 1990–91ರಲ್ಲಿ ಐದು ಯುವಕರಿಗೂ ತರಬೇತಿ ಪಡೆಯಲು ಕ್ರಮವಾಗಿ 3,100 ರೂ. ಮತ್ತು 5,000 ರೂ.ಗಳ ಆರ್ಥಿಕ ನೆರವನ್ನು ನೀಡಿದೆ. ವಸತಿ ಹಾಗೂ ನಿವೇಶನವಿಲ್ಲದ ಪರಿಶಿಷ್ಟ ವರ್ಗದ ಜನರಿಗೆ ವಸತಿ ಮತ್ತು ನಿವೇಶನವನ್ನು ಹಂಚುವ ಯೋಜನೆಯಲ್ಲಿ 1988-89ರಲ್ಲಿ ತಾಲೂಕುವಾರು ಫಲಾನುಭವಿಗಳ ಸಂಖ್ಯೆಯು ಮಡಿಕೇರಿ (35;25), ಸೋಮವಾರಪೇಟೆ (132;35) ಮತ್ತು ವೀರ ರಾಜಪೇಟೆ (43;8) ಆವರಣದಲ್ಲಿ ಮೊದಲಸಂಖ್ಯೆ ವಸತಿ, ಎರಡನೇಯದು ನಿವೇಶನ, ಸೂಚಿಸುತ್ತದೆ. ಒಟ್ಟಾರೆ ಈ ಸಾಲಿನ ಅಂತ್ಯದಲ್ಲಿ 6,288 ಪರಿಶಿಷ್ಟ ವರ್ಗದ ಜನರು ನಿವೇಶನ ಸೌಲಭ್ಯವನ್ನು ಮತ್ತು 2,265 ಜನರು ವಸತಿ ಸೌಲಭ್ಯವನ್ನು ಪಡೆದಿದ್ದು 1990–91ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 232 ಪರಿಶಿಷ್ಟ ವರ್ಗದ ಜನರು ನಿವೇಶನದ ಸೌಲಭ್ಯವನ್ನು ಪಡೆದಿದ್ದರು. ಭಾಗ್ಯಜ್ಯೋತಿ ಯೋಜನೆಯಲ್ಲಿ ವಿದ್ಯುತ್ ಸೌಲಭ್ಯವನ್ನು ಪಡೆದ ಪರಿಶಿಷ್ಟ ವರ್ಗದ ಫಲಾನುಭವಿಗಳು ಕ್ರಮವಾಗಿ ಮಡಿಕೇರಿ (–;23), ಸೋಮವಾರಪೇಟೆ (46;1) ಮತ್ತು ವೀರರಾಜಪೇಟೆ (11;–) ಆಗಿದ್ದು, ಆವರಣದಲ್ಲಿರುವ ಮೊದಲನೇ ಮತ್ತು ಎರಡನೇ ಸಂಖ್ಯೆಗಳು ಕ್ರಮವಾಗಿ 1989-90 ಮತ್ತು 1990-91ನೇ ಸಾಲಿನ ಫಲಾನುಭವಿಗಳನ್ನು ಸೂಚಿಸುತ್ತದೆ. 1991-92ರಲ್ಲಿ ಪರಿಶಿಷ್ಟ ವರ್ಗದ ಒಂದು ಮನೆಗೆ ಮಡಿಕೇರಿ ತಾ||ನಲ್ಲೂ 11 ಮನೆಗಳಿಗೆ ಸೋಮವಾರಪೇಟೆ ತಾ||ನಲ್ಲೂ ಈ ಸೌಲಭ್ಯವನ್ನು ಒದಗಿಸಿದೆ.

ಪರಿಶಿಷ್ಟ ವರ್ಗದ ಜನರ ಆರ್ಥಿಕ ಅಭಿವೃದ್ಧಿಗಾಗಿ ಜಿಲ್ಲೆಯಲ್ಲಿ ಪರಿಶಿಷ್ಟವರ್ಗ ಉಪಯೋಜನೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಈ ಜನರ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆ ತರಲು ಅನೇಕ ಅಭಿವೃದ್ಧಿ ಇಲಾಖೆಗಳು ಆರ್ಥಿಕ ನೆರವು ನೀಡುತ್ತಿವೆ. 1989-90ನೇ ಸಾಲಿನಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಸಾಧಿಸಿರುವ ಪ್ರಗತಿಯನ್ನು ಈ ಮುಂದೆ ನೀಡಲಾಗಿದೆ.

| ಕ್ರ.ಸಂ. | ಇಲಾಖೆಯ ಹೆಸರು | (ವೆಚ್ಚ ಲಕ್ಷ ರೂ.ಗಳಲ್ಲಿ) | ಸಾಧನೆ |
|---|---|---|---|
| 1 | 2 | 3 | 4 |
| 1. | ವಯಸ್ಕರ ಶಿಕ್ಷಣ | 1.84 | 100 ಕೇಂದ್ರಗಳು |
| 2. | ಗ್ರಾಮೀಣ ಆರೋಗ್ಯ | 11.23 | 11 ಕೇಂದ್ರಗಳು |
| 3. | ಗ್ರಾಮೀಣ ನೀರು ಪೂರೈಕೆ | 3.95 | 15 ಬೋರ್‌ವೆಲ್‌ಗಳು |
| 4. | ಗ್ರಾಮೀಣ ವಸತಿ | 2.97 | 33 ಮನೆ |

| 1 | 2 | 3 | 4 |
|---|---|---|---|
| 5. | ಜೇನು ಕುರುಬರ ಅಭಿವೃದ್ಧಿ | 10.00 | 1,500 ಘಟಕಗಳು |
| 6. | ಪೌಷ್ಠಿಕ ಆಹಾರ | 1.20 | 1,175 ಘಟಕಗಳು |
| 7. | ವ್ಯವಸಾಯ | 2.50 | 174 ಘಟಕಗಳು |
| 8. | ತೋಟಗಾರಿಕೆ | 4.49 | 57 ಹೆ. |
| 9. | ಪಶುಸಂಗೋಪನೆ | 3.89 | 61 ಘಟಕಗಳು |
| 10. | ಅರಣ್ಯ ಇಲಾಖೆ | 3.97 | 158 ಘಟಕಗಳು |
| 11. | ರೇಷ್ಮೆ ಇಲಾಖೆ | 3.78 | 90 ಘಟಕಗಳು |
| 12. | ಕೈಗಾರಿಕೆ ಮತ್ತು ವಾಣಿಜ್ಯ | 3.98 | 89 ಘಟಕಗಳು |
| 13. | ರಸ್ತೆ ಮತ್ತು ಸಂಪರ್ಕ | 18.00 | 248 ಕಿ.ಮೀ. ರಸ್ತೆ |
| 14. | ಸಣ್ಣ ನೀರಾವರಿ | 2.75 | ನಾಲ್ಕು ಯೋಜನೆಗಳು |
| 15. | ಮೀನುಗಾರಿಕೆ ಇಲಾಖೆ | 0.49 | 44 ಘಟಕಗಳು |
| 16. | ಜೀವವಿಮೆ | 2.00 | 596 |

**ಜಿಲ್ಲಾ ಕಾನೂನು ನೆರವು ಸಮಿತಿ**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರಿಗೆ ಉಚಿತವಾಗಿ ಕಾನೂನು ನೆರವು ನೀಡುವ ಸಲುವಾಗಿ ಕಾನೂನು ನೆರವು ಸಮಿತಿಯು ಜಿಲ್ಲೆಯಲ್ಲಿ 1984 ರಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಯೋಜನೆಯಲ್ಲಿ ವಕೀಲರ ಹಾಗೂ ಕೋರ್ಟ್ ಸ್ಟ್ಯಾಂಪ್ ಶುಲ್ಕವನ್ನು ಇಲಾಖೆಯು ನೀಡುತ್ತದೆ. ಈ ಯೋಜನೆಯಿಂದ 1984ರಲ್ಲಿ ಐದು ಪರಿಶಿಷ್ಟ ಜಾತಿಯ ಜನರೂ ಮತ್ತು ಒಬ್ಬ ಪರಿಶಿಷ್ಟ ವರ್ಗದವರೂ ಸೌಲಭ್ಯವನ್ನು ಪಡೆದಿದ್ದು, ಇದಕ್ಕಾಗಿ 2,097 ರೂ.ಗಳನ್ನು ವೆಚ್ಚ ಮಾಡಿದೆ. 1988-89ರಲ್ಲಿ ಪರಿಶಿಷ್ಟ ಜಾತಿಯ ಎಂಟು ಜನರು ಮತ್ತು ಪರಿಶಿಷ್ಟ ವರ್ಗದ ಇಬ್ಬರು ಹಾಗೂ 1989-90ರಲ್ಲಿ ಪರಿಶಿಷ್ಟ ಜಾತಿಯ ಐದು ಜನರೂ ಈ ಸೌಲಭ್ಯವನ್ನು ಪಡೆದಿರುತ್ತಾರೆ.

**ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ**

ಈ ನಿಗಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಡುಬಡವರಾದವರಿಗೆ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ 1975ರಲ್ಲಿ ಸ್ಥಾಪಿತವಾಗಿ, ಇದರ ಜಿಲ್ಲಾ ಕಚೇರಿಯು 1979ರಲ್ಲಿ ಪ್ರಾರಂಭವಾಯಿತು. ನಿಗಮವು ಈ ವರ್ಗಗಳ ಜನರು ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಅರ್ಹರಾದವರಿಗೆ ತಲಾ 3,000 ರೂ. ಸಹಾಯಧನವನ್ನು ಹಾಗೂ ಶೇ. 4ರ ಬಡ್ಡಿಯಂತೆ ಗರಿಷ್ಠ ಮೊತ್ತ 8,750 ರೂ.ಗಳನ್ನು ಬೀಜಧನವನ್ನಾಗಿಯೂ ನೀಡಿ, ಉಳಿದ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನ ಮೂಲಕ ಸಾಲದ ಸೌಲಭ್ಯವನ್ನಾಗಿ ಒದಗಿಸುತ್ತದೆ. ನಿಗಮಕ್ಕೆ ಪ್ರತೀ ಫಲಾಪೇಕ್ಷಿಗೂ 10,000 ರೂ.ನಿಂದ 35,000 ರೂ.ವರೆಗೆ ಸಾಲದ ಸೌಲಭ್ಯವನ್ನು ಒದಗಿಸುವ ಅವಕಾಶವಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕೃಷಿ ಕಾರ್ಮಿಕರು ಜಮೀನು ಕೊಳ್ಳಲು ಗರಿಷ್ಠ ಮಿತಿ 20,000 ರೂ.ವರೆವಿಗೆ ಸಾಲವನ್ನು ಮಂಜೂರು ಮಾಡಿ, ಇದರ ಶೇ. 50ರಷ್ಟನ್ನು ಸಹಾಯಧನವನ್ನಾಗಿ ನೀಡುತ್ತದೆ. ಅಲ್ಲದೆ ನೀರಾವರಿಗಾಗಿ ಕೊಳವೆ ಬಾವಿಯನ್ನು ತೋಡಿಸಲು ಆರ್ಥಿಕ ನೆರವನ್ನು ನೀಡುವುದು, ಕೈಮಗ್ಗ, ನೇಯ್ಗೆ, ವಾಹನಗಳ ಚಾಲನೆ, ರೇಡಿಯೋ ಮತ್ತು ದೂರದರ್ಶನ ರಿಪೇರಿ ಇವೇ ಮುಂತಾದ ಕ್ಷೇತ್ರಗಳಲ್ಲಿ ಅರ್ಹವ್ಯಕ್ತಿಗಳಿಗೆ ತರಬೇತಿಯನ್ನು ನೀಡುವುದು, ಇತ್ಯಾದಿ ಆರ್ಥಿಕಾಭಿವೃದ್ಧಿ ಚಟುವಟಿಕೆಗಳನ್ನು ನಿಗಮವು ಕೈಗೊಂಡಿದೆ.

1989-90 ಮತ್ತು 1990-91ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ಕ್ರ. ಸಂ. | ತಾಲೂಕು | 1989-90 | | | 1990-91 | | |
|---|---|---|---|---|---|---|---|
| | | ಫಲಾನುಭವಿಗಳು | | ಸಹಾಯಧನ | ಫಲಾನುಭವಿಗಳು | | ಸಹಾಯಧನ |
| | | ಪ.ಜಾತಿ | ಪ.ವರ್ಗ | ಲಕ್ಷರೂ.ಗಳಲ್ಲಿ | ಪ.ಜಾತಿ | ಪ.ವರ್ಗ | ಲಕ್ಷರೂ.ಗಳಲ್ಲಿ |
| 1. | ಮಡಿಕೇರಿ | 50 | 25 | 1.21 | 27 | 01 | 0.60 |
| 2. | ವೀರರಾಜಪೇಟೆ | 70 | 52 | 1.92 | 34 | 15 | 0.67 |
| 3. | ಸೋಮವಾರಪೇಟೆ | 105 | 35 | 1.74 | 89 | 14 | 1.82 |

ಕೆಲವು ಸ್ವಯಂಸೇವಾ ಸಂಸ್ಥೆಗಳೂ ಸಹ ಪರಿಶಿಷ್ಟ ವರ್ಗದ ಕಲ್ಯಾಣ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಕೈಗೊಂಡಿವೆ.

ಶ್ರೀ ಸದ್ಗುರು ಸಾಯಿಶಂಕರ ಟ್ರಸ್ಟ್ 1977ರಲ್ಲಿ ಪೊನ್ನಂಪೇಟೆಯಲ್ಲಿ ಪ್ರಾರಂಭವಾಯಿತು. ಇದು ವೀರರಾಜಪೇಟೆ ತಾಲೂಕಿನ ಯೆರವರ ಕಾಲೋನಿ, ಕುರುಬರ ಕಾಲೋನಿ, ದಲಿತ ವರ್ಗದವರ ನಿವಾಸ ಸ್ಥಳ ಇವೇ ಮುಂತಾದ ಕಡೆಗಳಲ್ಲಿ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ಉತ್ತಮಪಡಿಸುವಂತಹ ಹಲವು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಉತ್ತಮ ಬೇಸಾಯಕ್ಕೆ ಬೇಕಾದ ಸಾಮಗ್ರಿಗಳನ್ನು ಕೃಷಿಕರಿಗೆ ಒದಗಿಸುವುದು, ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡುವುದು, ದೈಹಿಕ ಮತ್ತು ಮಾನಸಿಕ ನೈರ್ಮಲ್ಯದ ಬಗ್ಗೆ ಜನರಿಗೆ ಅರಿವು ಮೂಡಿಸುವುದು, ಶಾಲೆ ಮತ್ತು ವಸತಿಗಳ ನಿರ್ಮಾಣ, ನೀರಿನ ಪೂರೈಕೆ – ಇವೇ ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡಿರುವುದೇ ಅಲ್ಲದೆ, ಗ್ರಾಮೀಣ ಜನರಿಗೆ ರಿಯಾಯಿತಿ ದರದಲ್ಲಿ ಆರೋಗ್ಯ ತಪಾಸಣೆ ಮತ್ತು ಔಷಧವನ್ನು ನೀಡಲು ಪೊನ್ನಂಪೇಟೆಯಲ್ಲಿ ಒಂದು ಆರೋಗ್ಯ ಕೇಂದ್ರವನ್ನೂ 1990ರಲ್ಲಿ ಪ್ರಾರಂಭಿಸಿದೆ.

ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು (ಕಾರ್ಡ್) 1981ರಲ್ಲಿ ಸೋಮವಾರಪೇಟೆ ಮತ್ತು ವೀರರಾಜಪೇಟೆ ತಾಲೂಕುಗಳ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಕೆಲವು ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಉದ್ದೇಶದಿಂದ ಕುಶಾಲನಗರದಲ್ಲಿ ಪ್ರಾರಂಭವಾಯಿತು. ಸಮುದಾಯ ಸಂಘಟನೆ, ಜನಸಂಪರ್ಕ ಸಭೆಯನ್ನು ಏರ್ಪಡಿಸುವುದು, ಸಾಮಾಜಿಕ ಶಿಕ್ಷಣ, ಕಾನೂನು ಶಿಕ್ಷಣ, ಆರೋಗ್ಯ ಶಿಕ್ಷಣ ಇವೇ ಮುಂತಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸ್ಥಳೀಯ ಸಂಪನ್ಮೂಲದಿಂದ ಅರ್ಥಿಕಾಭಿವೃದ್ಧಿ ಕಾರ್ಯಕ್ರಮಗಳನ್ನು ಮತ್ತು ಸಮುದಾಯ ಆರೋಗ್ಯ ಕಾರ್ಯಕ್ರಮ, ಸಾಂಸ್ಕೃತಿಕ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿವೆ.

## ಹಿಂದುಳಿದ ವರ್ಗದವರ ಕಲ್ಯಾಣ

ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಆಂದೋಲನವು ಸ್ವಾತಂತ್ರ್ಯ ಪೂರ್ವದಲ್ಲೇ ಆರಂಭವಾಗಿದ್ದರೂ ಸಹ ಸ್ವಾತಂತ್ರ್ಯದ ನಂತರ ಇದು ತೀವ್ರಗೊಂಡಿತು. 1917ರಲ್ಲಿ ಮೈಸೂರಿನಲ್ಲಿ ಆರಂಭವಾದ ಪ್ರಜಾಮಿತ್ರ ಮಂಡಳಿ, ಮದ್ರಾಸಿನ ಜಸ್ಟಿಸ್ ಪಕ್ಷ ಹಾಗೂ ಉತ್ತರ ಕರ್ನಾಟಕದಲ್ಲಿನ ಬ್ರಾಹ್ಮಣೇತರ ಪರಿಷತ್ ಸ್ವಾತಂತ್ರ್ಯ ಪೂರ್ವದ ಹಿಂದುಳಿದವರ ಚಳವಳಿಗಳು. ಆದರೆ ಕೊಡಗಿನಲ್ಲಿ ಇಂಥ ಚಳವಳಿಗಳ ಪ್ರಭಾವ ಹೇಳಿಕೊಳ್ಳುವಂತಹದಲ್ಲ. 1953ರಲ್ಲಿ ಭಾರತ ಸರ್ಕಾರವು ಹಿಂದುಳಿದ ವರ್ಗಗಳನ್ನು ಗುರುತಿಸಿ, ಶೈಕ್ಷಣಿಕ ಮತ್ತು ಉದ್ಯೋಗಾವಕಾಶಗಳಲ್ಲಿ ಅವರಿಗೆ ನೀಡಬೇಕಾದ ಮೀಸಲಾತಿಯನ್ನು ನಿರ್ಧರಿಸಲು ಕಾಕಾ ಕಾಲೇಲ್ಕರ್ ಆಯೋಗವನ್ನು ನೇಮಕ ಮಾಡಿತು. ಆದರೆ ಇದರ ಶಿಫಾರಸು ತೃಪ್ತಿಕರವಾಗಿರಲಿಲ್ಲವಾದ್ದರಿಂದ ಹಿಂದುಳಿದ ವರ್ಗಗಳಿಗೆ ರಕ್ಷಣೆ ನೀಡಲು ರಾಜ್ಯಗಳು ಸೂಕ್ತ ಆಯೋಗಗಳನ್ನು ರಚಿಸಿಕೊಳ್ಳಲು ಭಾರತ ಸರ್ಕಾರವು ಆದೇಶ ನೀಡಿತು. 1958ರಲ್ಲಿ ಕರ್ನಾಟಕ ಸರ್ಕಾರವು ಒಂದು ಆಜ್ಞೆಯನ್ನು ಹೊರಡಿಸಿ, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ವರ್ಗದ ಜನಾಂಗಗಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಶೇ. 75ರಷ್ಟು ಸ್ಥಾನಗಳನ್ನು ಮೀಸಲಿಡುವಂತೆ ಆದೇಶ ನೀಡಿದ್ದು, ಈ ಆಜ್ಞೆಯನ್ನು ಉಚ್ಚ ನ್ಯಾಯಾಲಯವು ಅನೂರ್ಜಿತಗೊಳಿಸಲಾಗಿ, 1959ರಲ್ಲಿ ಪುನಃ ಕರ್ನಾಟಕ ಸರಕಾರವು ಈ ವಿಷಯದ ಬಗೆಗೆ ಒಂದು ಆಜ್ಞೆ ಹೊರಡಿಸಿ, ವಿದ್ಯಾಸಂಸ್ಥೆಗಳಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಶೇ.65 ಇರಬೇಕೆಂದು ಘೋಷಿಸಿತ್ತು. ಈ ಆಜ್ಞೆಯನ್ನು ಉಚ್ಚ ನ್ಯಾಯಾಲಯವು ಮತ್ತೊಮ್ಮೆ ಅನೂರ್ಜಿತಗೊಳಿಸಲಾಗಿ 1960ರಲ್ಲಿ ಸರಕಾರವು ಹಿಂದುಳಿದಿರುವಿಕೆಯನ್ನು ನಿರ್ಧರಿಸುವ ಮಾನದಂಡವನ್ನು ಮತ್ತು ಇವರಿಗೆ ಇರಬೇಕಾದ ಮೀಸಲಾತಿಯನ್ನು ಸೂಚಿಸುವ ಸಲುವಾಗಿ ಡಾ॥ ಆರ್. ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರೂಪಿಸಿತು. ಈ ಸಮಿತಿಯ ಶಿಫಾರಸಿನ ಮೇಲೆ ಸರ್ಕಾರವು 1962ರಲ್ಲಿ ಹೊರಡಿಸಿದ ಮೀಸಲಾತಿಯ ಆಜ್ಞೆಯನ್ನು 1963ರಲ್ಲಿ ಶ್ರೇಷ್ಠ ನ್ಯಾಯಾಲಯವು ಅನೂರ್ಜಿತಗೊಳಿಸಿತು. ಇದರ ಪರಿಣಾಮವಾಗಿ 1972ರಲ್ಲಿ ಎಲ್. ಜಿ. ಹಾವನೂರ್ ಅವರ ಅಧ್ಯಕ್ಷತೆಯಲ್ಲಿ ಸರ್ಕಾರವು ಕರ್ನಾಟಕ ಹಿಂದುಳಿದ ವರ್ಗದ ಆಯೋಗವನ್ನು ರಚಿಸಿತು. ಇದರ ಶಿಫಾರಸಿನಂತೆ 1977ರಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯವನ್ನು ಆರಂಭಿಸಿ, ಇದರ ಅಧೀನದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಜಿಲ್ಲಾಮಟ್ಟದ ಅಧಿಕಾರಿಗಳ ಕಚೇರಿಗಳನ್ನು ಪ್ರಾರಂಭಿಸಿತು. ಇದಕ್ಕೆ ಮುಂಚೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ಸಮಾಜ ಕಲ್ಯಾಣ ಇಲಾಖೆಯೇ ನಿರ್ವಹಿಸುತ್ತಿತ್ತು. ಹಾವನೂರ್ ಆಯೋಗದ ವರದಿಯನ್ನು ಜಾರಿಗೊಳಿಸಿದ ಸರಕಾರಿ ಆಜ್ಞೆಯನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ, ಉಚ್ಚ ನ್ಯಾಯಾಲಯಕ್ಕೆ ರಾಜ್ಯ ಸರ್ಕಾರವು ಒಂದು ಮುಚ್ಚಳಿಕೆಯನ್ನು ನೀಡಿ, ಕರ್ನಾಟಕದ ಎರಡನೇಯ ಹಿಂದುಳಿದ ವರ್ಗಗಳ ಆಯೋಗವನ್ನು ಜಸ್ಟಿಸ್ ಟಿ. ವೆಂಕಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ರಚಿಸಿತು. ಈ ಆಯೋಗವು 1986ರಲ್ಲಿ ವರದಿಯನ್ನು ಸಲ್ಲಿಸಿತು. ಆದರೆ ಕಾರಣಾಂತರಗಳಿಂದ ಸರ್ಕಾರವು ಇದನ್ನು ಜಾರಿಗೊಳಿಸದೆ ಒಂದು ಮಧ್ಯಂತರ ಆಜ್ಞೆಯನ್ನು ಮೂರು ವರ್ಷಗಳ ಕಾಲಕ್ಕೆ ಹೊರಡಿಸಿ, ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿಯ ಏಕವ್ಯಕ್ತಿ ಆಯೋಗವನ್ನು ರಚಿಸಿತು. ಈ ಆಯೋಗವು 1989ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರೂ ಸಹ ಅದು ಇನ್ನೂ ಜಾರಿಗೆ ಬಂದಿಲ್ಲವಾದ್ದರಿಂದ ಮಧ್ಯಂತರದ ಸರಕಾರಿ ಆಜ್ಞೆಯೇ ಮುಂದುವರೆಯುತ್ತಿದೆ. ಈ ಆಜ್ಞೆಯಂತೆ ಹಿಂದುಳಿದ ವರ್ಗಗಳನ್ನು ಕೆಳಗೆ ಸೂಚಿಸಿರುವಂತೆ ಐದು ಗುಂಪಾಗಿ ವಿಂಗಡಿಸಿ ಮೀಸಲಾತಿಯನ್ನು ನಿಯಮಿಸಿದೆ.

| ಕ್ರ. ಸಂ. | ಹಿಂದುಳಿದ ವರ್ಗಗಳು | ಎಲ್ಲಾ ಸಂಪನ್ಮೂಲಗಳಿಂದ ಕುಟುಂಬದ ವಾರ್ಷಿಕ ಆದಾಯ | ಶೇಕಡಾ ಮೀಸಲಾತಿ ಸಂವಿಧಾನದ ವಿಧಿ 15(4) | 16(4) |
|---|---|---|---|---|
| 1. | 'ಎ' ಗುಂಪು | ಆದಾಯ ಮಿತಿ ಇಲ್ಲ | 5 | 5 |
| 2. | 'ಬಿ' ಗುಂಪು | ರೂ. 10,000 ವರೆಗೆ | 15 | 13 |
| 3. | 'ಸಿ' ಗುಂಪು | ರೂ. 10,000 ವರೆಗೆ | 16 | 16 |
| 4. | 'ಡಿ' ಗುಂಪು | ರೂ. 10,000 ವರೆಗೆ | 9 | 11 |
| 5. | 'ಇ' ಗುಂಪು (ಹಿಂದುಳಿದ ವಿಶೇಷ ಗುಂಪು) | ರೂ. 8,000 ವರೆಗೆ | 5 | 5 |

### ಕಲ್ಯಾಣ ಕಾರ್ಯಕ್ರಮಗಳು

ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಮತ್ತು ಅವರು ಹೆಚ್ಚು ಅರ್ಹತೆಯುಳ್ಳ ವಿದ್ಯಾರ್ಥಿಗಳ ಮಟ್ಟಕ್ಕೆ ಬರುವಂತೆ ಮಾಡಲು ಇಲಾಖೆಯು ವಿದ್ಯಾರ್ಥಿ ನಿಲಯಗಳ ಸೌಲಭ್ಯ, ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಪ್ರೋತ್ಸಾಹ ಧನವನ್ನು ನೀಡುವುದು, ವಿದ್ಯಾರ್ಥಿವೇತನವನ್ನು ನೀಡುವುದು ಇವೇ ಮುಂತಾದ ಶೈಕ್ಷಣಿಕ ಸೌಲಭ್ಯಗಳನ್ನೊದಗಿಸಿದೆ. ಇದಲ್ಲದೆ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಹಾಸಿಗೆ, ಹೊದಿಕೆಗಳನ್ನು ಸರಬರಾಜು ಮಾಡುವುದು, ಸ್ವಯಂಸೇವಾ ಸಂಸ್ಥೆಗಳಿಗೆ ವಿದ್ಯಾರ್ಥಿನಿಲಯದ ಕಟ್ಟಡಗಳನ್ನು ನಿರ್ಮಿಸಲು ಅನುದಾನ ನೀಡುವುದು, ವಿದ್ಯಾರ್ಥಿನಿಲಯಗಳಿಗೆ ಕ್ರೀಡಾ ಉಪಕರಣ ವನ್ನು ಒದಗಿಸುವುದು, ಬೆರಳಚ್ಚು ಮತ್ತು ಶೀಘ್ರಲಿಪಿಯನ್ನು ಅಭ್ಯಾಸ ಮಾಡುತ್ತಿರುವವರಿಗೆ ಶಿಷ್ಯವೇತನ ನೀಡುವುದು ಇವೇ ಮುಂತಾದ ಸೌಲಭ್ಯಗಳನ್ನು ಇಲಾಖಾವತಿಯಿಂದ ಒದಗಿಸ ಲಾಗಿದೆ. 1980ರಲ್ಲಿ ಮಡಿಕೇರಿ ಮತ್ತು ವೀರರಾಜಪೇಟೆ ತಾಲೂಕುಗಳಲ್ಲಿ ಕ್ರಮವಾಗಿ ಎರಡು ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳೂ, ಸೋಮವಾರಪೇಟೆ ತಾಲೂಕಿನಲ್ಲಿ ಒಂದು ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿನಿಲಯವೂ ಮತ್ತು ವೀರರಾಜಪೇಟೆ ತಾಲೂಕಿನಲ್ಲಿ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವೂ ಇದ್ದಿತು. 1990–91ನೇ ಸಾಲಿನಲ್ಲಿ ಮಡಿಕೇರಿ ತಾಲೂಕಿನ ಮೂರ್ನಾಡು, ಸಂಪಾಜೆ ಮತ್ತು ಭಾಗಮಂಡಲಗಳಲ್ಲೂ, ವೀರರಾಜಪೇಟೆ ತಾಲೂಕಿನ ಶ್ರೀಮಂಗಲ, ಪೊನ್ನಂಪೇಟೆ, ವೀರರಾಜಪೇಟೆ ಮತ್ತು ಮಾಯಮುಡಿಗಳಲ್ಲೂ ಮತ್ತು ಸೋಮವಾರಪೇಟೆ ತಾಲೂಕಿನ ಸೋಮವಾರಪೇಟೆ, ಕೊಡ್ಲಿ ಪೇಟೆ, ಸುಂಟಿಕೊಪ್ಪ, ಕುಶಾಲನಗರ, ಶನಿವಾರಸಂತೆ, ಚೆಟ್ಟಳ್ಳಿ ಮತ್ತು ಶಿರಂಗಾಲಗಳಲ್ಲಿ ಬಾಲಕರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳೂ, ವೀರರಾಜಪೇಟೆ ತಾಲೂಕಿನ ಪೊನ್ನಂಪೇಟೆಯಲ್ಲಿ ಬಾಲಕಿಯರ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯವೂ ಸೇರಿದಂತೆ ಒಟ್ಟು 15 ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯ ಗಳೂ, ವೀರರಾಜಪೇಟೆ ತಾಲೂಕಿನ ಗೋಣಿಕೊಪ್ಪಲಿನಲ್ಲಿ ಬಾಲಕರ ಮತ್ತು ಮಡಿಕೇರಿಯಲ್ಲಿ ಬಾಲಕಿಯರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳೂ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. 1989–90 ಮತ್ತು 1990–91ನೇ ಸಾಲಿನಲ್ಲಿ ವಿವಿಧ ಯೋಜನೆಯಲ್ಲಿ ಆದ ಭೌತಿಕ ಮತ್ತು ಆರ್ಥಿಕ ಸಾಧನೆಗಳನ್ನು ಈ ಮುಂದಿನ ಪಟ್ಟಿಯಲ್ಲಿ ಕೊಡ ಲಾಗಿದೆ.

| ಕ್ರ. ಸಂ. | ಯೋಜನೆಯ ಹೆಸರು. | ಸೌಲಭ್ಯ ಪಡೆದವರ ಸಂಖ್ಯೆ | | ವೆಚ್ಚ ಮಾಡಿದ ಹಣ (ಲಕ್ಷ ರೂ.ಗಳಲ್ಲಿ) | |
|---|---|---|---|---|---|
| | | 1989–90 | 1990–91 | 1989–90 | 1990–91 |
| 1 | 2 | 3 | 4 | 5 | 6 |
| 1. | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು | 572 | 632 | 14.11 | 18.09 |
| 2. | ಮೆಟ್ರಿಕ್ ನಂತರದ ” | 124 | 94 | 3.22 | 3.47 |
| 3. | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | 8,762 | 7,964 | 6.94 | 6.30 |
| 4. | ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ | 1,861 | 2,303 | 5.74 | 6.95 |
| 5. | ‘ಎ’ ಗುಂಪಿಗೆ ಮೆಟ್ರಿಕ್ ಪೂರ್ವ ವೇತನ | 135 | 132 | 0.14 | 0.10 |
| 6. | ‘ಎ’ ಗುಂಪಿಗೆ ಮೆಟ್ರಿಕ್ ನಂತರದ ವೇತನ | 16 | 33 | 0.05 | 0.10 |
| 7. | ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ | 5 | 6 | 1.00 | 3.00 |

| 1 | 2 | 3 | 4 | 5 | 6 |
|---|---|---|---|---|---|
| 8. | ಬೆರಳಚ್ಚು, ಶೀಘ್ರಲಿಪಿ ತರಬೇತಿದಾರರಿಗೆ ಸ್ಟೈಪೆಂಡ್ ನೀಡಿಕೆ | 31 | 29 | 0.15 | 0.14 |
| 9. | ಕ್ರೀಡಾ ಉಪಕರಣಗಳು | 5 (ವಿ.ನಿಲಯಗಳಿಗೆ) | 10 (ವಿ.ನಿಲಯಗಳಿಗೆ) | 0.04 | 0.05 |
| 10. | ಶುಲ್ಕ ರಿಯಾಯಿತಿ | 996 | 1,304 | 1.07 | 1.04 |
| 11. | ಸ್ವಯಂ ಬೋಧನಾ ಕೇಂದ್ರ | — | 18 | — | 0.007 |

1991–92ನೇ ಸಾಲಿನಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಕ್ಕಾಗಿ ವೆಚ್ಚ ಮಾಡಿದ ಹಣ ಮತ್ತು ಫಲಾನುಭವಿಗಳ ಸಂಖ್ಯೆ ಈ ರೀತಿ ಇದೆ. ಹಿಂದುಳಿದ ವರ್ಗಗಳ ಬಿ, ಸಿ, ಡಿ ಮತ್ತು ಇ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 5.06 ಲಕ್ಷ ರೂ. (5,946), ಹಿಂದುಳಿದ ವರ್ಗಗಳ 'ಎ' ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 0.2 ಲಕ್ಷರೂ. (232), ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಿ, ಸಿ, ಡಿ, ಇ ವರ್ಗದ ವಿದ್ಯಾರ್ಥಿ ವೇತನ 8.38 ಲಕ್ಷ ರೂ. (2,793), ಹಿಂದುಳಿದ ವರ್ಗಗಳ 'ಎ' ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ 0.2 ಲಕ್ಷ ರೂ. (66), ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 21.41 ಲಕ್ಷ ರೂ. (644), ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 4.13 ಲಕ್ಷ ರೂ. (112), ವಿದ್ಯಾರ್ಥಿ ನಿಲಯಗಳ ಸುಧಾರಣೆ–1.14 ಲಕ್ಷ ರೂ. (17 ವಿದ್ಯಾರ್ಥಿ ನಿಲಯಗಳು), ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ–1 ಲಕ್ಷ ರೂ. (6 ವಿದ್ಯಾರ್ಥಿ ನಿಲಯಗಳು), ಹಿಂದುಳಿದ ವರ್ಗಗಳ 'ಎ' ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟ ಮತ್ತು ವಸತಿ ವೆಚ್ಚ–0.44 ಲಕ್ಷ ರೂ. (29), ಶುಲ್ಕ ರಿಯಾಯುತಿ ನೀಡಿಕೆ–1.17 ಲಕ್ಷ ರೂ. (1,122), ವಿದ್ಯಾರ್ಥಿಗಳಿಗೆ ಉತ್ತೇಜನ ಬಹುಮಾನ ನೀಡಿಕೆ–0.015 ಲಕ್ಷ ರೂ. (13) ಮತ್ತು ಬೆರಳಚ್ಚು ಮತ್ತು ಶೀಘ್ರಲಿಪಿಯ ತರಬೇತಿದಾರರಿಗೆ ಸ್ಟೈಪೆಂಡ್ ನೀಡಿಕೆ–0.15 ಲಕ್ಷ ರೂ. (33). ಆವರಣದಲ್ಲಿ ಫಲಾನುಭವಿಗಳ ಸಂಖ್ಯೆಯನ್ನು ಸೂಚಿಸಿದೆ.

ಹಿಂದುಳಿದ ವರ್ಗಗಳ ಮಹಿಳೆಯರು ಹೊಲಿಗೆ ಕ್ಷೇತ್ರದಲ್ಲಿ ತರಬೇತಿ ಹೊಂದಿ ತಮ್ಮ ಜೀವನೋಪಾಯವನ್ನು ನಡೆಸಲು ಸಾಧ್ಯವಾಗುವಂತೆ ಮಾಡಿಕೊಳ್ಳಲು ಸೋಮವಾರಪೇಟೆ ತಾಲೂಕಿನ ಚೆಟ್ಟಳ್ಳಿಯಲ್ಲಿ ಒಂದು ಹೊಲಿಗೆ ತರಬೇತಿ ಕೇಂದ್ರವು 1982ರಲ್ಲಿ ಸ್ಥಾಪನೆಯಾಯಿತು. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಜಿಲ್ಲಾ ಅಧಿಕಾರಿಯು ಈ ಯೋಜನೆಯನ್ನು ಕಾರ್ಯಗತಗೊಳಿಸುವ ಪ್ರಾಧಿಕಾರಿಯಾಗಿರುತ್ತಾರೆ. ಈ ತರಬೇತಿ ಕೇಂದ್ರದಿಂದ 1989–90ರಲ್ಲಿ 17 ಮಹಿಳೆಯರೂ ಮತ್ತು 1990–91ರಲ್ಲಿ 15 ಮಹಿಳೆಯರೂ ತರಬೇತಿಯನ್ನು ಪಡೆದಿದ್ದು ಈ ಎರಡು ವರ್ಷಗಳಲ್ಲಿ ಇಲಾಖೆಯು ಕ್ರಮವಾಗಿ 44,500 ರೂ. ಮತ್ತು 46,919 ರೂ.ಗಳನ್ನು ವೆಚ್ಚ ಮಾಡಿದೆ. 1991-92ರಲ್ಲಿ ಹೊಲಿಗೆ ತರಬೇತಿ ಕೇಂಪ್ರದಿಂದ 19 ಮಹಿಳೆಯರು ತರಬೇತಿ ಪಡೆದಿದ್ದು, ಇದಕ್ಕಾಗಿ ಇಲಾಖೆಯು 47,572 ರೂ.ಗಳನ್ನು ಖರ್ಚು ಮಾಡಿದೆ.

### ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸಿನಂತೆ 1977ರಲ್ಲಿ "ಕರ್ನಾಟಕದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ" ಅಸ್ತಿತ್ವಕ್ಕೆ ಬಂದಿದ್ದು ಇದರ ಜಿಲ್ಲಾ ಮಟ್ಟದ ಕಚೇರಿಯು 1978ರಲ್ಲಿ ಆರಂಭವಾಯಿತು. 1986ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರತ್ಯೇಕವಾದ ಅಭಿವೃದ್ಧಿ ನಿಗಮವು ಸ್ಥಾಪನೆಯಾಯಿತು. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 'ಚೈತನ್ಯ' ಮಾರ್ಜಿನ್ ಹಣ ಸಾಲದ ಯೋಜನೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಎ, ಬಿ, ಸಿ, ಮತ್ತು ಡಿ ಗುಂಪಿನ ಜನರಿಗೆ ಅವರ ವಾರ್ಷಿಕ ಆದಾಯ 6,000 ರೂ.ಗಿಂತ ಕಡಿಮೆ ಇರುವವರಿಗೆ ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ಯೋಜನೆಗಳಿಗೆ ಬ್ಯಾಂಕುಗಳ ಸಹಯೋಗದೊಂದಿಗೆ ಸಾಲವನ್ನು ನೀಡಲಾಗುವುದು. ಬ್ಯಾಂಕುಗಳು ಸಾಲ ಮಂಜೂರು ಮಾಡುವ 5,000 ರೂ.ವರೆಗಿನ ಸಾಲಕ್ಕೆ ಶೇ. 50ರಷ್ಟನ್ನು, 5,001

ರೂ.ನಿಂದ 10,000 ರೂ.ವರೆಗಿನ ಸಾಲಕ್ಕೆ ಶೇ. 30 ರಷ್ಟನ್ನು ಮತ್ತು 10,001 ರೂ.ನಿಂದ 15,000 ರೂ. ವರೆಗಿನ ಸಾಲಕ್ಕೆ ಶೇ. 20ರಷ್ಟು ಮಾರ್ಜಿನ್ ಹಣವನ್ನು ನಿಗಮದಿಂದ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ 1989–90 ಮತ್ತು 1990–91ನೇ ಸಾಲುಗಳಲ್ಲಿ ತಾಲೂಕುವಾರು ಸೌಲಭ್ಯ ಪಡೆದವರ ಸಂಖ್ಯೆ ಕ್ರಮವಾಗಿ ಮಡಿಕೇರಿ (13;7), ಸೋಮವಾರಪೇಟೆ (5;3) ಮತ್ತು ವೀರರಾಜಪೇಟೆ (5;5) ಆಗಿದ್ದು, ಒಟ್ಟಾರೆ ಈ ಎರಡು ವರ್ಷಗಳಲ್ಲಿ ಕ್ರಮವಾಗಿ 54,650 ರೂ. ಮತ್ತು 37,950 ರೂ.ಗಳನ್ನು ವೆಚ್ಚ ಮಾಡಲಾಗಿದೆ. ಇದಲ್ಲದೆ ಹಿಂದುಳಿದ ವರ್ಗಗಳ ಎ.ಬಿ.ಸಿ.ಡಿ. ಗುಂಪಿನ ನಿರುದ್ಯೋಗಿ ಯುವಕರಿಗೆ ಕುಟುಂಬದ ವಾರ್ಷಿಕ ಆದಾಯವು 6,000 ರೂ.ಗಳಿಗಿಂತ ಕಡಿಮೆ ಇರುವವರಿಗೆ ಆಟೋರಿಕ್ಷಾ, ಲಘು ಮತ್ತು ಭಾರಿ ವಾಹನಗಳನ್ನು ನಡೆಸಲು ಉಚಿತವಾಗಿ ತರಬೇತಿ ನೀಡಿ ಲೈಸೆನ್ಸ್ ಕೊಡಿಸಲಾಗುವುದೇ ಅಲ್ಲದೇ ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ತಿಂಗಳಿಗೆ 200 ರೂ. ಶಿಷ್ಯ ವೇತನವನ್ನು ಸಹ ನೀಡುವುದು. ಈ ಯೋಜನೆಯಲ್ಲಿ ಜಿಲ್ಲೆಯಲ್ಲಿ 1989–90ನೇ ಸಾಲಿನಲ್ಲಿ ನಾಲ್ಕು ಜನರು ಮತ್ತು 1990-91ನೇಸಾಲಿನಲ್ಲಿ ಮೂರು ಜನರು ಈ ಸೌಲಭ್ಯವನ್ನು ಪಡೆದಿದ್ದು, ಈ ಎರಡು ವರ್ಷಗಳಲ್ಲಿ ಕ್ರಮವಾಗಿ 4,042 ರೂ. ಮತ್ತು 4,579 ರೂ.ಗಳನ್ನು ವೆಚ್ಚ ಮಾಡಲಾಗಿದೆ.

**ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತವು 1986ರಲ್ಲಿ ರಾಜ್ಯದಲ್ಲಿರುವ ಮತೀಯ ಅಲ್ಪಸಂಖ್ಯಾತರು ಅಂದರೆ ಮುಸ್ಲಿಮರು, ಕ್ರೈಸ್ತರು, ಜೈನರು, ಬೌದ್ಧರು ಶೀಖರು ಮತ್ತು ಪಾರ್ಸಿಗಳು ಈ ವರ್ಗದವರ ಏಳಿಗೆಗಾಗಿ ಸ್ಥಾಪನೆಯಾಯಿತು. ಈ ನಿಗಮವು 'ಸ್ವಾವಲಂಬನೆ' ಮಾರ್ಜಿನ್ ಹಣದ ಸಾಲದ ಯೋಜನೆಯಲ್ಲಿ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ್ದು, ಅವರ ಕುಟುಂಬದ ವಾರ್ಷಿಕ ಆದಾಯವು 6,000 ರೂ.ಗಳಿಗಿಂತ ಮೀರದೇ ಇರುವವರ ಆರ್ಥಿಕ ಅಭಿವೃದ್ಧಿಗಾಗಿ ಕೈಗಾರಿಕೆ, ಸೇವಾ ಉದ್ದಿಮೆ, ವ್ಯಾಪಾರ ಇವೇ ಮುಂತಾದ ಉದ್ದೇಶಗಳಿಗೆ ಬ್ಯಾಂಕುಗಳ ಸಹಯೋಗದೊಂದಿಗೆ ಸಾಲ ನೀಡುತ್ತದೆ.

ಮಂಜೂರಾಗುವ 5,000 ರೂ.ವರೆಗಿನ ಸಾಲಕ್ಕೆ ಶೇ. 50ರಷ್ಟನ್ನೂ 5,001 ರೂ.ನಿಂದ 10,000 ರೂ.ವರೆಗಿನ ಸಾಲಕ್ಕೆ ಶೇ. 30ರಷ್ಟನ್ನೂ ಮತ್ತು 10,001 ರೂ.ನಿಂದ 25,000 ರೂ.ವರೆಗಿನ ಸಾಲಕ್ಕೆ ಶೇ. 20 ರಷ್ಟನ್ನೂ ಮಾರ್ಜಿನ್ ಹಣವನ್ನಾಗಿ ನಿಗಮದಿಂದ ನೀಡಿ, ಈ ಹಣಕ್ಕೆ ಶೇ. 4 ರೂ.ನ್ನು ವಾರ್ಷಿಕ ಬಡ್ಡಿಯಾಗಿ ವಿಧಿಸಲಾಗುವುದು. ಈ ಯೋಜನೆಯಲ್ಲಿ 1989–90 ಮತ್ತು 1990-91ರಲ್ಲಿ ತಾಲೂಕುವಾರು ಸೌಲಭ್ಯ ಪಡೆದವರ ಸಂಖ್ಯೆ ಕ್ರಮವಾಗಿ ಮಡಿಕೇರಿ (1;14), ಸೋಮವಾರಪೇಟೆ (4;1) ಮತ್ತು ವೀರರಾಜಪೇಟೆ (10;8) ಆಗಿದ್ದು, ಒಟ್ಟಾರೆ ಈ ಎರಡು ವರ್ಷಗಳಲ್ಲಿ ಕ್ರಮವಾಗಿ 42,850 ರೂ. ಮತ್ತು 72,810 ರೂ.ಗಳನ್ನು ವೆಚ್ಚ ಮಾಡಲಾಗಿದೆ. ಇದೇ ಅಲ್ಲದೆ ನಿಗಮವು ಮತೀಯ ಅಲ್ಪಸಂಖ್ಯಾತ ವರ್ಗದ ನಿರುದ್ಯೋಗಿ ಯುವಕರಿಗೆ ಅಂಗೀಕೃತ ವಾಹನ ಚಾಲನಾ ತರಬೇತಿಯ ಮೂಲಕ ಉಚಿತ ತರಬೇತಿ ನೀಡುವುದೇ ಅಲ್ಲದೆ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ತರಬೇತಿಯ ಅವಧಿಯಲ್ಲಿ ತಿಂಗಳಿಗೆ 200 ರೂ. ಶಿಷ್ಯ ವೇತನವನ್ನು ಸಹ ನೀಡುವುದು. ಈ ಯೋಜನೆಯಲ್ಲಿ 1989-90 ಮತ್ತು 1990-91 ಸಾಲುಗಳಲ್ಲಿ ಕ್ರಮವಾಗಿ ಜಿಲ್ಲೆಯಲ್ಲಿ ಮೂವರು ಯುವಕರು ಈ ಸೌಲಭ್ಯವನ್ನು ಪಡೆದಿದ್ದು, ಇದಕ್ಕಾಗಿ ಕ್ರಮವಾಗಿ 716ರೂ. ಮತ್ತು 616 ರೂ.ಗಳನ್ನು ವೆಚ್ಚ ಮಾಡಲಾಗಿದೆ.

**ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ**

ಕೊಡಗು ಜಿಲ್ಲೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಯತ್ನವನ್ನು ಸ್ವಾತಂತ್ರ್ಯಪೂರ್ವದಲ್ಲೇ ವೀರರಾಜಪೇಟೆಯ ಕೊಡಗು ಮಹಿಳಾ ಸಹಕಾರ ಸಮಾಜ ನಿಯಮಿತ, ಸೋಮವಾರಪೇಟೆಯ ಮಹಿಳಾ ಸಹಕಾರ ಸಮಾಜ ಮತ್ತು ಮಡಿಕೇರಿಯ ಕೋಟೆ ಮಹಿಳಾ ವಿವಿಧೋದ್ದೇಶ ಸಹಕಾರ ಸಮಾಜ ಈ ಮುಂತಾದ ಸ್ವಯಂಸೇವಾ ಸಂಸ್ಥೆಗಳು ಆರಂಭಿಸಿದ್ದವು. ಈಗ ಮಹಿಳೆಯರ ಮತ್ತು ಮಕ್ಕಳ ಸಾಮಾಜಿಕ ಭದ್ರತೆಗಾಗಿ ಹಾಗೂ ಅವರ ಕಲ್ಯಾಣಕ್ಕಾಗಿ ಕ್ರಮಬದ್ಧವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಕಾರ್ಯ ನಿರ್ವಹಿಸುತ್ತಿದ್ದು, 1987ಕ್ಕೆ ಮೊದಲು ಈ ಇಲಾಖೆಯನ್ನು ಸಮಾಜ ಕಲ್ಯಾಣ ಇಲಾಖೆ ಎಂದು ಕರೆಯಲಾಗುತ್ತಿತ್ತು. ಜಿಲ್ಲಾ ಮಟ್ಟದಲ್ಲಿ ಸಹಾಯಕ ನಿರ್ದೇಶಕರು ಇಲಾಖೆಯ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಹೊಂದಿರುವುದೇ ಅಲ್ಲದೇ ಕೆಳಕಂಡ ಸಾಮಾಜಿಕ ಶಾಸನಗಳನ್ನು ಮತ್ತು ಇದರ ವ್ಯಾಪ್ತಿಗೆ ಬರುವ ನಿಯಮಾವಳಿಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ 1929 ; ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ 1958 ; ವರದಕ್ಷಿಣಾ ಅಧಿನಿಯಮ

1961 ; ದೇವದಾಸಿ ಸಮರ್ಪಣಾ ನಿಷೇಧ ಅಧಿನಿಯಮ 1982 ; ಜುವೆನೈಲ್ ಜಸ್ಟೀಸ್ ಅಧಿನಿಯಮ 1986 ; ಮತ್ತು ಅನೈತಿಕ ವ್ಯವಹಾರಗಳ (ನಿಷೇಧ) ಅಧಿನಿಯಮ 1986. ಸರ್ಕಾರವು ಡಿಸೆಂಬರ್ 8, 1987ರಂದು ಹೊರಡಿಸಿರುವ ಆಜ್ಞೆಯ ಪ್ರಕಾರ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು, ಪೋಲೀಸ್ ವೃತ್ತ ನಿರೀಕ್ಷಕರು ಮತ್ತು ತಹಸೀಲ್ದಾರ್ ಅವರು ಅವರವರ ವ್ಯಾಪ್ತಿಯಲ್ಲಿ ವರದಕ್ಷಿಣಾ ನಿಷೇಧ ಅಧಿಕಾರಿಗಳಾಗಿರುತ್ತಾರೆ.

ರಿಮ್ಯಾಂಡ್ ಹೋಂ

ಕರ್ನಾಟಕ ಮಕ್ಕಳ ಅಧಿನಿಯಮ 1964 ಇದರ ನಿಯಮಾನುಸಾರ 1971 ರಿಂದ ಮಡಿಕೇರಿಯಲ್ಲಿ ರಿಮ್ಯಾಂಡ್ ಹೋಂ ಕಾರ್ಯ ನಿರ್ವಹಿಸುತ್ತಿದೆ; ಈ ಕಾಯ್ದೆಯನ್ನು 1986 ರಿಂದ ಜುವೆನೈಲ್ ಜಸ್ಟೀಸ್ ಅಧಿನಿಯಮ ಎಂದು ಪರಿವರ್ತಿಸಲಾಗಿದ್ದು, 1989-90 ರಿಂದ ರಿಮ್ಯಾಂಡ್ ಹೋಂ ಅನ್ನು ವೀಕ್ಷಣಾಲಯ ಎಂದು ಬದಲಾಯಿಸಲಾಗಿದೆ. ಈ ಅಧಿನಿಯಮದ ಪ್ರಕಾರ ನಿರ್ಲಕ್ಷಕ್ಕೊಳಗಾದ, ಮೋಸಕ್ಕೊಳಗಾದ ಮತ್ತು ನಿಯಂತ್ರಿಸಲಾಗದಂತಹ ಮಕ್ಕಳನ್ನು ಹಾಗೂ ಬಾಲಾಪರಾಧಿಗಳನ್ನು ಈ ಗೃಹದಲ್ಲಿಟ್ಟುಕೊಂಡು ಅವರು ಬೆಳೆದ ವಾತಾವರಣ, ಅವರ ವರ್ತನೆ ಮತ್ತು ಪೂರ್ವೋತ್ತರಗಳನ್ನು ಕುರಿತು ವಿವರವಾಗಿ ತನಿಖೆ ಮಾಡಲಾಗುವುದು. ಪರಿವೀಕ್ಷಣಾಧಿಕಾರಿಗಳು ಈ ಸಂಬಂಧವಾಗಿ ಬಾಲಾಪರಾಧಿ ನ್ಯಾಯಾಲಯಕ್ಕೆ ತಮ್ಮ ವಿವರವಾದ ವರದಿಯನ್ನು ಒಪ್ಪಿಸಿದ ಮೇಲೆ ನ್ಯಾಯಾಲಯವು ಆ ಮಕ್ಕಳ ಪುನರ್ವಸತಿಯ ಬಗ್ಗೆ ನಿರ್ಣಯ ಕೈಗೊಳ್ಳುವುದು. ಈ ಕಾಯ್ದೆಯಂತೆ 1988-89 ರಲ್ಲಿ 89 ಮಕ್ಕಳು ಮತ್ತು 1989-90ರಲ್ಲಿ 70 ಮಕ್ಕಳು ವೀಕ್ಷಣಾಲಯಕ್ಕೆ ಸೇರಿಸಲ್ಪಟ್ಟಿದ್ದು, ಇದಕ್ಕಾಗಿ ಈ ಎರಡು ವರ್ಷಗಳಲ್ಲಿ ಅನುಕ್ರಮವಾಗಿ 20,150 ರೂ. ಮತ್ತು 30,908 ರೂ. ವೆಚ್ಚ ಮಾಡಲಾಗಿದೆ.

1990-91ನೇ ಸಾಲಿನ ಆರಂಭದಲ್ಲಿ ವೀಕ್ಷಣಾಲಯದಲ್ಲಿ 50 ಗಂಡು ಮಕ್ಕಳು ಮತ್ತು 25 ಹೆಣ್ಣು ಮಕ್ಕಳು ಇದ್ದು, ಇವರಲ್ಲಿ 26 ಗಂಡು ಮಕ್ಕಳು ಮತ್ತು 18 ಹೆಣ್ಣು ಮಕ್ಕಳನ್ನು ಬಾಲಮಂದಿರಕ್ಕೂ, ಒಂದು ಗಂಡು ಮಗುವನ್ನು ಬೇರೆ ಸಂಸ್ಥೆಗೂ ವರ್ಗಾವಣೆ ಮಾಡಿದ್ದು, ಮೂರು ಗಂಡು ಮಕ್ಕಳನ್ನು ಕರಾರು ಮೇಲೆ (ಬಾಂಡ್) ಬಿಡುಗಡೆ ಮಾಡಿದ್ದು 11 ಗಂಡು ಮಕ್ಕಳು ಮತ್ತು 7 ಹೆಣ್ಣು ಮಕ್ಕಳನ್ನು ಪೋಷಕರ ವಶಕ್ಕೆ ಬಿಡುಗಡೆ ಮಾಡಿದ್ದು, ಒಂದು ಗಂಡು ಮಗುವು ತಪ್ಪಿಸಿಕೊಳ್ಳಲಾಗಿ 1991ರ ಮಾರ್ಚ್ ಕೊನೆಯ ವೇಳೆಗೆ 8 ಗಂಡು ಮಕ್ಕಳು ಮಾತ್ರ ವೀಕ್ಷಣಾಲಯದಲ್ಲಿದ್ದರು ಮತ್ತು ಇದಕ್ಕಾಗಿ ಈ ಸಾಲಿನಲ್ಲಿ 11,388 ರೂ.ಗಳನ್ನು ವೆಚ್ಚ ಮಾಡಲಾಗಿದೆ. ಪರಿವೀಕ್ಷಣಾಧಿಕಾರಿ, ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ 1958 ಇವರ ಕಚೇರಿಯು ಮಡಿಕೇರಿಯಲ್ಲಿ 1958ರಲ್ಲಿ ಪ್ರಾರಂಭವಾಯಿತು. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಆಡಳಿತಾತ್ಮಕ ನಿರ್ದೇಶನದಲ್ಲಿ ಮತ್ತು ಕೊಡಗು ಜಿಲ್ಲೆಯ ಎಲ್ಲಾ ಗೌರವ ನ್ಯಾಯಾಧೀಶರುಗಳ ಆದೇಶದಂತೆ ಅಪರಾಧಿಗಳ ಅಧಿನಿಯಮವನ್ನು ಜಾರಿಗೊಳಿಸಲಾಗುತ್ತಿದೆ. ನ್ಯಾಯಾಧೀಶರು ಸಮ್ಮತಿಸಿದರೆ ಅಪರಾಧಿಯು ತನ್ನ ಮೊದಲನೇ ಅಪರಾಧವನ್ನು ಅರಿತು ಮುಂದೆ ತಿದ್ದಿಕೊಳ್ಳಲು ಅವಕಾಶವಾಗುವಂತೆ ಅವರನ್ನು ಅರ್ಹತಾ ಪರೀಕ್ಷೆಗಾಗಿ (ಪ್ರೊಬೇಷನ್ ಮೇಲೆ) ಬಿಡುಗಡೆ ಮಾಡಬಹುದು. ಅಂತಹ ಸಂದರ್ಭದಲ್ಲಿ ಪರಿವೀಕ್ಷಣಾಧಿಕಾರಿಗಳಿಗೆ ಅಪರಾಧಿಯೊಡನೆ ವೈಯಕ್ತಿಕ ಸಂಪರ್ಕವನ್ನಿಟ್ಟುಕೊಂಡು ಅವನ ನಡವಳಿಕೆಯ ಬಗ್ಗೆ ಮೇಲ್ವಿಚಾರಣೆ ಮಾಡುತ್ತಾ ಸೂಕ್ತ ಮಾರ್ಗದರ್ಶನ ನೀಡುವಂತೆ ನ್ಯಾಯಾಧೀಶರು ನಿರ್ದೇಶಿಸಬಹುದು. ಅಲ್ಲದೆ ಪರಿವೀಕ್ಷಣಾಧಿಕಾರಿಯವರಿಗೆ ಸಾಮಾಜಿಕ ಶಾಸನಗಳಾದ ನೂತನ ಮಕ್ಕಳ ಕಾಯ್ದೆ 1986 ಮತ್ತು ಅನೈತಿಕ ವ್ಯವಹಾರಗಳ (ನಿಷೇಧ) ಅಧಿನಿಯಮ 1986 ಇವುಗಳನ್ನು ಜಾರಿಗೊಳಿಸುವ ಅಧಿಕಾರವೂ ಇದೆ. 1988-89 ಮತ್ತು 1989-90ನೇ ಸಾಲುಗಳಲ್ಲಿ ಬಂದ ವಿವಿಧ ಪ್ರಕರಣಗಳ ವಿವರಗಳನ್ನು ಈ ಕೆಳಗೆ ಸೂಚಿಸಿದೆ.

| ಕ್ರ. ಸಂ. | ಪ್ರಕರಣಾ ವಿವರಗಳು | 1988-89 | 1989-90 |
|---|---|---|---|
| 1. | ಅಪರಾಧಿಗಳ ಅಧಿನಿಯಮದ ಪ್ರಕರಣಗಳು | 12 | 14 |
| 2. | ಅಪರಾಧಿಗಳ ಅಧಿನಿಯಮದ ಮೇಲ್ವಿಚಾರಣಾ ಪ್ರಕರಣಗಳು | 7 | 9 |
| 3. | ಸಾಮಾಜಿಕ ಶಾಸನಗಳ ಪ್ರಕರಣಗಳು | 24 | 52 |
| 4. | ಸ್ವೀಕಾರ ಕೇಂದ್ರ, ರಾಜ್ಯ ನಿಲಯಗಳ ಮೇಲ್ವಿಚಾರಣಾ ಪ್ರಕರಣಗಳು | 6 | 3 |
| 5. | ಪರವಾನಗಿ ಮೇಲೆ | 15 | 20 |

1990-91ನೇ ಸಾಲಿನಲ್ಲಿ ಜಿಲ್ಲೆಯ ಏಳು ನ್ಯಾಯಾಲಯಗಳಿಂದ ಅಪರಾಧಿಗಳ ಅಧಿನಿಯಮದ 20 ಪ್ರಕರಣಗಳು ಬಂದಿದ್ದು, 12 ಯುವ ಆರೋಪಿಗಳನ್ನು ಬಿಡುಗಡೆಗೊಳಿಸಿದ್ದು, ಐದು ಜನರಿಗೆ ಶಿಕ್ಷೆಯನ್ನು ಮತ್ತು ಇಬ್ಬರಿಗೆ ದಂಡವನ್ನು ವಿಧಿಸಿದ್ದು ಮತ್ತೊಂದು ಪ್ರಕರಣವು ಇತ್ಯರ್ಥವಾಗಬೇಕಾಗಿತ್ತು. ಹಾಗೆಯೇ ವರ್ಷದ ಪ್ರಾರಂಭದಲ್ಲಿ ಐದು ಪ್ರಕರಣಗಳು ಮೇಲ್ವಿಚಾರಣೆಯಲ್ಲಿದ್ದು ವರ್ಷದ ಅಂತ್ಯದಲ್ಲಿ ಆರು ಪ್ರಕರಣಗಳು ಮೇಲ್ವಿಚಾರಣೆಯಲ್ಲಿದ್ದವು. ಸಾಮಾಜಿಕ ಶಾಸನದ 52 ಪ್ರಕರಣಗಳು ವಿವಿಧ ಸಂಸ್ಥೆಗಳಿಂದ ಬಂದಿದ್ದು 43 ಪ್ರಕರಣಗಳಿಗೆ ಗೃಹ ತನಿಖಾವರದಿಯನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಕಳುಹಿಸಲಾಗಿತ್ತು. ಇದೇ ಸಾಲಿನಲ್ಲಿ ಮೂವರು ಮಾಜಿ ನಿವಾಸಿಗಳ ಅನುಕ್ರಿಯಾ ಮೇಲ್ವಿಚಾರಣಾ ಪ್ರಕರಣಗಳಿದ್ದವು. 1988-89, 89-90 ಮತ್ತು 90-91ನೇ ಸಾಲುಗಳಲ್ಲಿ ಕ್ರಮವಾಗಿ 59,267 ರೂ. 48,576 ರೂ. ಮತ್ತು 39,484 ರೂ. ವೆಚ್ಚ ಮಾಡಲಾಗಿದೆ.

### ನಿರ್ಗತಿಕ ಮತ್ತು ತಬ್ಬಲಿ ಮಕ್ಕಳ ರಕ್ಷಣೆ ಹಾಗೂ ಪೋಷಣೆ

ಭಾರತ ಸರ್ಕಾರದ ಯೋಜನೆಯ ನೇರಿಗೆ 5 ವರ್ಷದಿಂದ 12 ವರ್ಷದೊಳಗಿನ ನಿರ್ಗತಿಕ ಮತ್ತು ತಬ್ಬಲಿ ಮಕ್ಕಳಿಗೆ ರಕ್ಷಣೆ, ಶಿಕ್ಷಣ ಮತ್ತು ಪುನರ್ವಸತಿಯನ್ನು ನೀಡುವ ಸ್ವಯಂ ಸೇವಾ ಸಂಸ್ಥೆಗಳಿಗೆ ಅನುಮೋದಿತ ವೆಚ್ಚದ ಶೇ.45 ರಷ್ಟನ್ನು ಭಾರತ ಸರ್ಕಾರವೂ ಮತ್ತು ಶೇ. 45 ರಷ್ಟನ್ನು ರಾಜ್ಯ ಸರ್ಕಾರವೂ ಒದಗಿಸುತ್ತದೆ. ಉಳಿದ ಶೇ. 10 ರಷ್ಟು ವೆಚ್ಚವನ್ನು ಸಂಸ್ಥೆಯು ಭರಿಸಬೇಕಾಗುವುದು. ಈ ಯೋಜನೆಯಡಿಯಲ್ಲಿ 1989-90ರಲ್ಲಿ ಮಡಿಕೇರಿಯಲ್ಲಿ ಕೊಡಗು ಜಿಲ್ಲಾ ಶಿಶುಕಲ್ಯಾಣ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದ್ದು, ಇದರಿಂದ 25 ಮಕ್ಕಳು ಈ ಸೌಲಭ್ಯವನ್ನು ಪಡೆದಿದ್ದು, ಇಲಾಖೆಯು 40,500 ರೂ.ಗಳನ್ನು ವೆಚ್ಚ ಮಾಡಿದ್ದು, 1990-91ರಲ್ಲಿ ಮಡಿಕೇರಿಯಲ್ಲಿ ಕಾವೇರಿ ನಿರ್ಗತಿಕ ಮಕ್ಕಳ ಪಾಲನಾಗೃಹ ಮತ್ತು ಫೀಲ್ಡ್ ಮಾರ್ಷಲ್ ಕಾರಿಯಪ್ಪ ಹೋಂ ಹಾಗೂ ವೀರರಾಜಪೇಟೆ ತಾಲೂಕಿನ ಕೆದಮುಳ್ಳೂರಿನಲ್ಲಿ ಸಿಕಾದಿನಿ ಕಾನ್ವೆಂಟ್ ಶಾಲೆ ಕಾರ್ಯನಿರ್ವಹಿಸುತ್ತಿದ್ದು, ಪ್ರತೀ ಸಂಸ್ಥೆಯಲ್ಲೂ 25 ಮಕ್ಕಳಂತೆ ಒಟ್ಟಾರೆ 36 ಗಂಡು ಮಕ್ಕಳು ಮತ್ತು 39 ಹೆಣ್ಣು ಮಕ್ಕಳು ಈ ಸೌಲಭ್ಯವನ್ನು ಪಡೆದಿದ್ದು, ಇಲಾಖೆಯು ಆ ವರ್ಷ 1,21,500ರೂ.ಗಳನ್ನು ವೆಚ್ಚ ಮಾಡಿದೆ.

### ವಿಶೇಷ ಪೌಷ್ಠಿಕ ಆಹಾರ ಕಾರ್ಯಕ್ರಮ

ನಗರದ ಕೊಳಚೆ ಪ್ರದೇಶಗಳಲ್ಲಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಿರುವ ಕುಟುಂಬಗಳ ಪೌಷ್ಠಿಕ ಆಹಾರದ ಕೊರತೆಯಲ್ಲಿರುವ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಹಾಗೂ ಹಾಲುಣಿಸುವ ತಾಯಂದಿರಿಗೆ ಪೌಷ್ಠಿಕ ಆಹಾರವನ್ನು ಒದಗಿಸಲು ಸರ್ಕಾರವು ವಿಶೇಷ ಪೌಷ್ಠಿಕ ಆಹಾರ ಕಾರ್ಯಕ್ರಮದ ಯೋಜನೆಯನ್ನು ಕೈಗೊಂಡಿದೆ. ಈ ಯೋಜನೆಯಡಿಯಲ್ಲಿ 1988-89 ಮತ್ತು 1989–90 ಈ ಎರಡು ವರ್ಷಗಳಲ್ಲಿ ಪ್ರತೀ ವರ್ಷವೂ ಮಕ್ಕಳು ಮತ್ತು ತಾಯಂದಿರೂ ಸೇರಿದಂತೆ 443 ಫಲಾನುಭವಿಗಳಿದ್ದರು.

### ಸಮಗ್ರ ಬಾಲವಿಕಾಸ ಯೋಜನೆ

ಈ ಯೋಜನೆಯಡಿಯಲ್ಲಿ ಪೋಷಕಾಂಶದ ಕೊರತೆಯಿರುವ 0-6 ವರ್ಷದೊಳಗಿನ ಮಕ್ಕಳಿಗೂ, ಗರ್ಭಿಣಿಯರಿಗೂ ಮತ್ತು ಬಾಣಂತಿಯರಿಗೂ ವಿಶೇಷ ಪೌಷ್ಠಿಕ ಆಹಾರವನ್ನು ಅಂಗನವಾಡಿಗಳ ಮೂಲಕ ವಿತರಣೆ ಮಾಡಲಾಗುವುದು; ಮತ್ತು ಮೂರರಿಂದ ಆರು ವರ್ಷ ವಯೋಮಿತಿಯಿರುವ ಮಕ್ಕಳಿಗೆ ಅನೌಪಚಾರಿಕವಾದ ಉಚಿತ ಶಿಕ್ಷಣವನ್ನು ನೀಡಲಾಗುವುದು. ಈ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿನ ಪೊನ್ನಂಪೇಟೆ ಮತ್ತು ಸೋಮವಾರಪೇಟೆ ಯೋಜನೆಗಳ 357 ಅಂಗನವಾಡಿ ಗ್ರಾಮಗಳಲ್ಲಿ ಆಯ್ಕೆ ಮಾಡಲಾದ ಮಕ್ಕಳು ಮತ್ತು ಸ್ತ್ರೀಯರಿಗೆ ಅಂಗನವಾಡಿ ಮೂಲಕ ಪೂರಕ ಪೌಷ್ಠಿಕ ಆಹಾರವನ್ನು ವಿತರಣೆ ಮಾಡಿದ್ದು 1988-89 ಮತ್ತು 1989-90ನೇ ಸಾಲಿನ ಫಲಾನುಭವಿಗಳ ವಿವರ ಈ ರೀತಿ ಇದೆ.

| ಫಲಾನುಭವಿಗಳು | 1988-89 | 1989-90 |
|---|---|---|
| 6 ತಿಂಗಳಿಂದ 2 ವರ್ಷದ ಮಕ್ಕಳು | 7,664 | 11,846 |
| 2 ವರ್ಷದಿಂದ 6 ವರ್ಷದ ಮಕ್ಕಳು | 8,398 | 11,021 |
| ಗರ್ಭಿಣಿಯರು | 1,345 | 2,167 |
| ಬಾಣಂತಿಯರು | 1,887 | 2,378 |
| ಒಟ್ಟು | 18,694 | 27,412 |

### ಅಂಗನವಾಡಿ ತರಬೇತಿ ಕೇಂದ್ರ

ಅಂಗನವಾಡಿ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ತರಬೇತಿ ನೀಡುವ

ಸಲುವಾಗಿ ಮಡಿಕೇರಿಯಲ್ಲಿ 1982 ರಿಂದ ಅಂಗನವಾಡಿ ತರಬೇತಿ ಕೇಂದ್ರವು ಕಾರ್ಯ ನಿರ್ವಹಿಸುತ್ತಿದೆ. ಈ ತರಬೇತಿ ಕೇಂದ್ರವು ಅಂಗನವಾಡಿ ಕಾರ್ಯಕರ್ತೆಯರಿಗೆ ಮೂರು ತಿಂಗಳ ತರಬೇತಿ ಹಾಗೂ ಪುನಃಶ್ಚೇತನ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಮತ್ತು ಸಹಾಯಕಿಯರಿಗೆ ಕಿರು ಪರಿಚಯಾತ್ಮಕ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಅಂಗನ ವಾಡಿ ಕಾರ್ಯಕರ್ತೆಯರಿಗೆ ತರಬೇತಿ ಪಡೆಯುವ ಕಾಲದಲ್ಲಿ ತಿಂಗಳಿಗೆ 75 ರೂ. ಸ್ಟೈಪೆಂಡ್ ನೀಡಲಾಗುತ್ತದೆ. ಸಾಮಾನ್ಯವಾಗಿ ಒಂದು ತರಬೇತಿ ಕಾರ್ಯಕ್ರಮದಲ್ಲಿ 50 ಜನ ರಿಗೆ ಅವಕಾಶವಿರುತ್ತದೆ. ಅಂಗನವಾಡಿ ತರಬೇತಿ ಕೇಂದ್ರವು ಆರಂಭವಾದ ವರ್ಷದಲ್ಲಿ 50 ಕಾರ್ಯಕರ್ತೆಯರು ತರಬೇತಿ ಯನ್ನು ಪಡೆದಿದ್ದು, ಇದಕ್ಕಾಗಿ 39,780 ರೂ. ವೆಚ್ಚ ಮಾಡಲಾಗಿದೆ.

1989–90ನೇ ಸಾಲಿನಲ್ಲಿ 138 ಅಂಗನವಾಡಿ ಕಾರ್ಯ ಕರ್ತೆಯರಿಗೆ ಮೂರು ತಿಂಗಳ ತರಬೇತಿಯನ್ನು ನೀಡ ಲಾಗಿದ್ದು ಇದಕ್ಕಾಗಿ 1,82,642 ರೂ. ವೆಚ್ಚ ಮಾಡಿದ್ದು 1990-91ನೇ ಸಾಲಿನಲ್ಲಿ 73 ಅಂಗನವಾಡಿ ಕಾರ್ಯಕರ್ತೆ ಯರಿಗೆ ಮೂರು ತಿಂಗಳ ತರಬೇತಿಯನ್ನು, 146 ಅಂಗನ ವಾಡಿ ಕಾರ್ಯಕರ್ತೆಯರಿಗೆ 18 ದಿನಗಳ ಪುನಃಶ್ಚೇತನ ತರ ಬೇತಿಯನ್ನು ಮತ್ತು 148 ಅಂಗನವಾಡಿ ಸಹಾಯಕಿಯರಿಗೆ ಎಂಟು ದಿನಗಳ ತರಬೇತಿಯನ್ನು ನೀಡಲಾಗಿದ್ದು ಇದಕ್ಕಾಗಿ ಒಟ್ಟಾರೆ 1,67,365 ರೂ.ಗಳನ್ನು ವೆಚ್ಚ ಮಾಡಲಾಗಿದೆ.

### ಶಿಶುಪಾಲನಾ ಕೇಂದ್ರಗಳು

ರಾಜ್ಯ ಸರ್ಕಾರವು ವ್ಯವಸಾಯ ಹಾಗೂ ದಿನಗೂಲಿ ಮಾಡುವ ಮಹಿಳಾ ಕೆಲಸಗಾರರ ಮಕ್ಕಳಿಗೆ ಆಶ್ರಯ ನೀಡಲು ಶಿಶುಪಾಲನಾ ಕೇಂದ್ರಗಳಿಗೆ ಮಂಜೂರಾತಿ ನೀಡಿದೆ. ಈ ಯೋಜನೆಯ ಪ್ರಕಾರ ಮೂರು ವರ್ಷಕ್ಕಿಂತಲೂ ಕಡಿಮೆ ಪ್ರಾಯದ ಮಕ್ಕಳಿಗೆ ಆಶ್ರಯ ಮತ್ತು ಉತ್ತಮ ವಾತಾವರಣ ವನ್ನು ಕಲ್ಪಿಸಿಕೊಟ್ಟು ಆರೋಗ್ಯಕರ ಬೆಳವಣಿಗೆಗೆ ನೆರವಾಗು ವುದು ಇವರ ಮುಖ್ಯ ಉದ್ದೇಶವಾಗಿದೆ. 1989–90ನೇ ಸಾಲಿನಲ್ಲಿ ಮಡಿಕೇರಿಯ ಕೋಟೆ ಮಹಿಳಾ ಸಮಾಜ ಹಾಗೂ ಕೊಡಗು ಜಿಲ್ಲಾ ಶಿಶುಕಲ್ಯಾಣ ಸಂಸ್ಥೆ ಮತ್ತು ಮಡಿಕೇರಿ ತಾಲೂಕಿನ ಮರಗೋಡು ಮಹಿಳಾ ಸಮಾಜ ಇವುಗಳು ನಡೆ ಸುತ್ತಿದ್ದ ಶಿಶುಪಾಲನಾ ಕೇಂದ್ರಗಳಿಗೆ ಒಟ್ಟಾರೆ 25,115ರೂ ಗಳನ್ನು ಸಹಾಯ ಧನವನ್ನಾಗಿ ಇಲಾಖೆಯು ನೀಡಿದ್ದು 1990–91ನೇ ಸಾಲಿನಲ್ಲಿ ಮಡಿಕೇರಿಯ ಕೋಟೆ ಮಹಿಳಾ ಸಮಾಜದ ಒಂದು ಶಿಶುಪಾಲನಾ ಕೇಂದ್ರವು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು ಇದರಿಂದ 25 ಮಕ್ಕಳು ಸೌಲಭ್ಯವನ್ನು ಪಡೆದಿದ್ದು ಇದಕ್ಕೆ ಇಲಾಖೆಯು 16,333 ರೂ.ಗಳ ಸಹಾಯ ಧನವನ್ನಾಗಿ ನೀಡಿದೆ.

**ಗೃಹ ಕಲ್ಯಾಣ ಯೋಜನೆ :** ಈ ಯೋಜನೆಯಡಿಯಲ್ಲಿ ನಗರ ಪ್ರದೇಶಗಳ ದುರ್ಬಲ ವರ್ಗದ ಅಂದರೆ ವಾರ್ಷಿಕ ವರಮಾನ 3,600 ರೂ.ಗಿಂತ ಕಡಿಮೆ ಇರುವ ಮಹಿಳೆಯರು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಕೈಗೊಳ್ಳಲು ಇಲಾಖೆಯು ನೆರವನ್ನು ಒದಗಿಸುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳು ನೀಡುವ ಸಾಲದ ಶೇ. 25ರಷ್ಟನ್ನು ರಿಯಾಯತಿಯ ರೂಪ ದಲ್ಲಿ ಮಹಿಳೆಯರು ಆದಾಯ ತರುವ ಉತ್ಪಾದನಾ ಚಟು ವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ಇಲಾಖೆಯಿಂದ ನೀಡ ಲಾಗುತ್ತದೆ. ಈ ಯೋಜನೆಯಡಿಯಲ್ಲಿ 1988–89ನೇ ಸಾಲಿನಲ್ಲಿ ಐದು ಮಹಿಳೆಯರಿಗೆ 4,000 ರೂ.ಗಳ ಸಹಾಯ ಧನವನ್ನು 1989–90ನೇ ಸಾಲಿನಲ್ಲಿ 29 ಮಹಿಳೆಯರಿಗೆ 19,734 ರೂ.ಸಹಾಯಧನವನ್ನು ಮತ್ತು 1990-91ನೇ ಸಾಲಿನಲ್ಲಿ 22 ಮಹಿಳೆಯರಿಗೆ 20,000 ರೂ. ಸಹಾಯ ಧನವನ್ನು ಇಲಾಖೆಯಿಂದ ನೀಡಲಾಗಿದೆ.

**ವೃತ್ತಿ ತರಬೇತಿ :** ಕುಟುಂಬದ ವಾರ್ಷಿಕ ವರಮಾನ 2,400 ರೂ.ಗಳಿಗಿಂತ ಕಡಿಮೆ ಇರುವ ಮಹಿಳೆಯರು ಹೊಲಿಗೆ, ತರಬೇತಿ, ಬೆರಳಚ್ಚು ವೃತ್ತಿ ಮುಂತಾದ ಉದ್ಯಮ ಗಳಲ್ಲಿ ತರಬೇತಿ ಪಡೆಯಲು ಇಲಾಖೆಯು ಸಹಾಯ ಧನವನ್ನು ನೀಡುತ್ತದೆ. 1988–89ನೇ ಸಾಲಿನಲ್ಲಿ 21 ಮಹಿಳೆ ಯರೂ, 1989–90ನೇ ಸಾಲಿನಲ್ಲಿ ಹತ್ತು ಮಹಿಳೆಯರೂ ಮತ್ತು 1990–91ನೇ ಸಾಲಿನಲ್ಲಿ ಏಳು ಮಹಿಳೆಯರೂ ಈ ಸೌಲಭ್ಯವನ್ನು ಪಡೆದಿದ್ದು ಈ ಮೂರೂ ವರ್ಷಗಳಲ್ಲಿ ಇಲಾಖೆಯು ಕ್ರಮವಾಗಿ 3,364 ರೂ., 2,732 ರೂ. ಮತ್ತು 2,104 ರೂ.ಗಳನ್ನು ಸಹಾಯಧನವನ್ನಾಗಿ ನೀಡಿದೆ.

ಮಹಿಳೆಯರಿಗೆ ಪೌಷ್ಟಿಕ ಆಹಾರ, ಮಕ್ಕಳ ಲಾಲನೆ, ಪಾಲನೆ, ಪರಿಸರ ರಕ್ಷಣೆ, ಸಣ್ಣ ಉಳಿತಾಯ, ಅನಕ್ಷರತಾ ನಿವಾರಣೆ, ಕುಟುಂಬ ಕಲ್ಯಾಣ ಇವೇ ಮುಂತಾದ ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡಲು 1988-89ರಲ್ಲಿ ಸೋಮ ವಾರಪೇಟೆ ಮತ್ತು ಪೊನ್ನಂಪೇಟೆಯ ಯೋಜನೆಯಡಿ ಬರುವ ಅಂಗನವಾಡಿಗಳ ಕೇಂದ್ರಗಳಲ್ಲೂ ಮತ್ತು 1989-90ರಲ್ಲಿ ಮಡಿಕೇರಿ, ಪೊನ್ನಂಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ಈ ಯೋಜನೆಯಡಿ ಬರುವ ಅಂಗನವಾಡಿ ಕೇಂದ್ರಗಳಲ್ಲೂ ಶಿಬಿರವನ್ನೇರ್ಪಡಿಸಿದ್ದು ಈ ಎರಡು ವರ್ಷಗಳಲ್ಲಿ ಕ್ರಮವಾಗಿ

851 ಹಾಗೂ 803 ಮಹಿಳೆಯರು ಇದರ ಸೌಲಭ್ಯವನ್ನು ಪಡೆದಿರುತ್ತಾರೆ.

**ಮಹಿಳಾ ಸಂಘಟನೆಗಳು**

ಮಹಿಳಾ ಸಹಕಾರ ಸಮಾಜ ನಿಯಮಿತವು ಸೋಮವಾರ ಪೇಟೆಯಲ್ಲಿ 1939ರಲ್ಲಿ ಭಗಿನೀ ಸಮಾಜ ಎಂಬ ಹೆಸರಿನಲ್ಲಿ ಡಿ. ಸಾಕಮ್ಮ ಮತ್ತು ಅವರ ಕುಟುಂಬದ ಪ್ರಯತ್ನದಿಂದ ಆರಂಭವಾಯಿತು. 1944ರಲ್ಲಿ ಇದು ಸಹಕಾರ ಸಮಾಜವಾಗಿ ನೋಂದಣಿಯಾಯಿತು. ಆರಂಭದಲ್ಲಿ ಹೊಲಿಗೆ, ಕಸೂತಿ, ಹಿಂದಿ, ಸಂಗೀತ ಇವೇ ಮುಂತಾದ ತರಗತಿಗಳನ್ನು ನಡೆಸುವುದು, ಆರೋಗ್ಯ, ಶಿಶುಸಂರಕ್ಷಣೆ ಇವೇ ಮುಂತಾದ ವಿಷಯಗಳ ಮೇಲೆ ಉಪನ್ಯಾಸವನ್ನೇರ್ಪಡಿಸುವುದು, ಕೆಲವು ಒಳಾಂಗಣ ಮತ್ತು ಹೊರಾಂಗಣ ಆಟಪಾಠಗಳನ್ನು ಆಡಲು ಅವಕಾಶ ಕಲ್ಪಿಸುವುದು ಈ ಮುಂತಾದವುಗಳು ಸಮಾಜದ ಉದ್ದೇಶಗಳಾಗಿದ್ದವು. ನಂತರದಲ್ಲಿ ಹಣ್ಣಿನರಸ, ಜ್ಯಾಮ್, ಸೋಪಿನಪುಡಿ, ಮೋಂಬತ್ತಿ ಮುಂತಾದ ಪದಾರ್ಥಗಳನ್ನು ತಯಾರಿಸುವ ಕಾರ್ಯಕ್ರಮಗಳನ್ನು ಕೈಗೊಂಡು ಕೆಲವು ಗೃಹ ಕೈಗಾರಿಕಾ ವಸ್ತುಪ್ರದರ್ಶನದಲ್ಲಿ ಪಾಲ್ಗೊಂಡು, ಸಂಸ್ಥೆಯು ಬಹುಮಾನಗಳನ್ನೂ ಗಳಿಸಿತು. ಕೃಷಿ ವಿಜ್ಞಾನ ಕೇಂದ್ರ, ಚೆಟ್ಟಳ್ಳಿ, ಕೇಂದ್ರ ತೋಟಗಾರಿಕಾ ಸಂಶೋಧನಾ ಕೇಂದ್ರ, ಚೆಟ್ಟಳ್ಳಿ ಹಾಗೂ ಸಹಕಾರಿ ಇಲಾಖಾ ಕಚೇರಿ, ಮಡಿಕೇರಿ ಇವೇ ಮುಂತಾದವುಗಳ ಸಹಕಾರ ಮತ್ತು ಮಾರ್ಗದರ್ಶನದಿಂದ ಸಮಾಜದ ಸದಸ್ಯರುಗಳಿಗೆ ಅನೇಕ ಕ್ರಿಯಾತ್ಮಕ ಚಟುವಟಿಕೆಗಳ ತರಬೇತಿ ಮತ್ತು ಸೂಕ್ತ ತಿಳುವಳಿಕೆಯನ್ನು ನೀಡುವ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಅಲ್ಲದೆ ಅನೇಕ ಮಹಿಳೆಯರಿಗೆ ಎರಡು ವರ್ಷದ ಎಸ್.ಎಸ್.ಎಲ್.ಸಿ. ಅಲ್ಪಕಾಲಿಕ ಶಿಕ್ಷಣ (ಕಂಡೆನ್ಸ್‌ಡ್ ಕೋರ್ಸ್)ವನ್ನೂ ಅನೇಕ ಸದಸ್ಯರುಗಳಿಗೆ ಕಂತಿನ ಮೂಲಕ ಹೊಲಿಗೆ ಯಂತ್ರವನ್ನೂ ನೀಡಿದೆ. ಸಮಾಜವು ಒಂದು ಶಿಶುವಿಹಾರವನ್ನು, ಯೋಗಾಭ್ಯಾಸದ ತರಗತಿಯನ್ನು ನಡೆಸುತ್ತಿದೆ. ಸಮಾಜವು ರಾಷ್ಟ್ರೀಯ ಹಬ್ಬಗಳನ್ನು ಆಚರಿಸುತ್ತದೆ ಮತ್ತು ಆ ಸಂದರ್ಭಗಳಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅನೇಕ ಸ್ಪರ್ಧೆಗಳನ್ನು ನಡೆಸುತ್ತದೆ.

ಕೊಡಗು ಮಹಿಳಾ ಸಹಕಾರ ಸಮಾಜ ನಿಯಮಿತವು ವೀರರಾಜಪೇಟೆಯಲ್ಲಿ 1938ರಲ್ಲಿ ಪ್ರಾರಂಭಿಸಲ್ಪಟ್ಟು 1941ರಲ್ಲಿ ನೋಂದಾಯಿಸಲ್ಪಟ್ಟಿತು. (ಪು. 386 ಕೂಡ ನೋಡಿ). ಮಹಿಳೆಯರನ್ನು ಸಂಘಟಿಸಿ ಮಹಿಳಾ ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಆರಂಭದಲ್ಲಿ ಸಮಾಜವು 10 ಸದಸ್ಯರುಗಳನ್ನೊಳಗೊಂಡಿದ್ದು 1990ರ ವೇಳೆಗೆ ಸದಸ್ಯರುಗಳ ಸಂಖ್ಯೆ 378ಕ್ಕೆ ಏರಿತ್ತು. ಸಮಾಜವು ಆರಂಭದಲ್ಲಿ ಹೊಲಿಗೆ ತರಬೇತಿ, ಎಸ್. ಎಸ್. ಎಲ್. ಸಿ. ಅಲ್ಪಕಾಲಿಕ ಶಿಕ್ಷಣ (ಕಂಡೆನ್ಸ್‌ಡ್ ಕೋರ್ಸ್), ಹಿಂದಿ, ಸಂಗೀತ, ನೃತ್ಯ ಮುಂತಾದ ತರಗತಿಗಳನ್ನು ನಡೆಸುತ್ತಿತ್ತು ಹಾಗೂ ಶಿಶುವಿಹಾರವನ್ನು ಹೊಂದಿತ್ತು. ಹೊಲಿಗೆ ತರಗತಿ, ಹಣ್ಣು ಮತ್ತು ತರಕಾರಿಗಳನ್ನು ಸಂಸ್ಕರಿಸಿ ವಿವಿಧ ಪದಾರ್ಥಗಳನ್ನು ತಯಾರಿಸುವ ಹಾಗೂ ಸೋಪ್, ಶುಚಿಪುಡಿ ಇವೇ ಮುಂತಾದ ವಸ್ತುಗಳ ತಯಾರಿಕೆ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು ಮತ್ತು ಹಣ್ಣು ಹಂಪಲು ಮತ್ತು ತರಕಾರಿ ಸಂಸ್ಕರಣಾ ಕಾರ್ಖಾನೆಯನ್ನು ನಡೆಸುವುದು ಸಮಾಜದ ಇಂದಿನ ಪ್ರಮುಖ ಚಟುವಟಿಕೆಗಳಾಗಿವೆ. 1989-90ರಲ್ಲಿ ಸಮಾಜವು ರಾಜ್ಯ ಸರ್ಕಾರದಿಂದ 2,000 ರೂ. ಆರ್ಥಿಕ ನೆರವನ್ನು ಪಡೆದಿತ್ತು. ಇದು ತಾಲೂಕು ಮಟ್ಟದ ಒಕ್ಕೂಟದ ಸದಸ್ಯತ್ವವನ್ನು ಪಡೆದಿದೆ.

ಕೋಟೆ ಮಹಿಳಾ ವಿವಿಧೋದ್ದೇಶ ಸಹಕಾರ ಸಮಾಜ ನಿಯಮಿತವು ಮಡಿಕೇರಿಯಲ್ಲಿ 1944ರಲ್ಲಿ ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿಗಳಾಗಿದ್ದ ಸಿ. ಎಂ. ರಾಮರಾವ್ ಮತ್ತು ಪಿ. ಎಂ. ಚಂಗಪ್ಪ ಅವರ ಪ್ರೇರಣೆಯಿಂದ ಪ್ರಾರಂಭವಾಗಿ, 1984ರಲ್ಲಿ ನೋಂದಣಿಯಾಯಿತು. ನೆಲ್ಲಮಕ್ಕಡ ಮುತ್ತಮ್ಮ ಕರುಂಬಯ್ಯ ಅವರು ಸಮಾಜದ ಪ್ರಥಮ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದರು. ಸದಸ್ಯರುಗಳಲ್ಲಿ ಸಹಕಾರಿ ಮನೋಭಾವ ಮತ್ತು ಪ್ರೀತಿವಾತ್ಸಲ್ಯ ಬೆಳೆಸುವುದೂ, ಉಳಿತಾಯ ಹಾಗೂ ಸ್ವಾವಲಂಬಿಗಳಾಗಿ ಉತ್ತಮ ಬದುಕಿಗೆ ಪೂರಕವಾಗುವಂತೆ ಪ್ರೋತ್ಸಾಹ ನೀಡುವುದೂ, ಅನಕ್ಷರತೆಯನ್ನು ತೊಡೆದು ಹಾಕಲು ಶ್ರಮಿಸುವುದು, ಮಕ್ಕಳಿಗೆ ಬೇಸಿಗೆ ರಜಾ ಶಿಬಿರಗಳನ್ನು ನಡೆಸುವುದು, ಬಡಮಹಿಳೆಯರಿಗೆ ಉಚಿತವಾಗಿ ಬಟ್ಟೆ ವಿತರಣೆ ಮಾಡುವುದು, ಈ ಮುಂತಾದವು ಸಮಾಜದ ಧ್ಯೇಯೋದ್ದೇಶಗಳಾಗಿವೆ. ಇದಲ್ಲದೆ ಸಮಾಜವು ಹೊಲಿಗೆ, ಕಸೂತಿ, ಚಿತ್ರಕಲೆ, ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಪೂರಕವಾಗುವಂತಹ ಹಣ್ಣು ಮತ್ತು ತರಕಾರಿಗಳ ಸಂರಕ್ಷಣೆ ಮತ್ತು ಅವುಗಳಿಂದ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸುವುದು, ಬ್ರೆಡ್ ಮತ್ತು ಬಿಸ್ಕತ್‌ಗಳನ್ನು ತಯಾರಿಸುವುದು, ಅಣಬೆ ಬೇಸಾಯ ಮಾಡುವುದು, ಇವೇ ಮುಂತಾದವುಗಳ ತರಬೇತಿಗಳನ್ನು ನೀಡುತ್ತಿದ್ದು, ಒಂದು ಶಿಶು

ವಿಹಾರ ಹಾಗೂ ಶಿಶುಪಾಲನಾ ಕೇಂದ್ರವನ್ನು ನಡೆಸುತ್ತಿದೆ. ಸಮಾಜವು 1990-91ನೇ ಸಾಲಿನಲ್ಲಿ ಮಾಡಿದ ಸಾಧನೆಗಾಗಿ ಜಿಲ್ಲಾ ಕೇಂದ್ರ ಬ್ಯಾಂಕ್‌ನಿಂದ ಉತ್ತಮ ಸೇವಾ ಪ್ರಶಸ್ತಿಯನ್ನು ಪಡೆದಿದೆ.

ಮಹಿಳಾ ಸಹಕಾರ ಸಮಾಜ ನಿಯಮಿತವು ಕುಶಾಲನಗರದಲ್ಲಿ 1954ರಲ್ಲಿ ಪ್ರಾರಂಭವಾಗಿದ್ದು ಸಹಕಾರ ಸಂಘದ ಕಾಯ್ದೆಯ ಪ್ರಕಾರ ನೋಂದಣಿಯಾಗಿದೆ. ಸಮಾಜವು ಹೊಲಿಗೆ ತರಗತಿಯನ್ನು ನಡೆಸುತ್ತಿರುವುದೇ ಅಲ್ಲದೆ, ಕ್ರಿಮಿನಾಶಕ, ಸೋಪು, ಸೋಪಿನಪುಡಿ, ಫಿನಾಯಿಲ್ ಮುಂತಾದ ವಸ್ತುಗಳನ್ನು ಸುಲಭ ದರದಲ್ಲಿ ತಯಾರಿಸಲು ತರಬೇತಿಯನ್ನು ನೀಡಿ ಮಹಿಳೆಯರು ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಪ್ರೇರೇಪಿಸುತ್ತಿದೆ ; ನಿರುದ್ಯೋಗಿ ವಿದ್ಯಾವಂತ ಮಹಿಳೆಯರು ಶಿಶುಪಾಲನಾ ತರಬೇತಿಯನ್ನು ಪಡೆಯಲು ಸಮಾಜದಿಂದ ಆಯ್ಕೆ ಮಾಡಿ ತರಬೇತಿ ಕೇಂದ್ರಕ್ಕೆ ಕಳುಹಿಸಲಾಗುತ್ತಿದೆ. ಸಮಾಜವು ಪೂರ್ವ ಪ್ರಾಥಮಿಕ ಶಾಲೆಯನ್ನೂ ನಡೆಸುತ್ತಿದೆ.

ಪೊನ್ನಂಪೇಟೆಯಲ್ಲಿ ಮಹಿಳಾ ಸಹಕಾರ ಸಮಾಜವು 1953ರಲ್ಲಿ ಆರಂಭವಾಯಿತು. ಸಮಾಜವು ಹೊಲಿಗೆ, ಕಸೂತಿ ಮುಂತಾದ ತರಬೇತಿಯನ್ನು ನೀಡುತ್ತಿರುವುದೇ ಅಲ್ಲದೆ ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನೂ ನಡೆಸುತ್ತಿದೆ. ಸಂಸ್ಥೆಯು ವೃತ್ತಿ ಶಿಕ್ಷಣ, ಸಹಕಾರ ಶಿಕ್ಷಣ, ಕರಕುಶಲ ಹಾಗೂ ಗೃಹ ಕೈಗಾರಿಕೆಗಳಲ್ಲಿ ತರಬೇತಿ ನೀಡುವ ಏರ್ಪಾಡನ್ನು ಮಾಡುತ್ತಿದೆ ಮತ್ತು ಮಕ್ಕಳಿಗಾಗಿ ಬಾಲವಾಡಿ ತರಗತಿಯನ್ನು ನಡೆಸುತ್ತಿದೆ.

1990-91ನೇ ಸಾಲಿನಲ್ಲಿ ಜಿಲ್ಲೆಯಲ್ಲಿದ್ದ ತಾಲೂಕುವಾರು ಮಹಿಳಾ ಸಮಾಜಗಳ ಸಂಖ್ಯೆ – ಮಡಿಕೇರಿ 144, ಸೋಮವಾರಪೇಟೆ 81 ಮತ್ತು ವೀರರಾಜಪೇಟೆ 55 ಹೀಗೆ ಇದ್ದು ರಚನಾತ್ಮಕವಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವು ಪ್ರಮುಖ ಮಹಿಳಾ ಸಮಾಜಗಳೆಂದರೆ, ಮಡಿಕೇರಿ ತಾಲೂಕಿನ ಗಾಳೀಬೀಡು ಮಹಿಳಾ ಮಂಡಳಿ (ಮಡಿಕೇರಿ), ಕಾವೇರಿ ಮಹಿಳಾ ಮಂಡಳಿ (ಭಾಗಮಂಡಲ), ಭಗವತಿ ಮಹಿಳಾ ಮಂಡಳಿ (ಬಲ್ಲಮಾವಟಿ), ಅಂಬಲ ಮಹಿಳಾ ಸಮಾಜ (ನೆಲಜಿ) ಮತ್ತು ಚೆಟ್ಟಿಮಾನಿ ಮಹಿಳಾ ಮಂಡಳಿ (ಚೆಟ್ಟಿಮಾನಿ); ಸೋಮವಾರಪೇಟೆ ತಾಲೂಕಿನ ದಂಡಿಕೇಶ್ವರಿ ಮಹಿಳಾ ಮಂಡಲ(ಕೊಡಿಗೆ), ಮಹಿಳಾ ಮಂಡಳಿ (ಹಂಡ್ಲಿ), ಕಾವೇರಿ ಮಹಿಳಾ ಮಂಡಲ, (ಕೊಡ್ಲಿಪೇಟೆ), ಸಹಕಾರ ಮಹಿಳಾ ಮಂಡಲ(ಶನಿವಾರಸಂತೆ), ಸಹಕಾರ ಮಹಿಳಾ ಮಂಡಲ (ಕುಶಾಲನಗರ); ಮತ್ತು ವೀರರಾಜಪೇಟೆ ತಾಲೂಕಿನ ಕಾವೇರಿ ಮಹಿಳಾ ಮಂಡಲ (ಹಳ್ಳಿಗಟ್ಟು), ಭುವನೇಶ್ವರಿ ಮಹಿಳಾ ಮಂಡಲ (ಕಿತ್ತೂರು), ಹುದಿಕೇರಿ ಮಹಿಳಾ ಸಮಾಜ (ಹುದಿಕೇರಿ), ಪೂತಳ ಮಹಿಳಾ ಸಮಾಜ (ಪರಕಟಗೇರಿ), ಜಯಂತಿ ಮಹಿಳಾ ಸಮಾಜ (ಬೆಸಗೂರು), ಚೈತನ್ಯ ಮಹಿಳಾ ಸಮಾಜ (ಬೆಸಗೂರು) ಮತ್ತು ಕಿರುಗೂರು ಮಹಿಳಾ ಸಮಾಜ. ಹೊಲಿಗೆ, ಕಸೂತಿ ತರಗತಿ ಮತ್ತು ಬಾಲವಾಡಿಗಳನ್ನು ನಡೆಸುವುದು, ವಿವಿಧ ಆಹಾರ ಪದಾರ್ಥಗಳ ತಯಾರಿಕೆಗಳ ಬಗ್ಗೆ ತರಬೇತಿಯನ್ನು ನೀಡುವುದು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದು ಈ ಸಮಾಜಗಳ ಕೆಲವು ಪ್ರಮುಖ ಚಟುವಟಿಕೆಗಳಾಗಿವೆ.

### ತಾಲೂಕುಮಟ್ಟದ ಮಹಿಳಾ ಒಕ್ಕೂಟಗಳು

ಜಿಲ್ಲೆಯ ಮಡಿಕೇರಿ, ಸೋಮವಾರಪೇಟೆ ಮತ್ತು ವೀರರಾಜಪೇಟೆ ಈ ಮೂರು ತಾಲೂಕುಗಳಲ್ಲಿ, ತಾಲೂಕುಮಟ್ಟದ ಮಹಿಳಾ ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿವೆ. 1988-89, 89-90 ಮತ್ತು 90-91 ಈ ಮೂರು ವರ್ಷಗಳಲ್ಲಿ ಪ್ರತೀ ಒಕ್ಕೂಟಕ್ಕೂ ಇಲಾಖೆಯು 500 ರೂ.ಗಳ ಸಹಾಯ ಧನವನ್ನಾಗಿ ಕೊಟ್ಟಿರುವುದೇ ಅಲ್ಲದೆ, 1988-89ರಲ್ಲಿ 12 ಮಹಿಳಾ ಸಮಾಜಗಳ ಹೊಲಿಗೆ ಉಪಾಧ್ಯಾಯಿನಿಯರಿಗೆ ಒಟ್ಟು 5,480 ರೂ.ಗಳನ್ನು ಮತ್ತು 1989-90ನೇ ಸಾಲಿನಲ್ಲಿ 17 ಮಹಿಳಾ ಸಮಾಜಗಳ ಹೊಲಿಗೆ ಉಪಾಧ್ಯಾಯಿನಿಯರಿಗೆ ಒಟ್ಟು 5,540 ರೂ.ಗಳನ್ನು ಇಲಾಖೆಯು ಗೌರವಧನವನ್ನಾಗಿ ನೀಡಿದೆ.

### ವಿಧವಾ ವೇತನ ಯೋಜನೆ

18 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಹಾಗೂ ಕುಟುಂಬದ ವಾರ್ಷಿಕ ಆದಾಯ 1,500 ರೂ.ಗಳಿಗಿಂತ ಕಡಿಮೆ ಇರುವ ನಿರ್ಗತಿಕ ವಿಧವೆಯರಿಗೆ ಸಾಮಾಜಿಕ ಭದ್ರತಾ ಕ್ರಮವಾಗಿ 50 ರೂ.ಗಳ ಮಾಸಾಶನ ನೀಡುವ ಯೋಜನೆಯನ್ನು 1.4.1984 ರಿಂದ ಕರ್ನಾಟಕ ಸರ್ಕಾರವು ಜಾರಿಗೆ ತಂದಿದೆ. ಈ ಯೋಜನೆಯ ಪ್ರಕಾರ ವಿಧವಾ ವೇತನವನ್ನು ನಿರ್ಗತಿಕ ವಿಧವೆಯರ ಜೀವನ ಪರ್ಯಂತ ಅಥವಾ ಪುನರ್ವಿವಾಹವಾಗುವವರೆಗೆ ಅಥವಾ ಯಾವುದೇ ವಾರ್ಷಿಕ ಆದಾಯ 1,500ರೂ.ಗಳಿಗಿಂತ ಹೆಚ್ಚು ಬರುವ ಉದ್ಯೋಗವನ್ನು ಕೈಗೊಳ್ಳುವವರೆಗೆ ಮುಂದುವರಿಸಲಾಗುತ್ತದೆ ಮತ್ತು ಅಂಗವಿಕಲರ ನಿರ್ವಹಣಾ ಭತ್ಯೆವನ್ನು ಪಡೆಯುವಂತಹ ವಿಧವೆಯರು ಈ ಮಾಸಾಶನವನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಇತ್ತೀಚಿನ ನಾಲ್ಕು ವರ್ಷಗಳಲ್ಲಿ ಈ ಸೌಲಭ್ಯವನ್ನು ಪಡೆದ ತಾಲೂಕುವಾರು ವೇತನದಾರರ ಸಂಖ್ಯೆಯನ್ನು ಮತ್ತು ವೆಚ್ಚ ಮಾಡಿದ ಹಣವನ್ನು ಕೆಳಗೆ ನೀಡಲಾಗಿದೆ.

| ವರ್ಷ | ವೇತನದಾರರ ಸಂಖ್ಯೆ | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| | ಮಡಿಕೇರಿ | |
| 1988—89 | 1,871 | 25.82 |
| 1989—90 | 1,897 | 24.33 |
| 1990—91 | 1,927 | 11.60 |
| 1991—92 | 1,958 | 11.90 |
| | ಸೋಮವಾರಪೇಟೆ | |
| 1988—89 | 3,065 | 18.54 |
| 1989—90 | 3,062 | 20.10 |
| 1990—91 | 3,109 | 16.59 |
| 1991—92 | 3,120 | 17.14 |
| | ವೀರರಾಜಪೇಟೆ | |
| 1988—89 | 1,849 | 11.33 |
| 1989—90 | 1,975 | 10.87 |
| 1990—91 | 2,078 | 12.99 |
| 1991—92 | 2,138 | 13.61 |

**ಕೃಷಿ ಕಾರ್ಮಿಕ ಮಹಿಳೆಯರಿಗೆ ಹೆರಿಗೆ ಭತ್ಯೆ**

ಭೂರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಹೆರಿಗೆ ಭತ್ಯೆಯನ್ನು ನೀಡುವ ನಿಯಮಾವಳಿಯನ್ನು ಕರ್ನಾಟಕ ಸರ್ಕಾರವು ಏಪ್ರಿಲ್ 1984ರಲ್ಲಿ ಜಾರಿಗೆ ತಂದಿತು. ಈ ನಿಯಮಾವಳಿಯು ದಿನಗೂಲಿ ಅಥವಾ ಗುತ್ತಿಗೆ ಮೇರೆಗೆ ಕೆಲಸ ಮಾಡುತ್ತಿರುವ ಕೃಷಿಕಾರ್ಮಿಕರಿಗೆ ಅನ್ವಯಿಸಿರುತ್ತದೆ. ಇದಕ್ಕೆ ಬೇಕಾದ ಅರ್ಹತೆಯೆಂದರೆ, ಅರ್ಜಿದಾರರ ಗಂಡನು ಕನಿಷ್ಠ ಪಕ್ಷ ಸತತವಾಗಿ ಮೂರು ವರ್ಷಗಳ ಕಾಲ ಕರ್ನಾಟಕದ ನಿವಾಸಿಯಾಗಿರಬೇಕು. ಈ ಭತ್ಯೆಯನ್ನು ಮಾಸಿಕ 100 ರೂ.ನಂತೆ ಹೆರಿಗೆ ಪೂರ್ವಾವಧಿ ಹಾಗೂ ಹೆರಿಗೆ ನಂತರದ ಕಾಲವನ್ನು ಸೇರಿಸಿಕೊಂಡು ಮೂರು ತಿಂಗಳಿಗೆ ಮೊದಲ ಎರಡು ಮಕ್ಕಳಿಗೆ ಮಾತ್ರ ನೀಡಲಾಗುತ್ತದೆ. ಕೊಡಗು ಜಿಲ್ಲೆಯಲ್ಲಿ 1985ರಲ್ಲಿ 2,685 ಮಹಿಳೆಯರು ಈ ಸೌಲಭ್ಯವನ್ನು ಪಡೆದಿದ್ದು, ಇದಕ್ಕಾಗಿ 8.06 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 1988-89 ಮತ್ತು 1989-90ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಈ ಸೌಲಭ್ಯ ಪಡೆದವರ ಸಂಖ್ಯೆ ಕ್ರಮವಾಗಿ 4,029 ಮತ್ತು 3,739 ಆಗಿದ್ದು, ಇದಕ್ಕಾಗಿ 12.09 ಲಕ್ಷ ರೂ. ಹಾಗೂ 11.22 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. 1990-91ನೇ ಸಾಲಿನಲ್ಲಿ ತಾಲೂಕುವಾರು ಸೌಲಭ್ಯ ಪಡೆದವರ ಸಂಖ್ಯೆ ಮತ್ತು ಖರ್ಚು ಮಾಡಿದ ಹಣವನ್ನು ಲಕ್ಷ ರೂ.ಗಳಲ್ಲಿ ಕ್ರಮವಾಗಿ ಆವರಣದಲ್ಲಿ ಸೂಚಿಸಿದೆ. ಮಡಿಕೇರಿ (454-1.36), ಸೋಮವಾರಪೇಟೆ (1,268-3.80) ಮತ್ತು ವೀರರಾಜಪೇಟೆ (1,730-5.19).

## ಅಂಗವಿಕಲರ ಕಲ್ಯಾಣ

ಸ್ವಾತಂತ್ರ್ಯಪೂರ್ವದಲ್ಲಿ ಸರ್ಕಾರವು ಅಂಗವಿಕಲರ ಕಲ್ಯಾಣಕ್ಕಾಗಿ ಹೆಚ್ಚಿನ ಗಮನವನ್ನು ನೀಡಿರಲಿಲ್ಲ. ಆದರೆ ಸ್ವಾತಂತ್ರ್ಯನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಅಂಗವಿಕಲರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿವೆ. 1988ಕ್ಕೆ ಮುಂಚೆ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯೇ ನಿರ್ವಹಿಸುತ್ತಿತ್ತು. 1988ರಲ್ಲಿ ಅಂಗವಿಕಲರ ಕಲ್ಯಾಣ ಇಲಾಖೆಯು ಅಸ್ತಿತ್ವಕ್ಕೆ ಬಂದಿದ್ದು, ಜಿಲ್ಲಾ ಮಟ್ಟದಲ್ಲಿ ಇಲಾಖೆಯು ತನ್ನದೇ ಆದ ಕಚೇರಿಯನ್ನು ಹೊಂದಿಲ್ಲವಾದ್ದರಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು, ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳನ್ನು ನೋಡಿಕೊಳ್ಳುವರು. ಅಂಗವಿಕಲರ ಕಲ್ಯಾಣ ಇಲಾಖೆಯು ಕಾರ್ಯಕ್ರಮಗಳು ಅವರ ಸರ್ವತೋಮುಖ ಏಳಿಗೆಯ ಉದ್ದೇಶವನ್ನು ಹೊಂದಿದೆ.

1981ರ ಜನಗಣತಿಯಂತೆ ಜಿಲ್ಲೆಯಲ್ಲಿದ್ದ ಅಂಗವಿಕಲರ ವಿವರ :

| ತಾಲೂಕು | ಅಂಧರು | ಕೈಕಾಲು ವಿಹೀನರು | ಕಿವುಡರು. |
|---|---|---|---|
| ಮಡಿಕೇರಿ | 30 | 47 | 60 |
| ಸೋಮವಾರಪೇಟೆ | 24 | 49 | 59 |
| ವೀರರಾಜಪೇಟೆ | 24 | 44 | 28 |

ಸಂಗೀತ, ಪ್ರಕೃತಿವಿವರಣಾ ಶಾಸ್ತ್ರ, ಛಾಯಾಚಿತ್ರ, ರೇಖಾಚಿತ್ರ, ವರ್ಣಚಿತ್ರಕಲೆ, ಮತ್ತಿತರ ಲಲಿತ ಕಲೆಗಳಲ್ಲಿ

ತರಬೇತಿ ಪಡೆಯುತ್ತಿರುವ ಹಾಗೂ 1 ರಿಂದ 8ನೇ ತರಗತಿಯ ವರೆಗೆ ಓದುತ್ತಿರುವ ಕುಟುಂಬದ ವಾರ್ಷಿಕ ಆದಾಯ 10,000 ರೂ.ಗಿಂತ ಕಡಿಮೆ ಇರುವ ಅಂಗವಿಕಲ ಮಕ್ಕಳಿಗೆ ರಾಜ್ಯ ಸರ್ಕಾರವು ವಿದ್ಯಾರ್ಥಿ ವೇತನವನ್ನು ನೀಡುತ್ತದೆ. 1ನೇ ತರಗತಿಯಿಂದ 5ನೇ ತರಗತಿಯವರೆಗೆ ವಿದ್ಯಾರ್ಥಿ ವೇತನವು ಮಾಸಿಕ 25 ರೂ. ಮತ್ತು 6ನೇ ತರಗತಿ ಯಿಂದ 8ನೇ ತರಗತ್ತಿಯವರೆಗೆ ಮಾಸಿಕ 35 ರೂ. ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ವಿದ್ಯಾರ್ಥಿ ವೇತನದ ಜೊತೆಗೆ ನಿಯಮಗಳ ಪ್ರಕಾರ ಅಂಧ ವಿದ್ಯಾರ್ಥಿಗಳಿಗಾಗಿ ಓದುವವರ ಭತ್ಯವನ್ನು ಮತ್ತು ಶಸ್ತ್ರ ಚಿಕಿತ್ಸೆಗೊಳಗಾದ ಅಂಗವಿಕಲ ವಿದ್ಯಾರ್ಥಿಗಳಿಗೆ ಸಾರಿಗೆ ಭತ್ಯವನ್ನು ನೀಡಲಾಗು ವುದು. 9ನೇ ತರಗತಿಯಿಂದ ಮೇಲ್ಪಟ್ಟ ತರಗತಿಗಳಲ್ಲಿ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರವು ವಿದ್ಯಾರ್ಥಿ ವೇತನವನ್ನು ನೀಡುತ್ತದೆ. ವಿದ್ಯಾರ್ಥಿ ವೇತನದ ದರವು ಓದುತ್ತಿರುವ ವಿವಿಧ ಕೋರ್ಸುಗಳನ್ನು ಅವಲಂಬಿಸಿರು ತ್ತದೆ. ಅಲ್ಲದೆ ನಿಯಮಗಳ ಪ್ರಕಾರ ಅಂಧರು ಮತ್ತು ಶಸ್ತ್ರ ಚಿಕಿತ್ಸೆಗೊಳಗಾದ ಅಂಗವಿಕಲ ವಿದ್ಯಾರ್ಥಿಗಳು ಕ್ರಮವಾಗಿ ಓದುವ ಭತ್ಯ ಮತ್ತು ಸಾರಿಗೆ ಭತ್ಯವನ್ನು ಪಡೆಯುತ್ತಾರೆ. ವಿವಿಧ ವರ್ಷಗಳಿಗೆ ಈ ಸೌಲಭ್ಯವನ್ನು ಪಡೆದ ವಿವರವನ್ನು ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ.

| ವರ್ಷ | ರಾಜ್ಯ ಸರಕಾರದ ವೇತನ | | ಕೇಂದ್ರ ಸರಕಾರದ ವೇತನ | |
|---|---|---|---|---|
| | ಫಲಾನುಭವಿಗಳು | ವೆಚ್ಚ ಲಕ್ಷ ರೂ. | ಫಲಾನುಭವಿಗಳು | ವೆಚ್ಚ ಲಕ್ಷ ರೂ. |
| 1988—89 | 22 | 0.17 | 6 | 0.05 |
| 1989—90 | 15 | 0.05 | 4 | 0.03 |
| 1990—91 | 70 | 0.21 | 11 | 0.08 |

ಕುಟುಂಬದ ಆದಾಯವು 6,000 ರೂ.ಗಳಿಗಿಂತ ಕಡಿಮೆ ಇದ್ದು ಜೀವನೋಪಾಯಕ್ಕೆ ಮಾರ್ಗವಿಲ್ಲದ ಅಂಗವಿಕಲ ವ್ಯಕ್ತಿಗಳಿಗೆ ಸರಕಾರವು ತಿಂಗಳಿಗೆ 50 ರೂಪಾಯಿಗಳ ನಿರ್ವಹಣಾ ಭತ್ಯವನ್ನು ನೀಡುತ್ತದೆ.

ಈ ಯೋಜನೆಯಡಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಸೌಲಭ್ಯ ಪಡೆದ ತಾಲೂಕುವಾರು ಫಲಾನುಭವಿಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಸೂಚಿಸಿದೆ.

| ತಾಲೂಕುಗಳು | 1988—89 | | 1989—90 | | 1990—91 | |
|---|---|---|---|---|---|---|
| | ಫಲಾನು ಭವಿಗಳು | ವೆಚ್ಚ ಲಕ್ಷ ರೂ.ಗಳಲ್ಲಿ | ಫಲಾನು ಭವಿಗಳು | ವೆಚ್ಚ ಲಕ್ಷ ರೂ.ಗಳಲ್ಲಿ | ಫಲಾನು ಭವಿಗಳು | ವೆಚ್ಚ ಲಕ್ಷ ರೂ.ಗಳಲ್ಲಿ |
| ಮಡಿಕೇರಿ | 2,496 | 13.37 | 2,506 | 14.16 | 746 | 3.57 |
| ಸೋಮವಾರಪೇಟೆ | 1,009 | 5.83 | 1,004 | 6.79 | 1,008 | 5.88 |
| ವೀರರಾಜಪೇಟೆ | 878 | 4 75 | 888 | 5.17 | 910 | 4.81 |

1991-92ನೇಯ ಸಾಲಿನಲ್ಲಿ ಜಿಲ್ಲೆಯಲ್ಲಿ 2,629 ಅಂಗವಿಕಲರು ನಿರ್ವಹಣಾ ಭತ್ಯದ ಸೌಲಭ್ಯವನ್ನು ಪಡೆದಿದ್ದು, ಇದಕ್ಕಾಗಿ 14,60,542 ರೂಪಾಯಿಗಳನ್ನು ವೆಚ್ಚ ಮಾಡ ಲಾಗಿದೆ.

ಅಂಗವಿಕಲರ ಶ್ರಮವನ್ನು ಕಡಿಮೆ ಮಾಡಲು ಮೂರು ಚಕ್ರದ ಸೈಕಲ್, ಯಂತ್ರಚಾಲಿತ ಮೂರು ಚಕ್ರದ ಸೈಕಲ್, ಗಾಲಿ ಇರುವ ಕುರ್ಚಿಗಳು, ಕೃತಕ ಕಾಲುಗಳು, ಪಟ್ಟಿ ಇರು ವಂತಹ ಪಾದರಕ್ಷೆಗಳು, ಊರುಗೋಲುಗಳು, ಶ್ರಮಸಾಧನ ಗಳು, ಕುರುಡರಿಗೆ ಓದಲು ಸಹಾಯವಾಗುವ ಉಬ್ಬು ಬರವಣಿಗೆ ಸಾಹಿತ್ಯ (ಬ್ರೇಲ್) ಇವೇ ಮುಂತಾದ ಸಲಕರಣೆ ಮತ್ತು ಸಾಧನಗಳನ್ನು ಕೊಳ್ಳಲು ಕುಟುಂಬದ ವಾರ್ಷಿಕ ಆದಾಯ 8,000 ರೂ.ಗಳಿಗಿಂತ ಕಡಿಮೆ ಇದ್ದರೆ ಅದರ ಸಂಪೂರ್ಣ ಬೆಲೆಯನ್ನು ಮತ್ತು ವಾರ್ಷಿಕ ಆದಾಯ 8,000 ರೂ.ದಿಂದ 12,000 ರೂ.ವರೆಗಿದ್ದರೆ ಅದರ ಬೆಲೆಯ ಶೇ. 75ರಷ್ಟನ್ನು ಸರ್ಕಾರವು ನೀಡುವುದು.

ಸ್ವಯಂಉದ್ಯೋಗವನ್ನು ಪ್ರೋತ್ಸಾಹಿಸುವ ಸಲುವಾಗಿ ಅಂಗವಿಕಲ ವ್ಯಕ್ತಿಗಳಿಗೆ ಸಾಲದ ರೂಪದಲ್ಲಿ ಹಣದ ನೆರವನ್ನು ನೀಡಲಾಗುವುದು. ಈ ಯೋಜನೆಯು ಕರ್ನಾಟಕ ರಾಜ್ಯ ಹಣಕಾಸು ನಿಗಮ ಇವರಿಂದ ಜಾರಿಗೆ ಬಂದಿದೆ. ಈ ಯೋಜನೆಯ ಪ್ರಕಾರ ಉದ್ದಿಮೆಯನ್ನು ಕೈಗೊಳ್ಳುವ ಅಂಗ ವಿಕಲ ವ್ಯಕ್ತಿಯು ಕುಟುಂಬದ ವಾರ್ಷಿಕ ಆದಾಯ 10,000 ರೂ.ಗಳಿಗಿಂತ ಮೀರಿರದಿದ್ದಲ್ಲಿ, ಅವರು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಲ ಮತ್ತು ಸರ್ಕಾರದ ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಸಾಲದ ಗರಿಷ್ಠಮಿತಿ 25,000 ರೂ. ಆಗಿದ್ದು ಇದರಲ್ಲಿ ಶೇ. 25 ಭಾಗವನ್ನು ರಾಜ್ಯ ಸರ್ಕಾರವು ಸಹಾಯಧನದ ರೂಪದಲ್ಲಿ ನೀಡುತ್ತದೆ. ಸಾಲದ ಹಣಕ್ಕೆ ಬಡ್ಡಿಯ ದರ ಶೇ. ಒಂದು ರೂಪಾಯಿ ಆಗಿದ್ದು, ಸಾಲವನ್ನು 5 ರಿಂದ 8 ವರ್ಷದ ಅವಧಿ ಯಲ್ಲಿ ಮರುಪಾವತಿ ಮಾಡಬೇಕು. ಈ ಯೋಜನೆಯಡಿ ಯಲ್ಲಿ 1989-90ರಲ್ಲಿ ಜಿಲ್ಲೆಯಲ್ಲಿ ಒಬ್ಬ ವ್ಯಕ್ತಿಯು ಆರ್ಥಿಕ ನೆರವನ್ನು ಪಡೆದಿದ್ದು, ಇದಕ್ಕಾಗಿ ಸರ್ಕಾರವು 4,500 ರೂ.ಗಳನ್ನು ಸಹಾಯಧನವನ್ನಾಗಿ ನೀಡಿದ್ದು, 1990-91 ರಲ್ಲಿ ಆರು ಜನರು ಈ ಸೌಲಭ್ಯವನ್ನು ಪಡೆದಿದ್ದು, ಇದಕ್ಕಾಗಿ ಸರ್ಕಾರವು 28,750 ರೂ.ಗಳನ್ನು ಸಹಾಯಧನವನ್ನಾಗಿ ನೀಡಿದೆ.

ರಾಜ್ಯ ಸರ್ಕಾರದ 3 ಮತ್ತು 4ನೇ ದರ್ಜೆಯ ನೇರ ನೇಮಕಾತಿ ಹುದ್ದೆಗಳಿಗೆ ಶೇ. 4ರಷ್ಟು ಹುದ್ದೆಗಳನ್ನು ಅಂಗ ವಿಕಲರಿಗೆ ಮೀಸಲಾಗಿರಿಸಿದೆ. ಅಲ್ಲದೆ ಮಜೂರಿ ಸಂಪಾದನೆ ಮಾಡುವ ಮತ್ತು ಇತರ ಅಂಥ ಕೆಲಸಗಾರರಿಗೆ ವೃತ್ತಿತೆರಿಗೆ ಪಾವತಿಯಲ್ಲಿ ವಿನಾಯಿತಿ ನೀಡಲಾಗಿದೆ.

## ಇತರ ಕಲ್ಯಾಣ ಯೋಜನೆಗಳು

### ವೃದ್ಧಾಪ್ಯವೇತನ

ಕರ್ನಾಟಕ ಸರ್ಕಾರವು ವೃದ್ಧಾಪ್ಯ ವೇತನ ಯೋಜನೆ ಯನ್ನು 1965ನೇ ಜನವರಿಯಲ್ಲಿ ಆರಂಭಿಸಿತು. ಇದಕ್ಕೆ ಬೇಕಾದ ಅರ್ಹತೆಗಳೆಂದರೆ, ವ್ಯಕ್ತಿಯು ಯಾವುದೇ ವಿಧದ ಆದಾಯವೂ ಇಲ್ಲದ ಕನಿಷ್ಠ 70 ವರ್ಷ ವಯಸ್ಸುಳ್ಳವ ನಾಗಿದ್ದು ಅವನಿಗೆ 20 ವರ್ಷ ಅಥವಾ ಅದಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳು ಅಥವಾ ಮೊಮ್ಮಕ್ಕಳು ಇರಬಾರದು. ಅಂಗವಿಕಲನಾದವನಿಗೆ ವಯೋಮಿತಿಯು ಕನಿಷ್ಟ 65 ವರ್ಷ ವಯಸ್ಸಾಗಿರಬೇಕು. 1972ರಲ್ಲಿ ಈ ವಯೋಮಿತಿಯನ್ನು ವೃದ್ಧರಿಗೆ 65 ವರ್ಷಕ್ಕೂ ಮತ್ತು ವೃದ್ಧ ಅಂಗವಿಕಲರಿಗೆ 60 ವರ್ಷಕ್ಕೂ ಇಳಿಸಲಾಯಿತು. ಕ್ರಮೇಣ ಈ ವಯೋ ಮಿತಿಯನ್ನು ಅಂಗವಿಕಲರಿಗೆ 1974ರಲ್ಲಿ 45 ವರ್ಷಕ್ಕೂ 1977ರಲ್ಲಿ 16ವರ್ಷಕ್ಕೂ ಇಳಿಸಿ, 1979ರಲ್ಲಿ ಅಂಗವಿಕಲರ ವಯಸ್ಸಿನ ನಿರ್ಬಂಧವನ್ನು ಸಂಪೂರ್ಣವಾಗಿ ತೆಗೆದು, ಈ ಸೌಲಭ್ಯವನ್ನು ಮನೋವಿಕಲ ವ್ಯಕ್ತಿಗಳಿಗೂ ವಿಸ್ತರಿಸ ಲಾಯಿತು. ಕೊಡಗು ಜಿಲ್ಲೆಯಲ್ಲಿ ಈ ವೇತನವನ್ನು ಪ್ರಥಮ ವಾಗಿ 16.11.1966 ರಂದು ಪಾವತಿ ಮಾಡಲಾಯಿತು. 1988-89, 1989-90 ಮತ್ತು 1980-91ನೇಯ ವಾರ್ಷಿಕ ಸಾಲುಗಳಲ್ಲಿ ತಾಲೂಕುವಾರು ಸೌಲಭ್ಯ ಪಡೆದವರ ಸಂಖ್ಯೆ ಮತ್ತು ಒಟ್ಟು ಖರ್ಚಾದ ಮೊತ್ತ ಅನುಕ್ರಮವಾಗಿ ಈ ಕೆಳಗೆ ಸೂಚಿಸಿರುವಂತಿದೆ. ಸೋಮವಾರಪೇಟೆ (2,518—15.98, 2,478—16.39 ಮತ್ತು 2,406—14.72), ಮಡಿಕೇರಿ (7,028—47.45, 6,837—48.07 ಮತ್ತು 1,114—7.52) ಮತ್ತು ವೀರರಾಜಪೇಟೆ(3,343 – 22.10,3,208 – 21.26 ಮತ್ತು 3,219 — 19.98). ಆವರಣದಲ್ಲಿರುವ ಮೊದ ಲನೇಯ ಸಂಖ್ಯೆಯು ವೇತನ ಸೌಲಭ್ಯ ಪಡೆದವರ ಸಂಖ್ಯೆ ಯನ್ನು ಮತ್ತು ಎರಡನೇಯ ಸಂಖ್ಯೆಯು ಖರ್ಚಾದ ಒಟ್ಟು ಹಣವನ್ನು ಲಕ್ಷ ರೂ.ಗಳಲ್ಲಿ ಸೂಚಿಸುತ್ತದೆ.

ಏಪ್ರಿಲ್ 1991 ರಿಂದ ವೃದ್ಧಾಪ್ಯವೇತನದ ದರವನ್ನು ಮಾಸಿಕ 75 ರೂಪಾಯಿಗಳಿಗೆ ಹೆಚ್ಚಿಸಿದ್ದು 1991-92 ನೇಯ ಸಾಲಿನಲ್ಲಿ ಜಿಲ್ಲೆಯಲ್ಲಿ 6,571 ಜನರು ಈ ಸೌಲಭ್ಯ

ವನ್ನು ಪಡೆದಿದ್ದು, ಸದರಿ ವರ್ಷದಲ್ಲಿ 56,17,292 ರೂಪಾಯಿಗಳನ್ನು ವೆಚ್ಚ ಮಾಡಲಾಯಿತು.

### ರಾಜಕೀಯ ವಿಶ್ರಾಂತಿ ವೇತನ

ಸ್ವಾತಂತ್ರ್ಯಯೋಧರಿಗೆ ಮತ್ತು ಸ್ವಾತಂತ್ರ್ಯಯೋಧರ ವಿಧವೆಯರಿಗೆ ಪಿಂಚಣಿ ಕೊಡುವ ಯೋಜನೆಯನ್ನು ಕರ್ನಾಟಕ ಸರ್ಕಾರವು ರಾಜ್ಯ ಸ್ವಾತಂತ್ರ್ಯ ಯೋಧರ ಕಲ್ಯಾಣ ನಿಯಮಗಳು, 1967 ಇದರನ್ವಯ 1968ರಲ್ಲಿ ಜಾರಿಗೆ ತಂದಿತು ಮತ್ತು 1969ರಲ್ಲಿ ಅದನ್ನು ತಿದ್ದುಪಡಿ ಮಾಡಲಾಯಿತು. ಪ್ರಾರಂಭದಲ್ಲಿ ಪಿಂಚಣಿಯು ತಿಂಗಳಿಗೆ 50ರೂ. ಇದ್ದು, 1971ರಲ್ಲಿ 75 ರೂ.ವಿಗೂ, 1978ರ ಜೂನ್‌ನಲ್ಲಿ 90 ರೂ.ವಿಗೂ, ಮತ್ತು ಅದೇ ವರ್ಷ ಸೆಪ್ಟಂಬರ್‌ನಲ್ಲಿ 125 ರೂ.ವಿಗೂ, 1986ರಲ್ಲಿ 150 ರೂ.ವಿಗೂ, 1987ರಲ್ಲಿ 200 ರೂ.ವಿಗೂ, 1989ರಲ್ಲಿ 300 ರೂ.ವಿಗೂ ಹಾಗೂ ಏಪ್ರಿಲ್ 1991 ರಿಂದ 400 ರೂ.ವಿಗೂ ಹೆಚ್ಚಿಸಲಾಗಿದೆ.

ಭಾರತ ಸರ್ಕಾರವು 1972ರಲ್ಲಿ ಸ್ವಾತಂತ್ರ್ಯಯೋಧರಿಗೆ ಮಾಸಿಕವಾಗಿ 200 ರೂ. ವಿಶ್ರಾಂತಿ ವೇತನವನ್ನು ನೀಡುವ ಯೋಜನೆಯನ್ನು ಜಾರಿಗೆ ತಂದಿತು. ಆರಂಭದಲ್ಲಿ ಪಿಂಚಣಿಯು 200 ರೂ.ನಲ್ಲಿ ರಾಜ್ಯ ಸರ್ಕಾರದ 75 ರೂ. ಮಾಸಿಕ ವಿಶ್ರಾಂತಿ ವೇತನವನ್ನೂ ಸೇರಿಸಲಾಗಿದ್ದು, 1976ರಲ್ಲಿ ಭಾರತ ಸರ್ಕಾರವು ರಾಜ್ಯ ಸರ್ಕಾರಗಳು ನೀಡುವ ವಿಶ್ರಾಂತಿ ವೇತನವನ್ನು ಗಣನೆಗೆ ತೆಗೆದುಕೊಳ್ಳದೇ 200 ರೂ. ಪಿಂಚಣಿಯನ್ನು ನೀಡಲು ನಿರ್ಧರಿಸಿತು. 1977ರಲ್ಲಿ ರಾಜ್ಯ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಪಿಂಚಣಿಯನ್ನು ಪಡೆಯುವ ಪಿಂಚಣಿದಾರರಿಗೆ ಪಿಂಚಣಿಯನ್ನು ನೀಡುವುದನ್ನು ನಿಲ್ಲಿಸಿತು. ಆದರೆ 1979ರಲ್ಲಿ ಅದನ್ನು ಮತ್ತೆ ಜಾರಿಗೆ ತರಲಾಯಿತು. 1980ರಲ್ಲಿ ಭಾರತ ಸರ್ಕಾರವು ಸ್ವಾತಂತ್ರ್ಯ ಯೋಧರ ಪಿಂಚಣಿ ಯೋಜನೆಯನ್ನು 'ಸ್ವತಂತ್ರತಾ ಸೈನಿಕ ಸನ್ಮಾನ ಪಿಂಚಣಿ ಯೋಜನೆ' ಎಂದು ಪುನರ್ನಾಮಕರಣ ಮಾಡಿ ಮಾಸಿಕ ಪಿಂಚಣಿಯ ದರವನ್ನು 300 ರೂ.ಗಳಿಗೆ ಏರಿಸಿದ್ದು, 1985ರಲ್ಲಿ ಇದನ್ನು 500 ರೂ.ವಿಗೂ ಮತ್ತು 14ನೇ ನವೆಂಬರ್ 1988 ರಿಂದ 750 ರೂ.ವಿಗೂ ಏರಿಸಲಾಗಿದೆ. 1992 ರಿಂದ ಇದನ್ನು 1000 ರೂ.ಗೆ ಹೆಚ್ಚಿಸಲಾಗಿದೆ. 1991–92ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 58 ಸ್ವಾತಂತ್ರ್ಯಯೋಧರು ರಾಜ್ಯ ಸರ್ಕಾರದ ಪಿಂಚಣಿಯನ್ನೂ, 56 ಸ್ವಾತಂತ್ರ್ಯಯೋಧರು ಕೇಂದ್ರ ಸರ್ಕಾರದ ಪಿಂಚಣಿಯನ್ನೂ ಮತ್ತು ನಾಲ್ಕು ಸ್ವಾತಂತ್ರ್ಯಯೋಧರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡರ ಸೌಲಭ್ಯವನ್ನೂ ಪಡೆಯುತ್ತಿದ್ದು, ಈ ಸಾಲಿನಲ್ಲಿ ರಾಜ್ಯ ಸರ್ಕಾರದ ಪಿಂಚಣಿಗಾಗಿ 2,94,674 ರೂ.ಗಳನ್ನೂ ಮತ್ತು ಕೇಂದ್ರ ಸರ್ಕಾರದ ಪಿಂಚಣಿಗಾಗಿ 4,26,300 ರೂ.ಗಳನ್ನೂ ವೆಚ್ಚ ಮಾಡಲಾಗಿದೆ.

ಹಸಿರು ಪಡಿತರ ಚೀಟಿ ಸೌಲಭ್ಯ : ಕರ್ನಾಟಕ ಸರ್ಕಾರವು 1ನೇ ನವೆಂಬರ್ 1985 ರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಕಡುಬಡ ಜನರನ್ನು ಕೆಲವು ಆಧಾರಗಳ ಮೇಲೆ ಗುರ್ತಿಸಿ, ಅವರಿಗೆ ಕಡಿಮೆ ದರದಲ್ಲಿ ಪಡಿತರವನ್ನು ಒದಗಿಸುವ ಯೋಜನೆಯನ್ನು ಆರಂಭಿಸಿದೆ. 27ನೇ ಡಿಸೆಂಬರ್ 1985 ರಿಂದ ಈ ಸೌಲಭ್ಯವನ್ನು ಭೂರಹಿತ ಕೃಷಿ ಕಾರ್ಮಿಕರಿಗೂ ವಿಸ್ತರಿಸಲಾಯಿತು. 1991ರ ಸೆಪ್ಟಂಬರ್ ಕೊನೆಯ ವೇಳೆಗೆ ಈ ಸೌಲಭ್ಯ ಪಡೆದಿರುವವರ ತಾಲೂಕುವಾರು ಸಂಖ್ಯೆಯನ್ನು ಈ ಮುಂದೆ ನೀಡಲಾಗಿದೆ : ಮಡಿಕೇರಿ (8,504), ಸೋಮವಾರಪೇಟೆ (21,818) ಮತ್ತು ವೀರರಾಜಪೇಟೆ (25,162).

### ಕಡಿಮೆ ದರದಲ್ಲಿ ಬಟ್ಟೆ ವಿತರಣೆ ಯೋಜನೆ

ಕರ್ನಾಟಕ ಸರ್ಕಾರವು 15ನೇ ಆಗಸ್ಟ್ 1985 ರಂದು ಬಡತನ ರೇಖೆಯಿಂದ ಕೆಳಮಟ್ಟದಲ್ಲಿರುವ ದುರ್ಬಲ ವರ್ಗದ 19 ವರ್ಷಕ್ಕೆ ಮೇಲ್ಪಟ್ಟ ಗಂಡಸರಿಗೆ ಮತ್ತು ಹೆಂಗಸರಿಗೆ ಕಡಿಮೆ ದರದಲ್ಲಿ ಬಟ್ಟೆ ವಿತರಣೆ ಮಾಡುವ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಂತೆ 25 ರೂ.ಗೆ ಒಂದು ಜೊತೆ ಪಂಚೆ ಮತ್ತು ಒಂದು ಷರ್ಟಿಂಗ್ ಬಟ್ಟೆಯನ್ನು ಗಂಡಸರಿಗೂ ಮತ್ತು 25 ರೂ.ಗೆ ಒಂದು ಜೊತೆ ಸೀರೆ ಮತ್ತು ಒಂದು ಜೊತೆ ರವಿಕೆ ಬಟ್ಟೆಯನ್ನು ಹೆಂಗಸರಿಗೂ ವಿತರಿಸಲಾಗುವುದು. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಬರುವ ಹಾಗೂ ಹಸಿರು ಪಡಿತರ ಚೀಟಿಯ ಸೌಲಭ್ಯವನ್ನು ಪಡೆಯುವವರೆಲ್ಲರಿಗೂ ಈ ಯೋಜನೆಯು ಅನ್ವಯವಾಗುತ್ತದೆ. 1990–91ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಮಡಿಕೇರಿ ತಾಲೂಕಿನಲ್ಲಿ 4,700 ಗಂಡಸರು, 4,700 ಹೆಂಗಸರು, ಸೋಮವಾರಪೇಟೆ ತಾಲೂಕಿನಲ್ಲಿ 7,500 ಗಂ., 7,500 ಹೆಂ. ಮತ್ತು ವೀರರಾಜಪೇಟೆ ತಾಲೂಕಿನಲ್ಲಿ 10,600 ಗಂ., 10,600 ಹೆಂ. ಸೌಲಭ್ಯವನ್ನು ಪಡೆದಿದ್ದು ಒಟ್ಟಾರೆ 12,39,180 ರೂ. ಮೌಲ್ಯದ ಬಟ್ಟೆಯನ್ನು ವಿತರಣೆ

ಮಾಡಲಾಗಿದೆ. 1991-92ನೇಯ ಸಾಲಿನಲ್ಲಿ ಜಿಲ್ಲೆಯ ವೀರರಾಜಪೇಟೆ ತಾಲೂಕಿನಲ್ಲಿ 8,600 ಗಂಡಸರೂ ಮತ್ತು 8,600 ಹೆಂಗಸರೂ ಈ ಸೌಲಭ್ಯವನ್ನು ಪಡೆದಿರುತ್ತಾರೆ. (ಸದರಿ ವರ್ಷದಲ್ಲಿ ಉಳಿದೆರಡು ತಾಲೂಕುಗಳಲ್ಲಿ ಈ ಸೌಲಭ್ಯವನ್ನು ಯಾರೂ ಪಡೆದಿರುವುದಿಲ್ಲ).

### ಪಾನ ನಿರೋಧ

ಕೊಡಗು ಜಿಲ್ಲೆಯಲ್ಲಿ ಪಾನ ನಿರೋಧದ ಯತ್ನವು ಸ್ವಾತಂತ್ರ್ಯ ಪೂರ್ವದಲ್ಲೇ ನಡೆಯಿತು. ಮಡಿಕೇರಿಯಲ್ಲಿ 1930ರಲ್ಲಿ ಪಾನ ನಿರೋಧ ಕಾರ್ಯಕ್ರಮದ ಅಂಗವಾಗಿ ಒಂದು ಬೃಹತ್ ಸಭೆಯನ್ನು ಕೊರವಂಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ವೀರರಾಜಪೇಟೆ ಮತ್ತು ಹುದಿಕೇರಿಯಲ್ಲಿ ಸಾರಾಯಿ ಗಡಂಗು ಮತ್ತು ಅಂಗಡಿಗಳ ಪಿಕೆಟಿಂಗ್ ಸಹ ನಡೆಯಿತು. ಗಡಂಗುಗಳ ಏಲಂ ವಿರುದ್ಧ ಕೂಡ ಯಶಸ್ವಿ ಪಿಕೆಟಿಂಗ್ ಆಯಿತು. ಹಬ್ಬಗಳ ಕಾಲದಲ್ಲೂ ಮದ್ಯದ ಮಾರಾಟ ಇಳಿತವಾಗುವಷ್ಟು ಪ್ರಬಲ ಪ್ರಚಾರವಾಯಿತು. (ಅಧ್ಯಾಯ 2 ನೋಡಿ).

ಹಳೆಯ ಕೊಡಗು ಸಂಸ್ಥಾನದ 1956ರ ಅಧಿನಿಯಮ ಒಂದರ ಪ್ರಕಾರ ಕೊಡಗು ಜಿಲ್ಲೆಯಲ್ಲಿ ಏಪ್ರಿಲ್ 1956 ರಿಂದ ಮೊದಲ ಬಾರಿಗೆ ಪಾನ ಪ್ರತಿಬಂಧವನ್ನು ಆಳವಡಿಸಲಾಯಿತು. ಈ ಅಧಿನಿಯಮದ ಪ್ರಕಾರ ಮಾದಕ ದ್ರವ್ಯ ಮತ್ತು ಅಮಲು ಬರುವ ಔಷಧಗಳನ್ನು ತಯಾರಿಸುವುದು, ಆಮದು ಮತ್ತು ರಫ್ತು ಮಾಡುವುದು, ಮಾರಾಟ ಮಾಡುವುದು, ಕೊಳ್ಳುವುದು ಮತ್ತು ಸೇವಿಸುವುದೆಲ್ಲವನ್ನು ವೈದ್ಯಕೀಯ, ವೈಜ್ಞಾನಿಕ ಹಾಗೂ ಕೈಗಾರಿಕೆ ಈ ಮುಂತಾದವುಗಳ ಉದ್ದೇಶವನ್ನು ಹೊರತುಪಡಿಸಿ ನಿಷೇಧಿಸಲಾಗಿತ್ತು. ಕರ್ನಾಟಕ ಪಾನ ನಿರೋಧ (ತಿದ್ದುಪಡಿ) ಅಧಿನಿಯಮ 1967 ಜಾರಿಗೆ ಬಂದ ಪರಿಣಾಮದಿಂದ ಜಿಲ್ಲೆಯಲ್ಲಿ 1967ರಲ್ಲಿ ಪಾನ ನಿರೋಧವನ್ನು ಸಡಿಲಗೊಳಿಸಲಾಯಿತು. 1979-80 ರಿಂದ 1981-82ರ ವರೆಗೆ ಜಿಲ್ಲೆಯಲ್ಲಿ ಹೆಂಡದ ಮಾರಾಟವನ್ನು ನಿಷೇಧಿಸಲಾಗಿದ್ದು, 1982-83 ಮತ್ತು 1983-84ನೇ ಸಾಲುಗಳಲ್ಲಿ ಇದನ್ನು ಸಡಿಲಗೊಳಿಸಿದ್ದು ಮತ್ತೆ ಹೆಂಡದ ಮಾರಾಟವನ್ನು ನಿಷೇಧಿಸಲಾಗಿದೆ.

### ಧಾರ್ಮಿಕ ಮತ್ತು ಧರ್ಮಾರ್ಥಕ ಸಂಸ್ಥೆಗಳು

ಕೊಡಗು ಜಿಲ್ಲೆಯಲ್ಲಿ ಧಾರ್ಮಿಕ ಮತ್ತು ಧರ್ಮಾರ್ಥಕ ಸಂಸ್ಥೆಗಳು ಕೊಡಗು ದೇವಸ್ಥಾನ ನಿಧಿ ವ್ಯವಸ್ಥಾಪನಾ ಸಮಿತಿ ಕಾಯ್ದೆ 1956ರ ನಿಯಮಾವಳಿಗೊಳಪಟ್ಟಿದ್ದು, ಇದರ ಪ್ರಕಾರ ಜಿಲ್ಲೆಯ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳಲು ಒಂದು ಸಮಿತಿಯು ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲಾಧಿಕಾರಿಗಳು ಈ ಸಮಿತಿಯ ಅಧ್ಯಕ್ಷರಾಗಿದ್ದು, ಸರಕಾರದಿಂದ ನಾಮಕರಣಗೊಂಡಿರುವ 11 ಜನರು ಸ್ಥಳೀಯ ಸದಸ್ಯರಾಗಿರುತ್ತಾರೆ. ಮಡಿಕೇರಿಯಲ್ಲಿನ ಓಂಕಾರೇಶ್ವರ ದೇವಸ್ಥಾನ ಮತ್ತು ರಾಜರ ಗದ್ದಿಗೆ, ಮಡಿಕೇರಿ ತಾಲೂಕಿನ ಕಕ್ಕಬ್ಬೆ ಗ್ರಾಮದ ಪಾಡಿ ಶ್ರೀ ಇಗ್ಗುತಪ್ಪ ಸುಬ್ರಾಯ ದೇವಾಲಯ, ಪಾಲೂರು ಮಹಾಲಿಂಗೇಶ್ವರ ದೇವಾಲಯ ಹರಿಶ್ಚಂದ್ರ ದೇವಾಲಯ, ಪಾಲೂರು ಮತ್ತು ತಲಕಾವೇರಿ ಅಗಸ್ತ್ಯೇಶ್ವರ ಹಾಗೂ ಭಾಗಮಂಡಲ ಭಗಂಡೇಶ್ವರ ದೇವಾಲಯ, ವೀರರಾಜಪೇಟೆ ತಾಲೂಕಿನ ಕುರ್ಚಿ ಗ್ರಾಮದ ಇರ್ಪು ಶ್ರೀ ರಾಮೇಶ್ವರ ದೇವಾಲಯ, ಈ ಸಂಸ್ಥೆಗಳು ಸಮಿತಿಯ ವ್ಯಾಪ್ತಿಗೆ ಒಳಪಟ್ಟಿವೆ. 1989-90 ಮತ್ತು 1990-91ನೇ ಸಾಲುಗಳಲ್ಲಿ ಈ ಸಮಿತಿಯ ಒಟ್ಟು ವರಮಾನವು ಕ್ರಮವಾಗಿ 14,37,479 ರೂ. ಮತ್ತು 10,98,749 ರೂ. ಆಗಿದ್ದು, ಈ ಎರಡು ಸಾಲುಗಳಲ್ಲಿ ಕ್ರಮವಾಗಿ 14,12,479 ರೂ. ಮತ್ತು 10,37,940 ರೂ.ಗಳನ್ನು ವೆಚ್ಚ ಮಾಡಲಾಗಿದೆ.

## ವಕ್ಫ್ ಸಂಸ್ಥೆಗಳು

ಕೊಡಗು ಜಿಲ್ಲೆಯಲ್ಲಿ 1954ರ ಕೇಂದ್ರ ವಕ್ಫ್ ಕಾಯ್ದೆಯನ್ನು 1955ರಲ್ಲಿ ಜಾರಿಗೆ ತರಲಾಯಿತು. ತರುವಾಯ ಈ ಕಾಯ್ದೆಯನ್ನು 1959, 1964 ಹಾಗೂ 1968ರಲ್ಲಿ ತಿದ್ದುಪಡಿ ಮಾಡಲಾಯಿತು. ಜಿಲ್ಲೆಯಲ್ಲಿನ ಪ್ರಸ್ತುತ ವಕ್ಫ್ ಆಸ್ತಿಪಾಸ್ತಿಗಳ ಆಡಳಿತವನ್ನು ನಿರ್ವಹಿಸಲು ಕರ್ನಾಟಕ ವಕ್ಫ್ ಮಂಡಲಿಯ ಮಾರ್ಗದರ್ಶನದಲ್ಲಿ ಜಿಲ್ಲಾ ವಕ್ಫ್ ಸಮಿತಿಯು ಕಾರ್ಯ ನಿರ್ವಹಿಸುತ್ತಿದ್ದು, ಈಗಿರುವ ವಕ್ಫ್ ಸಮಿತಿಯನ್ನು 1986ರ ಮೇ 12 ರಂದು ರಚಿಸಲಾಯಿತು. ಜಿಲ್ಲೆಯಲ್ಲಿರುವ ತಾಲೂಕುವಾರು ವಕ್ಫ್ ಸಂಸ್ಥೆಗಳೆಂದರೆ, ಮಡಿಕೇರಿ ತಾಲೂಕಿನ ಜಾಮಿಯಾ ಮಸೀದಿ (ಮಹದೇವಪೇಟೆ) ಮಡಿಕೇರಿ, ಎಂ. ಎಂ. ಜಮಾತ್ ಮಸೀದಿ (ಗಣಪತಿ ಬೀದಿ) ಮಡಿಕೇರಿ, ಲಷ್ಕರ್ ಮಸೀದಿ ಚಿಕ್ಕಪೇಟೆ, ಮಡಿಕೇರಿ, ಭಟ್ಕಳ್ ಜುಮ್ಮಾ ಮಸೀದಿ (ಗಣಪತಿ ಬೀದಿ) ಮಡಿಕೇರಿ, ಬದ್ರಿಯಾ ಜುಮ್ಮಾ ಮಸೀದಿ (ಗಣಪತಿ ಬೀದಿ) ಮಡಿಕೇರಿ, ಜುಮ್ಮಾ ಮಸೀದಿ ತಾವೂರು, ಜುಮ್ಮಾ ಮಸೀದಿ ಅಯ್ಯಂಗೇರಿ, ಜುಮ್ಮಾ ಮಸೀದಿ ನಾಪೋಕ್ಲು, ಜುಮ್ಮಾ ಮಸೀದಿ ಯಮ್ಮೆನಾಡು, ಜುಮ್ಮಾ ಮಸೀದಿ ಕೋಳಕೇರಿ, ಜುಮ್ಮಾ ಮಸೀದಿ ಕುಂಜಿಲ

ಗ್ರಾಮ, ಜುಮ್ಮಾ ಮಸೀದಿ ಬೇಲಿಗೇರಿ, ಜುಮ್ಮಾ ಮಸೀದಿ ಎಡಪಾಲ, ಜುಮ್ಮಾ ಮಸೀದಿ ಪಡಿಯಾಣಿ, ಜುಮ್ಮಾ ಮಸೀದಿ ಕೋಯನಾಡು, ಜುಮ್ಮಾ ಮಸೀದಿ ಚಿಟ್ಟಿಮಾನಿ, ಜುಮ್ಮಾ ಮಸೀದಿ ಚೇರಂಬಾಣೆ ಮತ್ತು ಜುಮ್ಮಾ ಮಸೀದಿ ಬೆಟ್ಟಗೇರಿ; ವೀರರಾಜಪೇಟೆ ತಾಲೂಕಿನಲ್ಲಿ ಷಾಫಿ ಜುಮ್ಮಾ ಮಸೀದಿ, ವೀರರಾಜಪೇಟೆ, ಬಿಸ್ಮಿಲ್ಲ ಶಾವಲಿ ಮಕಾನ್, ವೀರರಾಜಪೇಟೆ, ಹುಡಾಲಿ ಷಾಫಿ ಜುಮ್ಮಾ ಮಸೀದಿ ವೀರರಾಜಪೇಟೆ, ಜಾಮಿಯಾ ಮಸೀದಿ (ಖಾಜಿ ಮೊಹಲ್ಲ) ವೀರರಾಜಪೇಟೆ, ಜುಮ್ಮಾ ಮಸೀದಿ ಕೊಂಡಂಗೇರಿ, ಜುಮ್ಮಾ ಮಸೀದಿ ಸಿದ್ದಾಪುರ, ಜುಮ್ಮಾ ಮಸೀದಿ ಬೆಳಗೊಂಡ, ಜುಮ್ಮಾ ಮಸೀದಿ ಅಮ್ಮತ್ತಿ, ಜುಮ್ಮಾ ಮಸೀದಿ ಶ್ರೀಮಂಗಲ, ಜುಮ್ಮಾ ಮಸೀದಿ ಧನಗಾಲ, ಜುಮ್ಮಾ ಮಸೀದಿ ಬೀಳೂರು, ಜುಮ್ಮಾ ಮಸೀದಿ ಬಾಳೆಲೆ, ಜುಮ್ಮಾ ಮಸೀದಿ ಹುದಿಕೇರಿ, ಜುಮ್ಮಾ ಮಸೀದಿ ಹಳ್ಳಿಗಟ್ಟು, ಬಾದರ್ ಜುಮ್ಮಾ ಮಸೀದಿ ಹಳ್ಳಿಗಟ್ಟು, ಜುಮ್ಮಾ ಮಸೀದಿ ಪೊನ್ನಂಪೇಟೆ, ಜುಮ್ಮಾ ಮಸೀದಿ ಅರವತ್ತೊಕ್ಕಲು, ಜುಮ್ಮಾ ಮಸೀದಿ ನೊಕ್ಯ, ಜುಮ್ಮಾ ಮಸೀದಿ ಕುಟ್ಟ, ಜುಮ್ಮಾ ಮಸೀದಿ (ಚಂಬುಕೊಲ್ಲಿ) ಕುಟ್ಟ, ಷಾಫಿ ಜುಮ್ಮಾ ಮಸೀದಿ ಗೋಣಿಕೊಪ್ಪಲು, ಹನ್‌ಫಿ ಜುಮ್ಮಾ ಮಸೀದಿ ಗೋಣಿಕೊಪ್ಪಲು, ಮಸೀದಿ ರಷದ್ ಎಲ್ಯಾಂಗದ್, ಜುಮ್ಮಾ ಮಸೀದಿ ಗುಂಡಿಕೇರಿ, ಜುಮ್ಮಾ ಮಸೀದಿ ಬೇತ್ರಿ, ಷಾಫಿ ಜುಮ್ಮಾ ಮಸೀದಿ ಪೊನ್ನಂಪೇಟೆ, ಮೊಹಿದ್ದೀನ್ ಜುಮ್ಮಾ ಮಸೀದಿ ಚೊಕ್ಕಂಡಹಳ್ಳಿ, ಜುಮ್ಮಾ ಮಸೀದಿ ದೇವಣಗೇರಿ, ಜುಮ್ಮಾ ಮಸೀದಿ ಕಾಲೂಬಾಣೆ, ಷಾಫಿ ಜುಮ್ಮಾ ಮಸೀದಿ ಅಮ್ಮತ್ತಿ, ಜುಮ್ಮಾ ಮಸೀದಿ ಬಿಟ್ಟಂಗಾಲ ಮತ್ತು ಜುಮ್ಮಾ ಮಸೀದಿ ಚಮಿಯಾಲ ಗ್ರಾಮ; ಮತ್ತು ಸೋಮವಾರಪೇಟೆ ತಾಲೂಕಿನಲ್ಲಿ ಜಾಮಿಯಾ ಮಸೀದಿ, ಸೋಮವಾರಪೇಟೆ, ಜಲಾಲಿಯಾ ಜುಮ್ಮಾ ಮಸೀದಿ ಸೋಮವಾರಪೇಟೆ, ಜಾಮಿಯಾ ಮಸೀದಿ ಶನಿವಾರಸಂತೆ, ಜುಮ್ಮಾ ಮಸೀದಿ ಕಗಡಿಕಟ್ಟೆ, ಜುಮ್ಮಾ ಮಸೀದಿ ದೊಡ್ಡಕೊಂದ, ಜಾಮಿಯಾ ಮಸೀದಿ ಕುಶಾಲನಗರ, ಜುಮ್ಮಾ ಮಸೀದಿ ಕೂಡಿಗೆ, ಜುಮ್ಮಾ ಮಸೀದಿ ನಂಜರಾಯಪಟ್ಟಣ, ಜುಮ್ಮಾ ಮಸೀದಿ ಮಾದಾಪುರ, ಜುಮ್ಮಮಸಿದಿ ಸುಂಟಿಕೊಪ್ಪ, ಜುಮ್ಮಾ ಮಸೀದಿ ಚೇರಳ ಶ್ರೀಮಂಗಲ, ಜುಮ್ಮಾ ಮಸೀದಿ ಚಟ್ಟಳ್ಳಿ, ನೂರ್ ಜುಮ್ಮಾ ಮಸೀದಿ ಗದ್ದಹಳ್ಳ, ಜುಮ್ಮಾ ಮಸೀದಿ ಹೊಸಕೋಟೆ ಮತ್ತು ಜುಮ್ಮ ಮಸೀದಿ, ಗುಡುಗಲಾಲ.

1989–90 ಮತ್ತು 1990-91ನೇ ಸಾಲುಗಳಲ್ಲಿ ವಕ್ಫ್ ಸಂಸ್ಥೆಗಳಿಂದ ಸಂಗ್ರಹಿಸಿದ ನಿಧಿ ಕ್ರಮವಾಗಿ ಮಡಿಕೇರಿ ತಾಲೂಕು 2,20,000 ರೂ. – ಮಾಹಿತಿ ಇಲ್ಲ, ಸೋಮವಾರಪೇಟೆ ತಾಲೂಕು 6,414 ರೂ. – 5,000 ರೂ. ಮತ್ತು ವೀರರಾಜಪೇಟೆ ತಾಲೂಕು 10,250 ರೂ.– 7,832 ರೂ. ಆಗಿದ್ದು, ಈ ಎರಡು ವಾರ್ಷಿಕ ಸಾಲುಗಳಲ್ಲಿ ವಕ್ಫ್ ಆಸ್ತಿ-ಪಾಸ್ತಿಗಳನ್ನು ಪುರೋಭಿವೃದ್ಧಿಗೊಳಿಸಲು ಕ್ರಮವಾಗಿ ಮಡಿಕೇರಿ ತಾಲೂಕು 65,000 ರೂ.–35,000 ರೂ., ಸೋಮವಾರಪೇಟೆ ತಾಲೂಕು 30,000 ರೂ.– ಮಾಹಿತಿ ಇಲ್ಲ ಮತ್ತು ವೀರರಾಜಪೇಟೆ ತಾಲೂಕು 65,000 ರೂ. – 45,000 ರೂ.ಗಳನ್ನು ವೆಚ್ಚ ಮಾಡಲಾಗಿದೆ.

## ಸ್ವಯಂ ಸೇವಾ ಸಂಸ್ಥೆಗಳು

ಅಖಿಲ ಕೊಡವ ಸಮಾಜವು ವೀರರಾಜಪೇಟೆಯಲ್ಲಿ 1942 ರಲ್ಲಿ ಪ್ರಾರಂಭವಾಯಿತು. ಕೊಡವರ ಆಚಾರ-ವಿಚಾರ, ಶಾಸ್ತ್ರ–ಸಂಪ್ರದಾಯ ಇವುಗಳ ಅಧ್ಯಯನ ಮತ್ತು ಸಂರಕ್ಷಣೆ, ಕೊಡವ ಜನಾಂಗದ ಆರ್ಥಿಕ, ಸಾಮಾಜಿಕ, ನೈತಿಕ ಮತ್ತು ಸಾಂಸ್ಕೃತಿಕ ಶ್ರೇಯೋಭಿವೃದ್ಧಿ, ಸಹಕಾರ ಮತ್ತು ಸ್ವಾವಲಂಬನೆಯನ್ನು ಕಾಯ್ದು ಕೊಳ್ಳುವುದು, ಕೊಡವ ಜನಾಂಗದ ವಿಶೇಷ ಹಕ್ಕುಗಳ ಸಂರಕ್ಷಣೆ, ಕೊಡವ ಜನಾಂಗದಲ್ಲಿ ಸಾಮಾಜಿಕ ಜಾಗೃತಿ ಮೂಡಿಸುವುದು, ಈ ಮುಂತಾದವುಗಳು ಸಮಾಜದ ಪ್ರಮುಖ ಧ್ಯೇಯೋದ್ದೇಶಗಳಾಗಿವೆ. ಕೊಡಗಿನ ಸಾಮಾಜಿಕ ಪರಿಸರವನ್ನು ಅವನತಿಯಿಂದ ರಕ್ಷಿಸಿಕೊಂಡು ಬಂದಿರುವುದು, ಕೊಡವ ಜನಾಂಗದ ಸಂಸ್ಕೃತಿ ಪದ್ಧತಿ, ಪರಂಪರೆಗಳನ್ನು ಸಂರಕ್ಷಿಸಿ ಸತತವಾಗಿ ಆಚರಿಸಲು ಶ್ರಮಿಸುತ್ತಿರುವುದು, ಈ ಸಮಾಜದ ಪ್ರಮುಖ ಸಾಧನೆಗಳಾಗಿವೆ.

ಕೊಡಗು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿಯು ಮಡಿಕೇರಿಯಲ್ಲಿ 1917ರಲ್ಲಿ ಸ್ಥಾಪನೆಯಾಗಿದ್ದು, ಸಮಾಜದಲ್ಲಿ ಆರ್ಥಿಕವಾಗಿ ಹಿಂದಿರುವ ವಿದ್ಯಾರ್ಥಿಗಳಿಗೆ ಧನಸಹಾಯ ಮಾಡುವುದು, ವಿದ್ಯಾರ್ಥಿ ವೇತನ ನೀಡುವುದು, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು, ಪ್ರತಿಭಾ ಸ್ಪರ್ಧೆ ನಡೆಸುವುದು, ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘಟನೆಯ ಕಾರ್ಯಕ್ರಮಗಳನ್ನು ನಡೆಸುವುದು ಈ ಮುಂತಾದವು ನಿಧಿಯ ಪ್ರಮುಖ ಉದ್ದೇಶಗಳಾಗಿವೆ.

ಕೊಡಗು ಗೌಡ ವಿದ್ಯಾ ಸಂಘವು ಮಡಿಕೇರಿಯಲ್ಲಿ 1908 ರಲ್ಲಿ ದಿವಂಗತ ಕುಂಬುಗೌಡನ ಕುಶಾಲಪ್ಪನವರ ನೇತೃತ್ವದಲ್ಲಿ ಆರಂಭವಾಗಿ, 1933ರಲ್ಲಿ ನೋಂದಾಯಿಸಲ್ಪಟ್ಟಿತ್ತು. ಆರಂಭದಲ್ಲಿ ಈ ಸಂಘದಿಂದ ವಿದ್ಯಾಭ್ಯಾಸಕ್ಕಾಗಿ ಬಡ ವಿದ್ಯಾರ್ಥಿಗಳಿಗೆ ಸಾಲದ ರೂಪದಲ್ಲಿ ಧನಸಹಾಯ ಮಾಡುತ್ತಿದ್ದು, ಈಗ ಇದನ್ನು ನಿಲ್ಲಿಸಿ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ

ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಪ್ರತೀ ವರ್ಷವೂ ನೀಡಲಾಗುತ್ತಿದೆ. ಈ ಯೋಜನೆಗಾಗಿ ಸಂಘವು ಶಾಶ್ವತ ಸ್ಮಾರಕ ನಿಧಿಯನ್ನು ಸ್ಥಾಪಿಸಿದೆ. ಸಂಘವು ಹಳ್ಳಿಯಿಂದ ವಿದ್ಯಾಭ್ಯಾಸಕ್ಕಾಗಿ ಮಡಿಕೇರಿಯಲ್ಲಿನ ಶಾಲಾ ಕಾಲೇಜುಗಳಿಗೆ ಬರುವ ಮಕ್ಕಳ ವಸತಿ ಸೌಲಭ್ಯಕ್ಕಾಗಿ ಗೌಡ ವಿದ್ಯಾರ್ಥಿನಿಲಯವನ್ನು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕವಾಗಿ ಸ್ಥಾಪಿಸಿದೆ. ಅಲ್ಲದೆ, ಈ ವಿದ್ಯಾರ್ಥಿ ನಿಲಯದಲ್ಲಿ ಗೌಡ ಜನಾಂಗದವರಿಗೂ ಮತ್ತು ಇತರ ಜನಾಂಗದವರಿಗೂ ವಿವಾಹವನ್ನು ನಡೆಸಲು ಬೇಕಾದ ಅನುಕೂಲತೆಗಳನ್ನು ಒದಗಿಸುತ್ತದೆ.

**ಲಯನ್ಸ್ ಕ್ಲಬ್, ವೀರರಾಜಪೇಟೆ :** ವೀರರಾಜಪೇಟೆಯಲ್ಲಿ ಲಯನ್ಸ್ ಕ್ಲಬ್ 1976 ರಲ್ಲಿ ಸ್ಥಾಪನೆಯಾಯಿತು. ಇದು ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನು ಕೈಗೊಂಡಿರುವುದೇ ಅಲ್ಲದೆ, ಆರೋಗ್ಯ ಶಿಬಿರಗಳು, ನೇತ್ರ ಮತ್ತು ದಂತ ಚಿಕಿತ್ಸಾ ಶಿಬಿರಗಳು, ಕ್ರೀಡೆ ಮತ್ತು ಸಂಗೀತ ಸ್ಪರ್ಧೆಗಳೂ ಇವೇ ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ಹಾಗೂ ಅಂಧರು ಮತ್ತು ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿದೆ.

**ರೋಟರಿ ಕ್ಲಬ್, ವೀರರಾಜಪೇಟೆ :** ವೀರರಾಜಪೇಟೆಯಲ್ಲಿ ರೋಟರಿ ಕ್ಲಬ್ 1971 ರಲ್ಲಿ ಪ್ರಾರಂಭವಾಗಿದ್ದು, ಇದು ಶಾಲೆ, ಉದ್ಯಾನವನ, ಆಟದ ಮೈದಾನ ಹಾಗೂ ವೀರರಾಜಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಮನರಂಜನಾ ಕೇಂದ್ರ ಇವೇ ಮುಂತಾದವುಗಳನ್ನು ಸ್ಥಾಪಿಸಿದೆ. ಅಲ್ಲದೆ ಆರೋಗ್ಯ ಶಿಬಿರಗಳನ್ನು ನಡೆಸುವುದು, ಕ್ರಿಕೆಟ್, ಹಾಕಿ ಇವೇ ಮುಂತಾದ ಕ್ರೀಡಾ ಪಂದ್ಯಗಳನ್ನು ನಡೆಸುವುದು, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತಾಲೂಕು ಮಟ್ಟದಲ್ಲಿ ಸಾಮಾನ್ಯ ಜ್ಞಾನ ಮತ್ತು ಪ್ರತಿಭಾ ಸ್ಪರ್ಧೆಗಳನ್ನು ನಡೆಸುವುದು, ಈ ಮೊದಲಾದ ರಚನಾತ್ಮಕ ಕಾರ್ಯಗಳನ್ನು ರೂಪಿಸಿಕೊಂಡಿದೆ.

**ಲಯನ್ಸ್ ಕ್ಲಬ್, ಗೋಣಿಕೊಪ್ಪಲು :** ಗೋಣಿಕೊಪ್ಪಲಿನಲ್ಲಿ ಲಯನ್ಸ್ ಕ್ಲಬ್ 1972 ರಲ್ಲಿ ಸ್ಥಾಪನೆಯಾಗಿ, ಹಲವಾರು ಸಾಮಾಜಿಕ, ಶೈಕ್ಷಣಿಕ ಮತ್ತು ಆರೋಗ್ಯ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಆರೋಗ್ಯ ಶಿಬಿರಗಳು, ನೇತ್ರ ಚಿಕಿತ್ಸಾ ಶಿಬಿರಗಳು, ವನಮಹೋತ್ಸವದ ಆಚರಣೆ, ಕ್ರೀಡಾ ಪಂದ್ಯಗಳು, ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದು, ಇವೇ ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತಿರುವುವೇ ಅಲ್ಲದೆ, 1980 ರಿಂದ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿದೆ. ಲಯನ್ಸ್‌ನ ಎರಡು ಜಿಲ್ಲಾ ಸಮ್ಮೇಳನಗಳನ್ನು ಮತ್ತು ಹಲವು ಪ್ರಾಂತೀಯ ಸಮ್ಮೇಳನಗಳನ್ನು ನಡೆಸಿದೆ.

ಮಡಿಕೇರಿಯಲ್ಲಿ ಲಯನ್ಸ್ ಕ್ಲಬ್ ಇಂಥದೇ ಸಮಾಜ ಸೇವಾ ಚಟುವಟಿಕೆಗಳನ್ನು ಉತ್ಸಾಹದಿಂದ ನಡೆಸುತ್ತಿದೆ. ಇದಲ್ಲದೆ ಮಡಿಕೇರಿ, ವೀರರಾಜಪೇಟೆ ಹಾಗೂ ಸೋಮವಾರಪೇಟೆ ಮುಂತಾದೆಡೆ ಜೂನಿಯರ್ ಚೇಂಬರ್ (ಜೆ.ಸಿ.) ಇಂಥ ಚಟುವಟಿಕೆಗಳಲ್ಲಿ ಮಗ್ನವಾಗಿದೆ. ಮಡಿಕೇರಿಯ ಜೊತೆ ಬಾಂಧವ್ಯವನ್ನು ಪ್ರಸ್ತಾಪಿಸಿರುವ ಅಮೆರಿಕದ (ನ್ಯೂಯಾರ್ಕ್ ಸಮೀಪದ) ಡೇರಿಯನ್ ಪಟ್ಟಣದವರು, ಡೇರಿಯನ್ ಮರ್ಕರಾ ಅಸೋಸಿಯೇಶನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದು, ಅದು ಬಹುಮುಖ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿದೆ.

**ಕರ್ನಾಟಕ ಸಂಘ, ವೀರರಾಜಪೇಟೆ**

ಇದು 1962ರಲ್ಲಿ ಕನ್ನಡ ಭಾಷೆ, ಸಾಹಿತ್ಯಗಳ ಸೇವೆ ನಡೆಸುವ ಉದ್ದೇಶದಿಂದ ಸ್ಥಾಪನೆಯಾಯಿತು. ಇದು ಕನ್ನಡದ ಬೆಳವಣಿಗೆಗಾಗಿ ಕವಿಗೋಷ್ಠಿ, ಶಾಲಾಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಭಾಷಣ, ಚರ್ಚೆ, ಸಂಗೀತ, ನಾಟಕ, ಹಾಡುಗಾರಿಕೆ ಇವೇ ಮುಂತಾದ ಸ್ಪರ್ಧೆಗಳನ್ನೇರ್ಪಡಿಸುವುದೇ ಅಲ್ಲದೆ, ಸಾರ್ವಜನಿಕರ ಅನುಕೂಲಕ್ಕಾಗಿ ಉಚಿತ ವಾಚನಾಲಯ ಮತ್ತು ಪುಸ್ತಕ ಭಂಡಾರದ ಸೌಲಭ್ಯವನ್ನು ನೀಡಿದೆ. ಕನ್ನಡ ಕವಿಗಳನ್ನು, ಕಲಾವಿದರನ್ನು ಮತ್ತು ಸಮಾಜ ಕಾರ್ಯಕರ್ತರನ್ನು ಸನ್ಮಾನಿಸುವುದೂ ಸಂಘದ ಒಂದು ಪ್ರಮುಖ ಕಾರ್ಯ ಚಟುವಟಿಕೆಯಾಗಿದೆ.

**ಪ್ರತಿಭಾ ಸ್ಪಂದನ ಯುವ ಸಂಘ**

ಇದು 1989ರಲ್ಲಿ ಸೋಮವಾರಪೇಟೆಯಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಯುವಜನತೆಯನ್ನು ಕ್ರೀಡೆ,ಸಮಾಜಸೇವೆ ಹಾಗೂ ಸಾಂಸ್ಕೃತಿಕ, ಕಾರ್ಯಕ್ರಮಗಳಲ್ಲಿ ತೊಡಗಿಸುವುದು, ನಾಯಕತ್ವ ಮತ್ತು ಮುಂದಾಳುತನವನ್ನು ಯುವಪೀಳಿಗೆಯಲ್ಲಿ ಬೆಳೆಸಿ ಉತ್ತಮ ಸಂಘಟಕರನ್ನಾಗಿ ಮಾಡುವುದು,ಇವೇ ಮುಂತಾದ ಉದ್ದೇಶಗಳನ್ನು ಹೊಂದಿದೆ. ಸಂಘವು ಉಚಿತ ವೈದ್ಯಕೀಯ ತಪಾಸಣಾ ಹಾಗೂ ಔಷಧಿ ವಿತರಣಾ ಶಿಬಿರ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆಗಳು, ಪರಿಸರ ಸಂರಕ್ಷಣೆ, ರಾಷ್ಟ್ರೀಯ ಹಬ್ಬಗಳ ಆಚರಣೆ ಹಾಗೂ ರಾಷ್ಟ್ರೈಕ್ಯ ಮನೋಭಾವವನ್ನು ಬೆಳೆಸುವುದು, ಸಾಕ್ಷರತಾ

ಆಂದೋಲನ, ಇವೇ ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ.

**ಸಿ. ಎಸ್. ಐ. ಗರ್ಲ್ಸ್ ಬೋರ್ಡಿಂಗ್ ಹೋಂ :** ಮಡಿಕೇರಿಯಲ್ಲಿ 1964 ರಲ್ಲಿ ಪ್ರಾರಂಭವಾಗಿದ್ದು, ಮಕ್ಕಳಿಗೆ ಹೊಲಿಗೆ, ತೋಟಗಾರಿಕೆ, ಫಿನೈಲ್ ಮುಂತಾದ ವಸ್ತುಗಳ ತಯಾರಿಕೆ, ಇವೇ ಮುಂತಾದವುಗಳಲ್ಲಿ ವೃತ್ತಿಪರ ತರಬೇತಿಯನ್ನು ನೀಡುತ್ತದೆ. 1990-91ನೇ ಸಾಲಿನಲ್ಲಿ 52 ಮಕ್ಕಳು ಈ ಸಂಸ್ಥೆಯಲ್ಲಿ ತರಬೇತಿಯನ್ನು ಪಡೆದಿದ್ದಾರೆ.

**ಶ್ರೀ ರಾಮಕೃಷ್ಣ ಶಾರದಾಶ್ರಮ :** ಶ್ರೀ ರಾಮಕೃಷ್ಣ ಶಾರದಾಶ್ರಮವು 1927ರಲ್ಲಿ ಪೊನ್ನಂಪೇಟೆಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾಗಿದ್ದ ಸ್ವಾಮಿ ನಿರ್ಮಲಾನಂದರಿಂದ ಸ್ಥಾಪನೆಯಾಯಿತು. ಸ್ವಾಮಿ ವಿವೇಕಾನಂದರು ಸ್ಥಾಪಿಸಿರುವ ಶ್ರೀ ರಾಮಕೃಷ್ಣ ಮಠ ಮತ್ತು ಮಿಷನ್ ಸಂಸ್ಥೆಯ ಒಂದು ಶಾಖೆ ಇದಾಗಿದೆ. ಕೊಡಗಿನ ಕೀರ್ತಿಶೇಷ ಸ್ವಾಮಿ ಶಾಂಭವಾನಂದರು ಈ ಆಶ್ರಮದ ಪ್ರಥಮ ಅಧ್ಯಕ್ಷರಾಗಿದ್ದರು. ಆಶ್ರಮವು ಒಂದು ಸಣ್ಣ ಗುಡಿ ಮತ್ತು ಒಂದು ಪ್ರಾರ್ಥನಾ ಸಭಾಂಗಣವನ್ನು ಹೊಂದಿದ್ದು, ಹಲವಾರು ಧಾರ್ಮಿಕ, ಆಧ್ಯಾತ್ಮಿಕ ಮತ್ತು ನೈತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದೇ ಅಲ್ಲದೆ, ಸಾರ್ವಜನಿಕರಿಗಾಗಿ ಒಂದು ಸಣ್ಣ ಗ್ರಂಥಾಲಯವನ್ನೂ ಹೊಂದಿರುತ್ತದೆ. 1942ರಲ್ಲಿ ಆಶ್ರಮದಲ್ಲಿ ಸ್ವಾಮಿ ಪ್ರಣವೇಶಾನಂದಜೀಯವರಿಂದ ಸ್ಥಾಪಿತವಾದ ಒಂದು ಸಣ್ಣ ದವಾಖಾನೆಯು ಇಂದು 30 ಹಾಸಿಗೆಗಳುಳ್ಳ ವಿವಿಧ ಸೌಲಭ್ಯಗಳನ್ನು ಹೊಂದಿರುವ ಒಂದು ಸುಸಜ್ಜಿತ ಆಸ್ಪತ್ರೆಯಾಗಿದೆ.

**ರೋಟರಿಕ್ಲಬ್, ಮಡಿಕೇರಿ**

ಮಡಿಕೇರಿಯಲ್ಲಿ ರೋಟರಿ ಕ್ಲಬ್ 1950ರಲ್ಲಿ ಪ್ರಾರಂಭವಾಯಿತು. ಕರ್ನಲ್ ಡಿ. ಎಸ್. ಬೇಡಿ ಅವರು ಇದರ ಪ್ರಥಮ ಅಧ್ಯಕ್ಷರಾಗಿದ್ದರು. ಸಂಸ್ಥೆಯು ಹಲವಾರು ಕ್ಷೇತ್ರಗಳಲ್ಲಿ ತನ್ನ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಇದರಲ್ಲಿ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುತ್ತಿರುವುದು, ಅಧ್ಯಾಪಕರನ್ನು ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ಕಳುಹಿಸುವುದು, ಒಬ್ಬ ವಿದ್ಯಾರ್ಥಿಯನ್ನು ಕ್ರಿಕೆಟ್ ತರಬೇತಿಗಾಗಿ ಆಸ್ಟ್ರೇಲಿಯಾಕ್ಕೆ ಕಳುಹಿಸಿರುವುದು, ಅಮೆರಿಕಾ, ಆಸ್ಟ್ರೇಲಿಯಾ ಮತ್ತು ಫಿಲಿಪ್ಪೈನ್ಸ್ ದೇಶಗಳಿಂದ ಸಾಮೂಹಿಕ ಅಧ್ಯಯನ ವಿನಿಮಯ ಕಾರ್ಯಕ್ರಮದಲ್ಲಿ ಬಂದ ಸದಸ್ಯರುಗಳಿಗೆ ಸತ್ಕಾರ ನೀಡಿರುವುದು, ಸಂಸ್ಥೆಯಿಂದ ಇಬ್ಬರು ಸದಸ್ಯರುಗಳನ್ನು ಅಮೇರಿಕಾಕ್ಕೆ ಕಳುಹಿಸಿರುವುದು ಮತ್ತು ನೇತ್ರ ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸಿರುವುದೂ ಸಂಸ್ಥೆಯ ಕೆಲವು ಪ್ರಮುಖ ಸಾಧನೆಗಳಾಗಿವೆ.